(c) The following 16 merchants were given loan by the Market Committee to construct warehouses at the Yeshwanthpur Market Yard as noted hereunder.—

12 Merchants	Rs. 35,000	each
2 -do-	Rs. 27,000	each
1 -do-	Rs. 32,000	
1 -do-	Rs. 22,000	

Besides 44 warehouses from the World Bank assistance and 26 warehouses from the Market Committee fund, were consturcted,

(d) The owners of the warehouses are not affected with financial loss as they are now transacting business in Agricultural Products like Potato and Onion etc., at the existing Warehouses of Yeshwanthapur Market Yard. Besides all the merchants should compulsorily transmit their business at the Yeswanthapur Market Yard itself, as per the order of the Supreme Court dated 17-2-1981. Consequent on this, it has become easy for the owners of the Warehouses to shift heir business transactions without any difficulty. Besides the question of financial loss does not arise when compared the cost of construction with the present rates.

(e) This question does not arise.

ಶ್ರೀ ಡಿ. ಟಿ. ರಾಮು. —ಸ್ವಾಮಿ, ಒಂದು ಬಸ್ ಆಕಸ್ಮಿಕದ ಬಗ್ಗೆ ನಾನು ಮಾತನಾಡಲು ಅವಕಾಶ ಕೊಡಬೇಕೆಂದು ಮೊನ್ನೆ ದಿವಸ ತಮ್ಮಲ್ಲಿ ಕೇಳಿಕೊಂಡಿದ್ದೆ... ...

ಅಧ್ಯಕ್ಷರು.—ತಾವು ನೋಟಿಸನ್ನೇ ಕಳುಹಿಸಿಕೊಟ್ಟಿಲ್ಲ, ಆದ್ದರಿಂದ ತಮಗೆ ಮಾತಾಡಲು ಅವಕಾಶ ಕೊಡುವುದಕ್ಕೆ ಬರುವುದಿಲ್ಲ.

ವಿಷಯ.—ನಿಯಮ 312ರ ಕೆಳಗೆ ಕಳ್ಳಭಟ್ಟಿ ಸಾರಾಯಿ ಕುಡಿತದಿಂದ ಉಂಟಾದ ಮರಣಗಳ ಬಗ್ಗೆ.

†ಶ್ರೀ ಮಳ್ಳೂರು ಆನಂದರಾವ್ (ರಾಜಾಜಿ ನಗರ).—ಸನ್ಮಾನ್ಯ ಅಧ್ಯಕ್ಷರೆ ಕಳೆದ ೩-೪ ದಿವಸಗಳಿಂದ ಎಲ್ಲರ ಮನಸ್ಸನ್ನೂ ಕಲಕಿರತಕ್ಕ ಮಹಾ ದುರಂತ ಏನು ನಡೆದಿದೆ ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಮಾಡಿ ಇದನ್ನು ತಡೆಗಟ್ಟಲಿಕ್ಕೆ ಏನೇನು ಕ್ರಮಗಳನ್ನು ನಾವೆಲ್ಲರೂ ಕೈಗೊಳ್ಳಬೇಕಾದ್ದು ಅಗತ್ಯವೆಂದು ನಾನು ಹೇಳಬಯಸುತ್ತೇನೆ.

ಮೊದಲನೆಯದಾಗಿ ಅಧಿಕೃತವಾಗಿ ಇದುವರೆಗೆ ಈ ಕಳ್ಳಭಟ್ಟಿ ಸಾರಾಯಿ ಕುಡಿದು ಸತ್ತವರ ಸಂಖ್ಯೆ ಎಷ್ಟಾಯಿತೆಂಬುದು ಯಾರಿಗೂ ಗೊತ್ತಿಲ್ಲ. ಪತ್ರಿಕೆಗಳಲ್ಲಿ ೩೩೭ ಎಂದು ಇದ್ದರೆ, ಇನ್ನೊಬ್ಬರು ೫೦೦ ಎಂದು ಹೇಳುತ್ತಾರೆ, ಮತ್ತೊಬ್ಬರು ೬೦೦ ಎಂದು ಹೇಳುತ್ತಾರೆ, ಇನ್ನೂ ಕೆಲವರು ೧ ಸಾವಿರಕ್ಕೂ ಹೆಚ್ಚಾಗಿ ಸತ್ತಿದ್ದಾರೆಂದು ಹೇಳುತ್ತಾರೆ. ಆದ್ದರಿಂದ ನಾನು ತಮ್ಮಲ್ಲಿ ಮೊದಲನೆಯದಾಗಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಇದುವರೆಗೆ ಎಷ್ಟು ಜನ ಸತ್ತಿದ್ದಾರೆ, ಎಂಬುದದ್ನು ತಿಳಿಸಬೇಕು. ಏಕೆಂದರೆ ಇಲ್ಲಿ ಸತ್ತವರು ಎಂದರೆ ಕೆಲವರು ಆಸ್ಪತ್ರೆಗಳಲ್ಲಿ ಸತ್ತಿರಬಹುದು, ಇನ್ನು ಕೆಲವರ. ಆಸ್ಪತ್ರೆಗಳಿಗೆ ಶವಗಳನ್ನು ತೆಗೆದುಕೊಂಡು ಹೋಗಿಲ್ಲದೇ ಇರಬಹುದು. ಇದರಲ್ಲಿ ನಮಗೆ ಲೆಕ್ಕ ಸಿಕ್ಕುವುದಿಲ್ಲ. ಆದ್ದರಿಂದ ಇದುವರೆಗೆ ಸ್ಮಶಾನದಲ್ಲಿ ಎಷ್ಟು ಹೆಣಗಳನ್ನು ದಫನ್ ಮಾಡಿದ್ದಾರೆ ಎಂಬುದರ ಒಂದು ಲೆಕ್ಕವನ್ನು ಮಾನ್ಯ ಮಂತ್ರಿಗಳು ತರಿಸಿಕೊಂಡು ನಮಗೆ ತಿಳಿಸಬೇಕು.

ಇನ್ನು ಎರಡನೆಯದಾಗಿ ನಾನು ಎಲ್ಲಾ ವಿಚಾರಗಳನ್ನೂ ಇಲ್ಲಿ ಉಲ್ಲೇಖ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಕಾರಣ ಎಲ್ಲ ವಿಷಯಗಳೂ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಬಂದಿದೆ. ಇದರಲ್ಲಿ ಏನೇನು ನಡೆದಿದೆ, ಯಾರ್ಯಾರು ಈ ಕೃತ್ಯದಲ್ಲಿ ಷಾಮೀಲಾಗಿದ್ದಾರೆ ಎಂಬುದು ಬಂದಿದೆ ಅದನ್ನೆಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ ಈಗ್ಗೆ 8 ದಿವಸಗಳಿಂದ ಸಾಯುತ್ತಿದ್ದವರ ಸಂಖ್ಯೆ ಬಹುಶ: ಇವತ್ತು ನಿಂತಿರಬಹುದು. ಇಂಥ ಒಂದು ದುರಂತ ನಮ್ಮ ಕರ್ನಾಟಕ ರಾಜ್ಯದ. ಅಥವಾ ಭಾರತದ ಅಥವಾ ಜಗತ್ತಿನ ಬೇರೆ ಯಾವ ಭಾಗಗಳಲ್ಲೂ ನಡೆದಿರಲಾರದೆಂದು ನನಗನಿಸುತ್ತದೆ ಈ ದುರಂತವನ್ನು ಯಾವ ಪದಗಳಿಂದ ನಾನು ವಿವರಿಸಬೇಕೋ ತಿಳಿಯುತ್ತಿಲ್ಲ. ಕರಳು ಕತ್ತರಿಸುತ್ತದೆ ಎಂದು ಹೇಳಬೇಕೋ, ಅಥವಾ ಹೃದಯ ವಿದ್ರಾವಕ ಘಟನೆ ಎಂದು ಹೇಳಬೇಕೋ ಗೊತ್ತಾಗುತ್ತಿಲ್ಲ. ಆದರೆ ನಮ್ಮ ಕೈಯಲ್ಲಾಗುವುದಾದರೂ ಇಷ್ಟೆ. ನೊಂದವರಿಗೆ ಸಹಾನುಭೂತಿಯನ್ನು ವ್ಯಕ್ತಮಾಡು ವುದು, ಅಳಿದುಳಿದವರಿಗೆ, ಅವರ ಬಂಧು ಬಾಂಧವರಿಗೆ ಸ್ವಲ್ಪ ಸಹಾಯ ಮಾಡುವುದು. ಸ್ವಾಮಿ, ನಾನು ಮೊದಲೇ ಹೇಳಿದಂತೆ ಹೆಚ್ಚಿನ ವಿವರಗಳಿಗೆ ನಾನು ಹೋಗುವುದಿಲ್ಲ. ಕೇವಲ ಎರಡು ಮೂರು ವಿಷಯಗಳನ್ನು ಮಾತ್ರ ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಎಷ್ಟು ಜನರು ಸತ್ತಿದ್ದಾರೆ, ಅವರ ಕುಟುಂಬಗಳು ಬೀದಿಪಾಲಾಗಿವೆ. ಇಂಥ ಮಹಾ ಪಾಪಕ್ಕೆ ಯಾರು ಹೊಣೆ ಗಾರರು ? ಈ ಹೊಣೆಗಾರಿಕೆಗೆ ನಾವು ಸರ್ಕಾರದವರನ್ನು ಗುರಿಮಾಡಬೇಕಾಗಿದೆ. ಕೆಲವರು ಸುಲಭ ವಾಗಿ ಹೇಳಬಹುದು, ಯಾರು ಕುಡಿದರು, ಯಾರು ಸತ್ತರು ಅವರೇ ಹೊಣೆಗಾರರು ಎಂದು. ಆದರೆ ನಮಗೆ ಗೊತ್ತಿರುವಂತೆ ಈ ಮಹಾ ಪಾಪಕ್ಕೆ ಮೊದಲನೇ ಹೊಣೆಗಾರರು ಎಂದರೆ ಕಳ್ಳಭಟ್ಟಿ ಯಾರು ತಯಾರು ಮಾಡಿದರು ಮತ್ತು ಯಾರು ಇದನ್ನು ವಿತರಣೆ ಮಾಡಿದರು ಅವರು. ಈ ಕಳ್ಳಭಟ್ಟಿ ಕೇವಲ ಬೆಂಗಳೂರಿನಲ್ಲಿ ಮಾತ್ರ ಅಲ್ಲ ಮೈಸೂರಿನಲ್ಲೂ ಮಾರಾಟವಾಗಿದೆ ಇದು ಇನ್ನೂ ಎಲ್ಲೆಲ್ಲಿಗೆ ಹೋಗಬೇಕಾಗಿತ್ತೋ ಗೊತ್ತಿಲ್ಲ. ಅಂತೂ ರಾಜ್ಯದ ಜನತೆ ಎಲ್ಲರೂ ಶಾಪ ಹಾಕುವುದು ಈ ಕಳ್ಳ ಭಟ್ಟಿ ತಯಾರಕರಿಗೆ ಮತ್ತು ವಿತರಣೆಗಾರರಿಗೆ.

ಸ್ವಾಮಿ, ಇನ್ನೂ ಇದಕ್ಕಿಂತಲೂ ಹೆಚ್ಚಿನ ಪಾಪದ ಹೊಣೆಗಾರಿಕೆ ಹೊತ್ತು ಕೊಳ್ಳುವವರು ಎಂದರೆ ಈ ರೀತಿ ವ್ಯಾಪಕವಾಗಿ ತಯಾರಾಗುತ್ತಿದ್ದ ಕಳ್ಳಭಟ್ಟಿಯನ್ನು ತಡೆಗಟ್ಟುವುದಕ್ಕೆ ಯಾರನ್ನು ನೇಮಿಸಿ ದ್ದರು, ಅವರು ಪೋಲೀಸ್ ಅಧಿಕಾರಿಗಳಿರಬಹುದು, ಇಲ್ಲವೇ ಎಕ್ಸೈಜ್ ಇಲಾಖೆ ಅಧಿಕಾರಿಗಳಿರ ಬಹುದು. ಅವರು ಇದನ್ನು ತಡೆಗಟ್ಟಲು ಉಗ್ರ ಕ್ರಮ ತೆಗೆದುಕೊಳ್ಳುವುದರ ಬದಲು ಈ ಅಕ್ರಮದಲ್ಲಿ ಇವರೂ ಷಾಮೀಲಾಗಿದ್ದಾರೆ. ಇವರು ತಯಾರಕರು, ವಿತರಣೆಗಾರರಿಗಿಂತ ಹೆಚ್ಚಿನ ಪಾಪದ ಹೊಣೆಗಾರ ರೆಂದು ಹೇಳಬೇಕಾಗಿದೆ. ಮತ್ತು ಇವರಿಗೆ ಶಿಕ್ಷೆ ಕೊಡುವುದಾದರೆ ಕಾನೂನು ಪ್ರಕಾರ ಇವರನ್ನು ತೆಗೆದುಕೊಂಡು ಹೋಗಿ ಗಲ್ಲಿಗೆ ಹಾಕಬೇಕು...............

ಮಾನ್ಯ ಅಧ್ಯಕ್ಷರು.—ಗಲ್ಲಿಗೆ ಹಾಕುವುದು ಕಾನೂನಿನಲ್ಲಿ ಇಲ್ಲ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ ಯಾರೋ ಒಬ್ಬ ಇನ್ನೊಬ್ಬನನ್ನು ಕೊಲೆ ಮಾಡಿದ ಅಂದರೆ ಆತನನ್ನು ಗಲ್ಲಿಗೆ ಹಾಕತಕ್ಕ ಶಿಕ್ಷೆ ವಿಧಿಸುತ್ತೀರಿ ಆದರೆ ಇಲ್ಲಿ ಸಾವಿರಾರು ಜನರ ಪ್ರಾಣಕ್ಕೆ ಮಾರಕರಾದವರನ್ನು, ಅಂದರೆ, ಇವರು ಪ್ರತ್ಯಕ್ಷವಾಗಿ ಇರಬಹುದು, ಇಲ್ಲವೇ ಪರೋಕ್ಷವಾಗಿ ಇರಬಹುದು, ಅಂತೂ ಇವರೂ ಕೂಡ ಕೊಲೆಪಾತಕರು ಇವರನ್ನು ಏತಕ್ಕೆ ಸರ್ಕಾರ ದವರು ನೇಣುಹಾಕಬಾರದು ? ಆದರೆ ಬಹಳ ದುಃಖದ ಸಂಗತಿ ಎಂದರೆ, ಸರ್ಕಾರೀ ಅಧಿಕಾರಿ ಗಳೇ ಈ ಅಕ್ರಮದಲ್ಲಿ ಷಾಮೀಲಾಗಿದ್ದಾರೆ, ಇದಕ್ಕೆ ಒಂದು ವ್ಯವಸ್ಥಿತ ಜಾಲವೇ ಇದೆ. ಈ ಘಟನೆ ಹೇಗೆ ಆಯಿತೆಂಬುದು ನಮಗೆಲ್ಲರಿಗೂ ಗೊತ್ತಿದೆ. ಲಾರಿಗಳಲ್ಲಿ ಈ ಬಟ್ಟಿ ಸಾರಾಯಿ ವ್ಯಾಪಕವಾಗಿ ಬರುತ್ತದೆ. ಮನೆ ಮನೆಗಳಲ್ಲಿ ಕಾಫಿ, ಟೀ. ಕುಡಿಯುವಂತೆ ಇದನ್ನು ಕುಡಿಯುತ್ತಿದ್ದಾರೆ. ಇದು ಪೋಲೀಸರರಿಗೂ ಗೊತ್ತಿದೆ, ಕಳ್ಳಭಟ್ಟಿ ತಯಾರಕರಿಗೂ, ವಿತರಣೆಗಾರರಿಗೂ. ಪೋಲೀಸರಿಗೂ ಒಂದು ಒಳ್ಳೆಯ ಅಂಡರ್‌ಸ್ಟ್ಯಾಂಡಿಂಗ್ ಇದೆ. ಇಂಥ ದಿವಸ ನಾವು ಧಾಳಿ ಮಾಡುತ್ತೇವೆ, ನೀವು ಒಂದೆರಡು ಬಾಟಲ್‌ಗಳನ್ನು ಅಲ್ಲಿ ಇಟ್ಟಿರಿ, ಎಂದು ಪೂರ್ವಭಾವಿಯಾಗಿ ಅವರಿಗೆ ತಿಳುವಳಿಕೆ ಕೊಟ್ಟು ಅನಂತರ ಇವರು ಹೋಗಿ ಧಾಳಿ ಮಾಡಿದಂತೆ ನಾಟಕ ಮಾಡುತ್ತಾರೆ. ಇದೇ ಅಲ್ಲದೆ ಅವರನ್ನು ಹಿಡಿದುಕೊಂಡು ಹೋಗಿ ಕೇಸ್ ಹಾಕಿದಂತೆ ಹಾಕುವುದು, ಅನಂತರ ಅವರನ್ನು ಯಾವ ರೀತಿ ಬಿಡಿಸಬೇಕೆಂಬುದು, ಇದಕ್ಕೆಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿರುತ್ತಾರೆ ಯಾರು ಈ ಕಳ್ಳಭಟ್ಟಿಯನ್ನು ತಯಾರು ಮಾಡುತ್ತಾರೆ ಮತ್ತು ಯಾರು ಇದನ್ನು ಮಾರಾಟ ಮಾಡುತ್ತಾರೆ ಅವರು ಇವತ್ತು ನೇರವಾಗಿ ಸಾವಿರಾರು

ಜನರ ಪ್ರಾಣವನ್ನು ಕಳೆದಿದ್ದಾರೆ. ಸ್ಲೋ ಪಾಯಿಸನ್‌ನಿಂದ ಇನ್ನೂ ಎಷ್ಟು ಜನರು ಸತ್ತಿದ್ದಾರೋ ನಮಗೆ ಗೊತ್ತಾಗುತ್ತಿಲ್ಲ. ಇಂಥ ಪಾಪದ ಕೆಲಸವನ್ನು ಮಾಡುವುದಕ್ಕಾಗಿಯೇ ಈ ಜನರು ಹುಟ್ಟಿದ್ದಾರೆ. ನಿಮ್ಮ ಅಧಿಕಾರಿಗಳು ಸಂಬಂಧಪಟ್ಟವರು ಯಾರಿದ್ದಾರೆ. ಅವರು ಇವತ್ತಿನ ದಿವಸ ಮಾಡಬಾರದ ಪಾಪವನ್ನು ಮಾಡಿದ್ದಾರೆ. ಇಂಥ ಅಪರಾಧ ಮಾಡಿರುವವರನ್ನು ಮುಚ್ಚಿಕೊಳ್ಳುವುದರಲ್ಲಿ ಯಾವ ಅರ್ಥವೂ ಇಲ್ಲ. ಆದ್ದರಿಂದ ಈ ಪಾಪದ ಹೊಣೆಯನ್ನು ನಿಮ್ಮ ಅಧಿಕಾರಿಗಳ ಮೇಲೆ ಹಾಕಬೇಕು. ಮೂರನೆಯ ಪಾಪದ ಹೊಣೆಯನ್ನು ನಾವೂ, ನೀವೂ ಎಲ್ಲರೂ ಹೊರಬೇಕಾಗಿದೆ. ಏಕೆಂದರೆ ಈ ಕಳ್ಳಭಟ್ಟಿ ಸಾರಾಯಿಯ ದಂಧೆ ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿಲ್ಲ. ಗ್ರಾಮ ಗ್ರಾಮಗಳಲ್ಲೂ ಇದು ಗೃಹ ಕೈಗಾರಿಕೆಯಂತೆ ನಡೆಯುತ್ತಿದೆ, ಇದನ್ನು ಹಿಡಿದು ತಾವು ಪಟ್ಟಿ ಮಾಡುವುದಾದರೆ ಎಷ್ಟು ಲಕ್ಷ ಜನರು ಈ ಕೆಲಸದಲ್ಲಿ ತೊಡಗಿದ್ದಾರೆಂಬುದು ತಮಗೆ ಗೊತ್ತಾಗುತ್ತದೆ. ಇದು ಕೇವಲ ಒಂದೆರಡು ವರ್ಷಗಳಿಂದ, ಅಥವಾ ಮಾನ್ಯ ಗುಂಡೂರಾಯರು ಅಧಿಕಾರಕ್ಕೆ ಬಂದ ಮೇಲೆ ಎಂದು ಅಲ್ಲ. ಇದು ಕಳೆದ ಹತ್ತಾರು ವರ್ಷಗಳಿಂದಲೂ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ. ಇಂಥ ಅಕೃತ್ಯಗಳನ್ನು ತಡೆಗಟ್ಟಲು ಇರತಕ್ಕ ನಮ್ಮ ಮೇಲೆ ಪಾಪದ ಸಿಂಹಪಾಲು ಇಲ್ಲದಿದ್ದರೂ ಸ್ವಲ್ಪ ಭಾಗವಾದರೂ ನಮ್ಮ ಮೇಲಿದೆ, ಇದಕ್ಕೆ ನಾವೂ ಹೊಣೆಗಾರರಾಗುತ್ತೇವೆ. ಎಂಬುದನ್ನು ಹೇಳಬಯಸುತ್ತೇನೆ. ಸ್ವಾಮಿ ಇವತ್ತು ಸತ್ತಿರುವವರು ಯಾರು? ಬಡ ಜನಗಳು. ನಾವು ವಿಕ್ಟೋರಿಯಾ ಆಸ್ಪತ್ರೆಗೋ ಬೌರಿಂಗ್ ಆಸ್ಪತ್ರೆಗೋ, ಅಥವಾ ಸತ್ತವರ ಮನೆಯ ಹತ್ತಿರವೋ ಹೋಗಿ ಆ ಘೋರ ದೃಶ್ಯವನ್ನು ನೋಡುವುದಕ್ಕಾಗುವುದಿಲ್ಲ. ಪತ್ರಿಕೆಗಳಲ್ಲಿ ಎಲ್ಲ ವಿವರಗಳೂ ಬಂದಿವೆ. ಆದ್ದರಿಂದ ನಾನು ಎಲ್ಲ ವಿಷಯಗಳನ್ನು ವಿವರಿಸಿ ಹೇಳುವುದಕ್ಕೆ ಹೋಗುವುದಿಲ್ಲ.

ಆ ದೃಶ್ಯವನ್ನು ನೋಡಿದರೆ ಬಹುಶಃ ಒಂದು ದಿವಸವೆಲ್ಲ ಊಟ ನಿದ್ರೆ ಒಂದೂ ಬರುವುದಿಲ್ಲ. ಅಲ್ಲಿ ಸತ್ತಿರತಕ್ಕಂಥ ಜನರೆಲ್ಲರೂ ಬಡವರೇ ಆಗಿರುತ್ತಾರೆ. ಸ್ಲಮ್ಸ್‌ನಲ್ಲಿರತಕ್ಕಂಥ ಬಹುತೇಕ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗದವರೋ ಏನೋ ನನಗಂತೂ ಗೊತ್ತಿಲ್ಲ, ಹರಿಜನರೇ ಎಂದು ಹೇಳುತ್ತಿದ್ದರು. ಕುಟುಂಬ ಕುಟುಂಬವೇ ಹೋಗಿರತಕ್ಕಂಥ ಕರುಣ ಕಠೋರ ವಿಚಾರ ಪತ್ರಿಕೆಗಳಲ್ಲಿ ಬಂದಿರುತ್ತದೆ. ಇಂಥ ಬಡ ಜನರನ್ನು ಆಹುತಿ ತೆಗೆದುಕೊಂಡಿರತಕ್ಕಂಥ ದುರ್ಘಟನೆ ನಿಜಕ್ಕೂ ಬಹಳ ವಿಷಾದನೀಯವಾಗಿರುತ್ತದೆ. ಮಾನ್ಯ ಪ್ರಧಾನಿಯವರೂ ಕೂಡ ಈವತ್ತಿನ ದಿವಸ ತಮ್ಮ ಕಳವಳವನ್ನು ವ್ಯಕ್ತಪಡಿಸಿ ತಪ್ಪಿತಸ್ಥರ ಬಗ್ಗೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈವತ್ತಿನ ದಿವಸ ಪತ್ರಿಕೆಗಳಲ್ಲಿ ಉಲ್ಲೇಖನ ಮಾಡುತ್ತಾ ಅಮೀರ್ ಸುಲ್ತಾನ್ ಎಂಬುವನ ಫೋಟೋ ಕೂಡ ಬಂದಿರುತ್ತದೆ. ಆತನು ದೊಡ್ಡ ಪ್ಯಾಲೆಸ್‌ನಂತ ಬಂಗಲೆಯನ್ನು ಹೊಂದಿ ಈ ಧಂದೆಯನ್ನು ನಡೆಸಬೇಕಾದರೆ ಎಷ್ಟು ಲಕ್ಷ ರೂಪಾಯಿಗಳನ್ನು ಈ ಧಂದೆಯಲ್ಲಿ ತೊಡಗಿಸಿರಬೇಕು? ಎಷ್ಟು ಜಾಲ ಇರಬಹುದು ಸ್ವಾಮಿ ಹೇಗೆ ಅಧಿಕಾರಿಗಳನ್ನು ಕೊಂಡು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದ ಎಂಬುದನ್ನು ನಾವು ಹೇಳುವುದಕ್ಕೆ ಸಾಧ್ಯವೇ ಇಲ್ಲ, ಇದನ್ನು ಸರ್ಕಾರವೇ ಹೇಳಬೇಕು. ಪ್ರಧಾನಿಯವರೂ ಕೂಡ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ಅವರ ಉಲ್ಲೇಖನ ಪತ್ರಿಕೆಗಳಲ್ಲಿ ಬಂದಿರುತ್ತದೆ. ನನ್ನ ಪ್ರಕಾರವಾಗಿ ಉಗ್ರ ಕ್ರಮವೆಂದರೆ ಮೊಟ್ಟಮೊದಲನೆಯದಾಗಿ ಎಷ್ಟೆಷ್ಟು ಸಿಬ್ಬಂದಿ ಹಾಕುತ್ತೀರಿ, ಇಡೀ ರಾಜ್ಯದಲ್ಲಿ ಅಂದರೆ ಕೇವಲ ಬೆಂಗಳೂರಿನಲ್ಲಿ ಮಾತ್ರ ಹಾಕಿದರೆ ಸಾಲದು ಈವತ್ತು ಬೆಂಗಳೂರಿನಲ್ಲಿ ಇದ್ದೇವೆ, ಎಚ್ಚೆತ್ತಿದ್ದೇವೆ. ಈವತ್ತು ಈ ಸಭೆಯಲ್ಲಿ ನಾವು ಚರ್ಚೆ ಮಾಡುತ್ತಿದ್ದರೆ ನನಗೆ ಒಂದು ಶಂಕೆ ಬರುತ್ತಿದೆ, ಹೇಗೆಂದರೆ "ನದಿಯ ನೀರು ಹರಿಯುತ್ತಿರುತ್ತದೆ ಅದಕ್ಕೆ ದೊಪ್ಪನೆ ಒಂದು ಕಲ್ಲು ಬಿದ್ದರೆ ಆಲೆ ಆಲೆಯಾಗಿ ಬರುತ್ತದೆ. ಮತ್ತೆ ಕಲ್ಲು ಒಳ ಹೋಗುತ್ತದೆ ಮತ್ತೆ ನದಿ ಪ್ರಶಾಂತವಾಗಿ ಹರಿಯುತ್ತದೆ''. ಅದೇರೀತಿ ಈವತ್ತು ನಾವು ಇಲ್ಲಿ ಚರ್ಚೆ ಮಾಡುತ್ತೇವೆ ಉಗ್ರವಾಗಿ ಟೀಕೆ ಮಾಡುತ್ತೇವೆ, ಪತ್ರಿಕೆಗಳಲ್ಲಿ ಬರುತ್ತದೆ. ಹೀಗೆ ಪತ್ರಿಕೆಗಳಲ್ಲಿ ಎಷ್ಟು ದಿನ ಹೇಳಿದರೂ ಎಷ್ಟು ಟೀಕೆ ಮಾಡಿದರು ಅದೇ ರೀತಿ ವ್ಯವಸ್ಥೆ. ಬಹುಶಃ ಹಿಂದೆ ನಡೆದಂಥ ಘಟನೆಯಿಂದ ಎಚ್ಚೆತ್ತುಕೊಂಡಿದ್ದರ ಈವತ್ತಿನ ದಿವಸ ಮುನ್ನೂರು ಜನ ಆಹುತಿಯಾಗುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಇದನ್ನು ಹೀಗೆಯೇ ಬಿಟ್ಟರೆ ಈವತ್ತು ಮುನ್ನೂರು ಜನರನ್ನು ಆಹುತಿ ತೆಗೆದುಕೊಂಡಿದ್ದು ನಾಳೆ ಎರಡು ಸಾವಿರ ಜನರನ್ನು ಆಹುತಿ ತೆಗೆದುಕೊಳ್ಳುವುದರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ಇದನ್ನು ಬುಡ ಸಮೇತ, ಬೇರು ಸಮೇತ ಕಿತ್ತು ಹಾಕುವುದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇನ್ನೂ ಎಷ್ಟು ಬಡ ಜನರನ್ನು ಇದು ಆಹುತಿ ತೆಗೆದುಕೊಳ್ಳುತ್ತದೋ ಗೊತ್ತಿಲ್ಲ ಸ್ವಾಮಿ.

ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಇದು ವ್ಯಾಪಕವಾಗಿ ಹಬ್ಬಿಕೊಂಡಿರುತ್ತದೆ. ಸಂಜೆ ಹೊತ್ತು ಯಾವುದೇ ಒಂದು ಗ್ರಾಮಕ್ಕೆ ಹೋಗಿ ಸ್ವಲ್ಪ ಗ್ರಾಮದ ಪರಿಸರಣಬಿಟ್ಟು ದೂರದಲ್ಲಿಯೇ ನಿಂತುಕೊಂಡು ನೋಡಿದರೆ ಕೂಲಿ ಮಾಡತಕ್ಕಂಥ ಜನರು ಸಾಲು ಸಾಲುಗಟ್ಟಿಕೊಂಡು ಹೋಗುತ್ತಿರುತ್ತಾರೆ. ಅಷ್ಟೇ ಏತಕ್ಕೆ ನಾನು ವಾಸ ಮಾಡತಕ್ಕ ಸ್ಥಳದ ಪಕ್ಕದಲ್ಲಿಯೇ ಹೋಗಿ ನೋಡಿ, ರಸ್ತೆಯಲ್ಲಿ ಓಡಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಜನರು ಕುಡಿದುಕೊಂಡು ತೂರಾಡಿಕೊಂಡು ಹೋಗುತ್ತಿರುತ್ತಾರೆ. ಇದು ಇಡಿ ರಾಜ್ಯದ ಹತ್ತೊಂಬತ್ತು ಜಿಲ್ಲೆಗಳಲ್ಲಿ ಹಬ್ಬಿರತಕ್ಕಂಥ ಒಂದು ಮೂಲ ವ್ಯಾಧಿ. ಇದನ್ನು ಮೂಲೋತ್ಪಾದನೆ ಮಾಡುವುದಕ್ಕೆ, ನಿಮ್ಮ ಕೈಯಲ್ಲಿ ಸಾಧ್ಯವಾಗುವುದಿಲ್ಲವೇ ಸ್ವಾಮಿ? ತಮಗೆ ಕಾನೂನು ಇದೆ, ಅಧಿಕಾರಿಗಳು ಇದ್ದಾರೆ, ಎಲ್ಲ ಶಕ್ತಿಗಳು ಇರುತ್ತವೆ. ಈ ಎಲ್ಲ ಸರ್ವ ಶಕ್ತಿಯನ್ನು ಉಪಯೋಗಿಸಿ ಕೊಂಡು ಇದು ತಲೆ ಎತ್ತದಹಾಗೆ ಸರ್ವನಾಶ ಆಗುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ನ್ಯಾಯಾಂಗ ವಿಚಾರಣೆಗೆ ಇದನ್ನು ಒಪ್ಪಿಸಿದ್ದೀರಿ. ಇದು ಒಂದು ಸ್ವಾಗತಾರ್ಹ ವಾದ ವಿಚಾರವೆಂದು ಹೇಳುತ್ತೇನೆ. ಮತ್ತೊಂದು ವಿಚಾರ ಸುದ್ದಿ ಬಂದ ತಕ್ಷಣವೇ ಮಾನ್ಯ ಗುಂಡು ರಾಯರು ನಮ್ಮ ಪಕ್ಷದ ಮೀಟಿಂಗ್‌ನಲ್ಲಿ ಇದ್ದರೂ ಅಜೆಂಡವನ್ನು ಪಕ್ಕಕ್ಕೆ ಇಟ್ಟು ಯಾವೊಂದು ವಿಷಯಕ್ಕೆ ಉತ್ತರ ಕೊಡದೆ ಪಾರ್ಟಿ ಮೀಟಿಂಗನ್ನು ಸ್ಥಗಿತಗೊಳಿಸಿ, ಕೂಡಲೇ ಬೋರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆಗಳಿಗೆ ಹೋಗಿ ಮಾನವೀಯತೆಯ ದೃಷ್ಟಿಯಿಂದ ಏನೇನು ಮಾಡಬೇಕೋ ಅದನ್ನೆಲ್ಲ ಮಾಡಿದ್ದೀರಿ, ಪರಿಹಾರ ಕೊಟ್ಟಿದ್ದೀರಿ ಆದೆಲ್ಲ ಮಾಡಿದ್ದಕ್ಕೆ ತಮ್ಮನ್ನು ವೈಯಕ್ತಿಕವಾಗಿ ಅಭಿನಂದಿಸು ತ್ತೇನೆ. ಜೊತೆಗೆ ಡಾಕ್ಟರುಗಳೂ ಕೂಡ ನಿಜವಾಗಿಯೂ ತಮ್ಮ ಶಕ್ತಿಮೀರಿ ಕೆಲಸ ಮಾಡಿದ್ದಾರೆ. ಆಸ್ಪತ್ರೆ ಗಳಲ್ಲಿ ಹಗಲು ರಾತ್ರಿ ಎನ್ನದೆ ಇರತಕ್ಕಂಥ ವ್ಯವಸ್ಥೆಯಲ್ಲಿಯೇ ತಮ್ಮ ಶಕ್ತಿ ಮೀರಿ ದುಡಿದಿದ್ದಾರೆ. ಅವರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ನ್ಯಾಯಾಂಗ ವಿಚಾರಣೆಗೆ ಒಪ್ಪಿಸಿರುತ್ತೀರಿ ನ್ಯಾಯಾಂಗ ವಿಚಾರಣೆ ಆಗಲಿ, ಅದರ ವರದಿ ಬರಲಿ ಏನು ಬರುತ್ತದೋ ನೋಡೋಣ ಮತ್ತೆ ಯಾರು ಯಾರು ಅಧಿಕಾರಿಗಳು ಎಂಬುದಕ್ಕೆ ಈಗಾಗಲೇ ತಾವು ಪಟ್ಟಿ ಮಾಡಿರಬಹುದು, ಅವರನ್ನು ಕೂಡಲೇ ಸಸ್‌ಪೆನ್‌ಷನ್‌ನಲ್ಲಿ ಇಡಬೇಕು. ಇಲ್ಲದಿದ್ದರೆ ಅವರು ಶಾಮೀಲಾಗಿದ್ದಾರೆಂದು ಎದ್ದು ಕಾಣುತ್ತದೆ. ಅವರನ್ನು ಸಸ್‌ಪೆನ್‌ಷನ್‌ನಲ್ಲಿ ಇಡದಿದ್ದರೆ ನಿಮ್ಮ ನ್ಯಾಯಾಂಗ ವಿಚಾರಣೆ ಏನು ಇರುತ್ತದೆ ಅದು ನ್ಯಾಯ ಸಮ್ಮತವಾಗಿ ಆಗಲಿಕ್ಕೆ ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ದೊಡ್ಡ ದೊಡ್ಡ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ಆದ್ದರಿಂದ ಸರ್ಕಾರವನ್ನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ, ಶಾಮೀ ಲಾಗಿರುವ ವ್ಯವಸ್ಥೆಯಲ್ಲಿ ಬಿಚ್ಚಿಟ್ಟು ನ್ಯಾಯಾಂಗ ತನಿಖೆ ನಡೆಸಿದರೂ ಕಂಡಿತವಾಗಿಯೂ ತೃಪ್ತಿಯಾದ ವಿಚಾರಣೆ ಹೊರಬರುವುದಕ್ಕೆ ಸಾಧ್ಯವಾಗುವುದಿಲ್ಲ. ಯಾರು ಯಾರು ಅಧಿಕಾರಿಗಳು ಇದ್ದಾರೆ ಅವರನ್ನು ಕೂಡಲೇ ನೀವು ಸಸ್‌ಪೆನ್‌ಷನ್‌ನಲ್ಲಿ ಇಡಬೇಕು ಅವರು ಎಷ್ಟೇ ದೊಡ್ಡ ಅಧಿಕಾರಿಗಳಿರಲಿ, ಎಷ್ಟೇ ದಕ್ಷ ಅಧಿಕಾರಿಗಳಿರಲಿ ಸಸ್‌ಪೆನ್‌ಷನ್‌ನಲ್ಲಿ ಇಟ್ಟು ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡಿ ವಿಚಾರಣೆ ಮಾಡಿ ಕೂಡಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಚಾರ ಹೇಳುವುದೇನೆಂದರೆ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿದರೆ ಅದೊಂದು ಮೂರ್ಖತನವಾದೀತು. ಏತಕ್ಕೆಂದರೆ ಇದೆಲ್ಲ ಎಕ್ಸ್‌ಪಿರಿಮೆಂಟ್ ಆಗಿಬಿಟ್ಟಿದೆ. ಮೊನ್ನೇ ತಾನೆ ತಮಿಳುನಾಡಿನಲ್ಲಿ ಇದನ್ನು ಜಾರಿಗೆ ತಂದು ವಾಪಸ್ ತೆಗೆದುಕೊಂಡಿರುತ್ತಾರೆ. ನೀವು ಎಷ್ಟು ಕಟ್ಟುನಿಟ್ಟಾಗಿ ಪಾನನಿರೋಧವನ್ನು ಜಾರಿಗೆ ತಂದರೂ ಅದು ಅಷ್ಟೇಮಟ್ಟಿನ ಕಳ್ಳಬಟ್ಟಿ ವ್ಯಾಪಕವಾಗಿ ಹಬ್ಬುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೋಸ್ಕರವಾಗಿ ಸಂಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೆ ತರಬೇಕಂದು ಹೇಳುವ ಸಾಹಸಕ್ಕೆ ನಾನು ಹೋಗುವುದಿಲ್ಲ. ಇದರ ಮೂಲೋತ್ಪಾದನೆಯನ್ನು ಮಾಡಲು ಸಾಧ್ಯವೇ ಇಲ್ಲವೆಂದು ನನ್ನ ಅನುಭವದ ಪ್ರಕಾರ ಹೇಳುತ್ತೇನೆ ನನಗೆ ಹೆಂಡ ಸಾರಾಯಿ ಅದರ ಬಗ್ಗೆ ಸ್ವಲ್ಪವೂ ಕೂಡ ಅನುಭವವಿಲ್ಲ. ಅದಕ್ಕೋಸ್ಕರವಾಗಿ ಸ್ವಲ್ಪ ಮಾತನಾಡುವುದು ಕಷ್ಟ. ಆದರೂ ಕೂಡ ಲೇಮ್‌ಮ್ಯಾನ್ ಆಗಿ ಹೇಳುತ್ತಿದ್ದೇನೆ. ನೀವು ಕುಡಿಯಲಿಕ್ಕೆ ಬ್ರಾಂದಿ ವಿಸ್ಕಿ ಅಂಗಡಿ ಗಳನ್ನು ಓಪನ್ ಮಾಡಿದ್ದೀರಿ, ಆದ್ದರಿಂದ ಅವರು ಕುಡಿಯದೇ ಇರುತ್ತಾರೆಯೇ. ಅಚ್ಚುಕಟ್ಟಾಗಿ ಸಂಜೆ ಹೋಗಿ ಕುಡಿದು ಬರುತ್ತಾರೆ. ನನಗೇನೆ ಉದಾಹರಣೆಗೆ ಕಾಫಿ ಇಲ್ಲದೆ ಇರು ಎಂದರೆ ಒಂದು ನಿಮಿಷ ಕೂಡ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಹೇಳುತ್ತೇನೆ ಸರ್ಕಾರಿ ಹೆಂಡ ಅದು ನನಗೆ ಗೊತ್ತಿಲ್ಲ, ಕನ್ನಡದಲ್ಲಿ ಅದನ್ನು ಸೇಂದಿ ಎಂದು ಕರೆಯುತ್ತಾರೆ. ನನ್ನ ಮಿತ್ರರು ಹೇಳುತ್ತಿದ್ದರು ಅದರ

ಬೆಲೆಯೂ ಹೆಚ್ಚಾಗಿರುವುದರಿಂದ ಕುಡಿಯುವ ಹವ್ಯಾಸ ಇರತಕ್ಕಂಥವರು ಪ್ರಾಣ ಹೋಗುತ್ತದೆಂದರೆ ಹೇಳಿದರೂ ಕೂಡ ಸಮಯಕ್ಕೆ ಏನು ಸಿಕ್ಕುತ್ತದೋ ಅದನ್ನು ಕುಡಿದೇ ಬಿಡುತ್ತಾರೆ. ಅದರ ಬಗ್ಗೆ ಯೋಚನೆಯನ್ನು ಮಾಡುವುದೇ ಇಲ್ಲ. ಇದು ಸ್ವಾಭಾವಿಕವಾಗಿ ಮನುಷ್ಯನ ಒಂದು ವೀಕ್‌ನೆಸ್, ಅದಕ್ಕೋಸ್ಕರವಾಗಿ ದಯವಿಟ್ಟು ಈ ಹೆಂಡದಿಂದ ಬರತಕ್ಕಂಥಹದ್ದು ಪಾಪದ ಹಣ ಎಂದು ಹೇಳುತ್ತಾರೆ ಆ ಪಾಪದ ಹಣವನ್ನು ಆ ಕೆಲಸಕ್ಕೆ ಕೊಟ್ಟುಬಿಡಿ. ಸಬ್‌ಸಿಡೈಸ್ಡ್ ರೇಟ್‌ನಲ್ಲಿ ಮಾರಾಟ ಮಾಡಿ, ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಿ ಅಂದರೆ ಕಳ್ಳಬಟ್ಟಿ ಸೇಂದಿ ಸಾರಾಯಿ ಎಷ್ಟು ಬೆಲೆಗೆ ಸಿಗುತ್ತದೋ ಅದಕ್ಕಿಂತ ಒಂದು ಹತ್ತು ಪೈಸೆ ಕಡಿಮೆ ಬೆಲೆಯಲ್ಲಿ ಸರ್ಕಾರಿ ಸೇಂದಿ ಸರಾಯಿಯನ್ನು ಮಾರಾಟ ಮಾಡಿಬಿಡಿ. ಆಗ ಅದಕ್ಕೆ ಯಾರು ಹೋಗುವುದಿಲ್ಲ. ಹಗಲೆಲ್ಲ ದುಡಿದು, ದುಡಿದು ನೆಮ್ಮದಿಯಿಂದ ಮಲಗಿಕೊಳ್ಳಲಿ. ನಮ್ಮ ಮಿತ್ರರು ಹೇಳಿದರು ಸರ್ಕಾರಿ ಹೆಂಡದಲ್ಲಿಯೂ ಕೂಡ ಅಡಲ್ಟ್ರೇಷನ್ ಮಾಡುತ್ತಾರೆಂದು ನನಗಂತೂ ಗೊತ್ತಿಲ್ಲ ದಯವಿಟ್ಟು ಕಡಿಮೆ ಬೆಲೆಯಲ್ಲಿ ಶುದ್ಧವಾದ ಹೆಂಡವನ್ನು ಕಾರ್ಮಿಕರಿಗೆ ಒದಗಿಸತಕ್ಕಂಥ ಒಂದು ಕೆಲಸವನ್ನು ಸರ್ಕಾರ ಕೈಗೊಳ್ಳಬೇಕೆಂದು ಹೇಳುತ್ತೇನೆ. ಎರಡನೆಯ ಅಂಶವೇನೆಂದರೆ ಯಾರು ಅಧಿಕಾರಿಗಳು ಈ ಕೃತ್ಯಕ್ಕೆ ಒಳಗಾಗಿದ್ದಾರೋ ಅವರನ್ನು ಸಸ್‌ಪೆನ್‌ಷನ್‌ನಲ್ಲಿ ಇಡಬೇಕು ಮತ್ತು ಯಾರು ಬಡ ಕುಟುಂಬದ ಜನ ಯಾರು ದಿಕ್ಕಿಲ್ಲದಂಥ ಜನ ಪತ್ರಿಕೆಗಳಲ್ಲೆಲ್ಲ ಬಂದಿರುತ್ತದೆ ಅವರಿಗೆ ಸರ್ಕಾರದವರು ಏನೆಲ್ಲ ಸಹಾಯ ಮಾಡಲು ಸಾಧ್ಯವೋ ಅದನ್ನೆಲ್ಲ ತಕ್ಷಣವೇ ಮಾಡಬೇಕು. ಈ ಮಧ್ಯೆ ಮಧ್ಯವರ್ತಿಗಳು ಲಪಟಾಯಿಸತಕ್ಕಂಥ ಜನ, ಬೆಂಗಳೂರಿನಲ್ಲಿ ಎಲ್ಲ ರೀತಿಯ ಜನರು ಇದ್ದಾರೆ. ಆದಕಾರಣ ಸಕಾಲದಲ್ಲಿ ಎಲ್ಲ ರೀತಿಯ ಎಚ್ಚರಿಕೆಯನ್ನು ವಹಿಸಿ ಬಡ ಕುಟುಂಬಗಳಿಗೆ ಸಹಾಯ ಮಾಡಬೇಕು. ಕಳ್ಳಬಟ್ಟಿ ಸಾರಾಯಿ ಒಂದು ಚಾನ್ಸ್ ಕೂಡ ಸಿಕ್ಕಬಾರದೆಂದು ಹೇಳಿ ನೊಂದಿರತಕ್ಕಂಥ ಜನರಿಗೆ, ಸತ್ತಿರತಕ್ಕಂಥ ದುರಾದೃಷ್ಟರಿಗೆ ಭಗವಂತನು ಶಾಂತಿಯನ್ನು ಕೊಡಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಲಕ್ಷ್ಮಣ್ (ಗಾಂಧಿನಗರ)—ಸನ್ಮಾನ್ಯ ಸಭಾಧ್ಯಕ್ಷರೇ ಈ ಶತಮಾನದಲ್ಲಿ ನಡೆದಿರತಕ್ಕಂಥ ಅತ್ಯಂತ ಉಗ್ರವಾದ ದುರಂತಗಳೆಂದರೆ ಎರಡು ಒಂದು ಮೂರನೆಯ ತಾರೀಖು ಇಂಗ್ಲೆಂಡಿನ ಲಿವರ್ ಪೋಲ್‌ನಲ್ಲಿ ಭಾರತೀಯ ಸಂಜಾತರಮೇಲೆ ನಡೆಸಿರತಕ್ಕಂಥ ಅತ್ಯಂತ ಘೋರ ಅತ್ಯಾಚಾರ, ಎರಡನೆಯದಾಗಿ ೬ನೇ ತಾರೀಖು ಬೆಂಗಳೂರಿನಲ್ಲಿ ಬಡಜನತೆಗೆ ನಮ್ಮ ಅಬಕಾರಿ ಇಲಾಖೆಯವರು, ಪೋಲೀಸಿನವರು ವಿಷ ಹಾಕಿ ಕೊಟ್ಟಿರತಕ್ಕಂಥ ಒಂದು ಮದ್ಯಸಾರ. ಇದು ಈ ಶತಮಾನದ ಒಂದು ಉಗ್ರವಾದ ದುರಂತವೆಂದು ಹೇಳುವುದರಲ್ಲಿ ನನಗಂತೂ ಯಾವ ವಿಧವಾದ ಅನುಮಾನವೂ ಇಲ್ಲ.

ಮಾನ್ಯ ಅಧ್ಯಕ್ಷರೇ ಕಳ್ಳಭಟ್ಟಿ ವಿಷಯ ಇದು ಹೊಸದೇನು ಇಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿ ಗುಂಡೂರಾಯರ ಸರ್ಕಾರಕ್ಕಾಗಲಿ, ಹಿಂದೆ ಕಳೆದು ಹೋದ ಸರ್ಕಾರಕ್ಕಾಗಲಿ ಇದು ಗೊತ್ತಿಲ್ಲದ ವಿಷಯವಲ್ಲ. ನಾನು ೧೯೭೮ರಲ್ಲಿ ಗಾಂಧಿನಗರದ ಕ್ಷೇತ್ರದಲ್ಲಿ ಚುನಾಯಿತನಾಗಿ ಬಂದಾಗಿನಿಂದ ಕಳ್ಳಬಟ್ಟಿ ವಿಷಯದಲ್ಲಿ ಹೇಳುತ್ತಲೇ ಬಂದಿರುತ್ತೇನೆ. ಮಾನ್ಯ ಕಮಿಷನರ್‌ರವರಿಗೂ ಈ ವಿಷಯ ಗೊತ್ತಿರುತ್ತದೆ. ಲಕ್ಷಣಪುರಿ, ಒಡ್ಡರನಗರ, ರೈಲ್ವೆ ಪ್ಯಾರಲಲ್ ಲೈನ್ ಇವುಗಳು ಗಾಂಧಿನಗರ ಕ್ಷೇತ್ರದಲ್ಲಿ ಬರತಕ್ಕಂಥ ಏರಿಯಾ ಇಲ್ಲಿ ನಡೆಯುತ್ತಿರುವಂಥ ಕಳ್ಳಬಟ್ಟಿ ಅತ್ಯಮೋಘವಾದುದು. ನಾನು ಗೆದ್ದು ಬಂದ ಹೊಸದರಲ್ಲಿ ಇದನ್ನು ನಿಲ್ಲಿಸಬೇಕು ಎನ್ನುವ ಉದ್ದೇಶದಿಂದ ನಾನಾ ರೀತಿಯ ಪ್ರಯತ್ನಪಟ್ಟು ಶೇಷಾದ್ರಿಪುರಂ ಪೋಲೀಸ್ ಸ್ಟೇಷನ್‌ನಲ್ಲಿದ್ದ ಸಬ್ ಇನ್ಸ್‌ಪೆಕ್ಟರ್ ಅವರನ್ನು ಕರೆದುಕೊಂಡು ರಾತ್ರೋರಾತ್ರಿ ರೈಡ್ ಮಾಡಿ ಕಳ್ಳಬಟ್ಟಿಯ ಪೀಪಾಯಿಗಳನ್ನು ಆಗ ಪೋಲೀಸ್ ಸ್ಟೇಷನ್‌ಗೆ ತಂದು ಹಾಕಲಾಯಿತು. ಆ ಒಂದು ಕಳ್ಳಬಟ್ಟಿ ಪ್ರಭಾವ ಎಷ್ಟು ಇತ್ತು ಎಂದರೆ. ಒಂದು ಉದಾಹರಣೆಯನು ಹೇಳುತ್ತೇನೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಪರಿಶೀಲನೆ ಮಾಡಲಿ ಇದು ೧೯೭೮ರಲ್ಲಿ ನಡೆದ ವಿಷಯ. ಶಿಸ್ತಿನಿಂದ ಕಾರ್ಯನಿರ್ವಹಿಸಿದ ಆ ಸಬ್ ಇನ್ಸ್‌ಪೆಕ್ಟರ್ ಗತಿ ಏನಾಯಿತು? ಆತನನ್ನು ಯಾವುದೋ ಕಾರಣದ ಮೇಲೆ ಸಸ್ಪೆಂಡ್‌ಮಾಡಿ ಮನೆಗೆ ಕಳುಹಿಸಲಾಯಿತು. ಕಳ್ಳಬಟ್ಟಿ ಖದೀಮರ ಪ್ರಭಾವ ಎಷ್ಟು ಇದೆ ಎಂಬುದನ್ನು ಇದರಿಂದಲೇ ತಿಳಿದುಕೊಳ್ಳಬಹುದು. ಆತ ಒಂದು ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಹೋಗಿ ಜೀವನದ ಆಸೆ ಬಿಟ್ಟು ಒಂದು ಉತ್ತಮ ಕಾರ್ಯ ಮಾಡಿದ್ದಕ್ಕೆ ಆತನನ್ನು ಸಸ್ಪೆಂಡ್ ಮಾಡಲಾಯಿತು. ಇಂತಹ ಪ್ರಭಾವಯುತವಾಗಿರುವಾಗ ಕಳ್ಳಬಟ್ಟಿ ಖದೀಮರು ಇರುವಾಗ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದ ನಾನು ಮಾನ್ಯ ಮಂತ್ರಿಯವರಿಗೆ ಹೇಳುತ್ತೇನೆ. ಈ ಒಂದು ಕಳ್ಳಬಟ್ಟಿ ದುರಂತ ಬಡವರ ಒಂದು ತಪ್ಪಿನಿಂದ ಆದುದು ಅಲ್ಲ, ಬುದ್ಧಿವಂತರು ಎನಿಸಿಕೊಂಡಿರತಕ್ಕ

ಸಾವಿರಾರು ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿರತಕ್ಕಂತಹ ಸಾವಿರಾರು ರೂಪಾಯಿ ಸಂಪಾದನೆ ಮಾಡುತ್ತಿರತಕ್ಕಂತಹ ಕಳ್ಳ ಖದೀಮರು ಅವರ ಕೈಯಿಂದಲೇ ಮಾಡಿರತಕ್ಕ ಕೊಲೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮೂರು ನೂರು ಚಿಲ್ಲರೆ ಜನರು ಸಾಯುವುದಕ್ಕೆ ಮೂಲ ಕಾರಣ ಏನು ? ಕಾರಣಕರ್ತರು ಯಾರು ? ಸರ್ಕಾರದ ಒಂದು ಸಂಪಾದನೆಯ ಮುಖವನ್ನು ನೋಡಲು ಹೋಗಿ ಅಧಿಕೃತವಾಗಿ ಮಾರಾಟವಾಗುವಂತಹ ಮಾನ್ಯ ಮಳ್ಳೂರು ಆನಂದರಾವ್ ಪ್ರಕಾರ ಸರ್ಕಾರಿ ಸಾರಾಯಿಯ ಬೆಲೆಯನ್ನು ೩ ರೂಪಾಯಿಯಿಂದ ೫-೪೦ ರೂ. ಗಳಿಗೆ ಏರಿಸಲಾಯಿತು. ಇದು ಬಡವರು ಕುಡಿಯತಕ್ಕ ಸಾರಾಯಿಯಾದರೂ ಇದರ ಬೆಲೆ ಏರಿಕೆಯಾದ್ದರಿಂದ ಆ ಬಡಜನ ಲೋಕಲ್ ಮೇಡ್ ಕಳ್ಳಬಟ್ಟಿ ಸಾರಾಯಿಯನ್ನು ಕುಡಿಯಲು ಶುರು ಮಾಡಿದರು. ಸರ್ಕಾರ ಒಂದು ಲಾಭ ವನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು ನೋಡಬಾರದು. ತಮಿಳು ನಾಡಿನಲ್ಲಿ ಈ ತೊಂದರೆಗಳನ್ನೆಲ್ಲಾ ನೋಡಿ ಅಲ್ಲಿನ ಮುಖ್ಯಮಂತ್ರಿಯವರಾದ ಎಂ.ಜಿ ಆರ್. ಅವರು ಅಲ್ಲಿನ ಅರಾಕ್ ಮೇಲಿನ ಅಬಕಾರಿ ತೆರಿಗೆಯನ್ನು ತೆಗೆದುಹಾಕಿದ್ದಾರೆ. ಬಡವರಿಗೆ ಈ ಪಾನೀಯ ಒಂದು ಕಾಲು ರೂಪಾಯಿಗೆ ಸಿಕ್ಕಿ ಅವರು ತೃಪ್ತಿಪಡುತ್ತಿರುವುದರಿಂದ ಆ ರಾಜ್ಯದಲ್ಲಿ ಕಳ್ಳಭಟ್ಟಿ ಕಳೆದ ಒಂದೂವರೆ ವರ್ಷದಿಂದ ನಿಂತು ಹೋಗಿದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಬಡಜನರ ಉದ್ಧಾರಕ್ಕಾಗಿ ೨೦ ಅಂಶಗಳ ಕಾರ್ಯ ಕ್ರಮದ ಕೆಳಗೆ ೪೦ ರೂಪಾಯಿಗಳ ವೃದ್ಧಾಪ್ಯ ವೇತನ ಕೊಡುತ್ತಿದ್ದು ಆ ಹಣದಿಂದ ಅವರು ಕಳ್ಳಬಟ್ಟಿ ಕುಡಿಯುತ್ತಾರೆಯೋ ಹೊರತು ಬೇರೆ ಕಾರ್ಯಗಳಿಗೆ ಅದನ್ನು ಉಪಯೋಗಿಸುತ್ತಿಲ್ಲ. ಆದ್ದರಿಂದ ಸರ್ಕಾರಿ ಅರಾಕ್ ಮೇಲಿನ ಅಬಕಾರಿ ತೆರಿಗೆಯನ್ನು ತೆಗೆದುಹಾಕಿ ಬಡಜನರ ಉದ್ಧಾರವನ್ನು ಸರ್ಕಾರ ಕೈಗೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ಈ ಕಳ್ಳ ಖದೀಮರನ್ನು ಮಾತ್ರ ಬಿಡಬೇಡಿ ಎಂದು ನಾನು ಈ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಕಳ್ಳ ಖದೀಮತನದಲ್ಲಿ ನಾನಾ ತರ ಇದೆ. ಇದನ್ನೆಲ್ಲಾ ಹೇಳುತ್ತಾಹೋದರೆ ಬಹಳ ನಿಷ್ಠೂರವಾಗಿ ನಾನು ಸರ್ಕಾರವನ್ನು ಒಂದು ಇಕ್ಕಟ್ಟಿಗೆ ಸಿಕ್ಕಿಸಿದ ಪರಿಸ್ಥಿತಿಗೆ ಸಿಕ್ಕಿಸಿದಹಾಗಾಗುತ್ತದೆ. ಆ ಪರಿಸ್ಥಿತಿಗೆ ಸರ್ಕಾರವನ್ನು ಸಿಕ್ಕಿಸಲು ನನಗೆ ಇಷ್ಟವಿಲ್ಲ. ಆದ್ದರಿಂದ ಈ ಪಾನೀಯದ ಮೇಲಿನ ಅಬಕಾರಿ ತೆರಿಗೆಯನ್ನು ತೆಗೆದು ಈ ಬಡವರು ಕುಡಿಯುವ ಪಾನೀಯವು ಶುದ್ಧವಾಗಿ ಕಡಿಮೆ ಬೆಲೆಗೆ ಸಿಗುವಂತೆ ಆಗಬೇಕೆಂದೂ, ಇದರಿಂದ ಆ ಬಡವರ ಉದ್ಧಾರ ಮಾಡಬೇಕೆಂದೂ ಹಾಗೂ ಇನ್ನೆಂದೂ ಈ ರೀತಿಯ ಘಟನೆಗಳು ಆಗದಂತೆ ನೋಡಿಕೊಳ್ಳ ಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀಮತಿ ಎಸ್. ಪ್ರಮೀಳಾ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೆ, ಈ ದಿನ ಬಹಳ ದುಃಖಕರವಾದ ಸಂಗತಿಯ ಬಗ್ಗೆ ನಾವು ಮಾತನಾಡಬೇಕಾಗಿದೆ. ಈ ಬಗ್ಗೆ ಮಾತನಾಡುವುದಕ್ಕೆ ಸದನದ ಎಲ್ಲ ಸದಸ್ಯರಿಗೂ ಆಸಕ್ತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಡೀ ಭಾರತ ದೇಶದಲ್ಲಿ ಇವತ್ತಿನ ದಿವಸ ಯಾವ ಒಂದು ಪಾನನಿರೋಧವನ್ನು ತರುವುದಕ್ಕೆ ಹೋರಾಟ ಮಾಡುತ್ತಿದ್ದಾರೋ ಅದರ ಕಣ್ಣಾರೆ ಚಿತ್ರವನ್ನು ತರುವುದಕ್ಕೆ ಪ್ರಯತ್ನ ಮಾಡಬೇಕೆಂದಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಇದರ ಬಗ್ಗೆ ಸರ್ಕಾರ ಸರ್ವ ಪ್ರಯತ್ನ ಮಾಡುತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇವರು ಏಕೆ ಹೀಗೆ ಕುಡಿದು ಸಾಯುತ್ತಾರೋ ಗೊತ್ತಾಗುತ್ತಾ ಇಲ್ಲ ಎಂದು ಮಾನ್ಯ ಲಕ್ಷ್ಮಣ್ ಅವರು ಹೇಳಿ ದರು. ನನಗಾದರೂ ಅನಿಸುತ್ತದೆ, ಈ ದೇಶದ ಪರಿಸ್ಥಿತಿಯನ್ನು ನೋಡಿಕೊಂಡು ದುಡಿದು ಸಾಯುವು ದಕ್ಕಿಂತ ಕುಡಿದು ಸಾಯುವುದೇ ಲೇಸು ಎಂದು ಏನಾದರೂ ಕುಡಿದು ಅದರ ಅಮಲಿನಿಂದ ಸಾಯುತ್ತಿ ದ್ದಾರೋ ಏನೋ ಅನಿಸುತ್ತಿದೆ. ದಿವಸ ದಿವಸ ಆಗುತ್ತಾ ಆಗುತ್ತಾ ಇರತಕ್ಕ ಪರಿಸ್ಥಿತಿಯನ್ನು ನೋಡಿ ದರೆ, ಕೇವಲ ಮೂರು ಅಥವಾ ನಾಲ್ಕು ತಿಂಗಳ ಹಿಂದೆ ಇದೇ ಸಭೆಯಲ್ಲಿ ಕೊಳಚೆ ಪ್ರದೇಶಗಳ ನಿರ್ಮೂಲ ನದ ವಿಚಾರ ಬಂದಾಗ ನಾನು ಕಳ್ಳಬಟ್ಟಿ ಸಾರಾಯಿ ಬಗ್ಗೆ, ಪ್ರತಿಯೊಂದೂ ಸ್ಲಮ್‌ಗಳಲ್ಲಿ ಆಗುತ್ತಿರತಕ್ಕ ವಿಚಾರವನ್ನು ತಿಳಿಸಿದ್ದೇನೆ. ಈ ದೇಶದಲ್ಲಿ, ಈ ಕರ್ನಾಟಕ ರಾಜ್ಯದಲ್ಲಿ ಒಬ್ಬ ಮಹಿಳೆ ಇದ್ದಾಳೆ, ಅವಳು ಕಳ್ಳಬಟ್ಟಿ ಸಾರಾಯಿ ಮಾರುತ್ತಿದ್ದಾಳೆ ಎಂದು ಹೇಳಿದ್ದೆ. ಆದರೆ ಅವಳ ಹತ್ತಿರಕ್ಕೆ ಪೋಲೀಸಿನವರೂ ಸಹಾ ಹೋಗುವುದಕ್ಕೆ ಹೆದರುತ್ತಾರೆ. ಆಗ ನಾನು ಹೇಳಿದ್ದಾಗ ಪರಿಸ್ಥಿತಿಯನ್ನು ಸರಿಪಡಿಸಿದ್ದರೆ ಈ ಬಡಜನ ಸಾಯುವ ಪರಿಸ್ಥಿತಿ ಬರುತ್ತಾ ಇರಲಿಲ್ಲ ಎಂದು ನಾನು ಹೇಳುತ್ತಿದ್ದೇನೆ. ತಕ್ಷಣ ಎಚ್ಚೆತ್ತು ಕೊಳ್ಳಿ, ಆಕೆಯನ್ನು ಜೈಲಿಗೆ ಹಾಕಿ ಎಂದು ನಾನು ಹೇಳಿದ್ದೆ. ಆಕೆಯ ಮೇಲೆ ಇದುವರೆವಿಗೂ ಕ್ರಮ ಕೈಗೊಂಡಿಲ್ಲ. ಅದರ ಒಂದು ಪರಿಣಾಮವನ್ನು ನಾವು ಈಗ ಅನುಭವಿಸುತ್ತಿದ್ದೇವೆ. ಕೇವಲ ೩ ವಾರ ಗಳ ಹಿಂದೆ, ಯಾವ ಒಬ್ಬ ಮಹಿಳೆ ಕಳ್ಳಬಟ್ಟಿಯಲ್ಲಿ ತೊಡಗಿದ್ದಾಳೆ, ಅವಳು ಇರುವ ಕಾಡಗೊಂಡನ

ಹಳ್ಳಿಗೆ ನಮ್ಮವರೇ ಆದ ಒಬ್ಬ ಶಾಸಕರು ಪೋಲೀಸಿನವರು ಅವಳು ಕೆಲಸ ಮಾಡುತ್ತಿರತಕ್ಕಂತಹ ಜಾಗಕ್ಕೆ ಕರೆದುಕೊಂಡು ಹೋಗಿ ಅರೆಸ್ಟ್ ಮಾಡಿ ಎಂದು ಹೇಳಿದರೂ ಕೂಡಾ ಆಕೆಯನ್ನು ಅರೆಸ್ಟ್ ಮಾಡುವುದಕ್ಕೆ ಹಿಂಜರಿದು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಅದರ ಪರಿಣಾಮ ಏನಾಯಿತು? ಕೇವಲ ಅರ್ಧ ಗಂಟೆಯೊಳಗೆ ಆಕೆಯನ್ನು ಮನೆಗೆ ಕಳುಹಿಸಿದ್ದಾರೆ. ಆ ಮಹಿಳೆಯನ್ನು ಬಿಟ್ಟ ನಂತರ ಈ ಒಂದು ಪರಿಸ್ಥಿತಿ ಬಂದಿದೆ ಎಂದು ನಾನು ದುಃದಿಂದ ಹೇಳಬೇಕಾಗಿದೆ. ಪೋಲೀಸರು ಯಾವ ಕಾರಣಕ್ಕಾಗಿ ಬಿಟ್ಟರು? ರಾಜಕೀಯ ಪ್ರಭಾವ ಇದೆಯೋ ಅಥವಾ ಬೇರೆ ಯಾವುದಾದರೂ ಕಾರಣ ಇದೆಯೋ ಎಂಬುದನ್ನು ಯೋಚನೆ ಮಾಡಬೇಕು. ಈ ಮಹಿಳೆ ಬಾಗಲೂರು ಲೇಔಟ್‌ನಲ್ಲಿ ಒಂದು ಎಕರೆ ಕಾರ್ಪೊರೇಷನ್ ಜಾಗವನ್ನು ಅತಿಕ್ರಮವಾಗಿ ಆಕ್ರಮಿಸಿಕೊಂಡು ತನ್ನ ಕೆಲಸ ನಡೆಸುತ್ತಿರುವುದನ್ನು ತಿಳಿದ ಕಾರ್ಪೊರೇಷನ್ನಿನ ಅಸಿಸ್ಟೆಂಟ್ ಇಂಜಿನಿಯರ್ ಒಬ್ಬರು ಅನಧಿಕೃತವಾಗಿ ಅಲ್ಲಿ ಕಟ್ಟಡ ಕಟ್ಟಿದ್ದಕ್ಕಾಗಿ ಅವರು ಕಂಪ್ಲೇಂಟ್ ಕೊಟ್ಟರು. ಈಕೆ ಎಷ್ಟು ಪ್ರಭಾವಯುತ ಮಹಿಳೆ ಎಂದರೆ. ಮಾರನೆಯ ದಿವಸ ಆ ಎಂಜಿನಿಯರ್ ತಾನು ಕೊಟ್ಟ ಕಂಪ್ಲೇಂಟನ್ನು ವಾಪಸ್ಸು ತೆಗೆದುಕೊಂಡರು. ಈ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈಕೆ ಕಾರ್ಪೊರೇಷನ್ನಿನ ಈ ಒಂದು ಎಕರೆ ಜಾಗದಲ್ಲಿ ಕಳ್ಳಬಟ್ಟಿ ಸಾರಾಯಿ ತಯಾರಿಕೆ ನಡೆಸುತ್ತಿದ್ದಾಳೆ. ಈಕೆಯ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಇವತ್ತು ಬೆಂಗಳೂರಿನಲ್ಲಿ ಪ್ರತಿಯೊಬ್ಬ ಮಹಿಳೆಯೂ ಕೇಳುತ್ತಿದ್ದಾರೆ. ಈ ವಿಚಾರದ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ? ನನಗೆ ಸುದ್ದಿ ಬಂದಿರುವ ಪ್ರಕಾರ ಈ ಒಬ್ಬ ಮಹಿಳೆ ಕಾಡಗೊಂಡನಹಳ್ಳಿಯಲ್ಲಿ ಇರತಕ್ಕ ಪೋಲೀಸ್ ಸ್ಟೇಷನ್‌ನ ಸಿಬ್ಬಂದಿ ಹಾಗೂ ಅಲ್ಲಿಗೆ ಸೇರಿದ ಹಿರಿಯ ಅಧಿಕಾರಿಗಳಿಗೆ ತಿಂಗಳೊಂದಕ್ಕೆ ೩೦ ಸಾವಿರ ರೂಪಾಯಿಯನ್ನು ಕೊಡತಕ್ಕ ಜಾಯಮಾನ ಇಟ್ಟುಕೊಂಡು ಬಂದಿದ್ದಾಳೆ. ಹಗಲಿರುಳೂ ಕೊಟ್ಟುಕೊಂಡು ಬರುತ್ತಿದ್ದಾಳೆ. ಇದರಿಂದಲೇ ಏನೋ ಈಕೆಯನ್ನು ಕಾಪಾಡಿಕೊಂಡು ಬರುತ್ತಿರುವುದು ಎಂದು ನಾನು ಹೇಳುತ್ತೇನೆ. ಇದೇ ರೀತಿ ನನ್ನ ಕ್ಷೇತ್ರದಲ್ಲಿರತಕ್ಕ ಶ್ರೀಮತಿ ಶಾರದಮ್ಮ, ಸರೋಜ, ಭಟ್ಟಿ ನಾರಾಣಪ್ಪ ಹಾಗೂ ಪಾಷಾ ಮೊದಲಾದವರ ಹೆಸರಗಳನ್ನು ಹಲವಾರು ಭಾರಿ ಕೊಟ್ಟಿದ್ದರೂ ಕೂಡಾ ಇವತ್ತು ಅವರ ಮೇಲೆ ಏನೂ ಕ್ರಮ ಕೈಗೊಂಡಿಲ್ಲ. ಎರಡು ದಿವಸದಿಂದ ಅವರು ತಮ್ಮ ಕಸುಬನ್ನು ನಿಲ್ಲಿಸಿದ್ದರು. ನಿನ್ನೆಯ ದಿವಸ ಸರೋಜ ಎನ್ನತಕ್ಕವಳು ಲಾಲ್‌ಬಾಗಿನಲ್ಲಿನ ೪ನೇ ಕ್ರಾಸ್‌ನ ಜಿ.ಕೆ.ಜಿ. ಗಾರ್ಡನ್ನಿನಲ್ಲಿ ಕಳ್ಳಬಟ್ಟಿ ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾಳೆ ಎಂದರೆ ಇದರಲ್ಲಿ ಪೋಲೀಸಿನವರೂ ಕೂಡಾ ಶಾಮೀಲಾಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಮೊನ್ನೆ ತಾವು ಹಲವಾರನ್ನು ಅರೆಸ್ಟ್ ಮಾಡಲಾಯಿತೆಂದು ಹೇಳಿದಿರಿ. ಇದರ ಪರಿಣಾಮ ಏನಾಯಿತು? ಅವರ ಮೇಲೆ ಏನು ಕೇಸ್ ಹಾಕಲಾಗಿದೆ. ಇವರು ಪೋಲೀಸ್ ಆಕ್ಟನ್ನು ವಯೋಲೇಟ್ ಮಾಡಿದ್ದಾರೆಂದು ಕೇಸ್ ಹಾಕಿದ್ದೀರಾ? ಮ್ಯಾಜಿಸ್ಟ್ರೇಟ್ ಮುಂದೆ ಹೋಗಿ ಕೇಸ್ ಹಾಕಿದ್ದೀರಿ. ಮಾರನೇ ದಿವಸ ಅವರು ಬೇಲ್ ಮೇಲೆ ಬಿಡಿಸಿಕೊಂಡು ಬಂದಿದ್ದಾರೆ. Have they not committed an attempt to Murder? ಅಟೆಂಟ್ ಮಾಡಿರತಕ್ಕ ಕೇಸನ್ನೇನಾದರೂ ಹಾಕಿದ್ದೀರಾ? ೩೦೭ರ ಮೇಲೆ ಕೇಸ್ ಹಾಕಿದ್ದರೆ ನಾನ್ ಬೈಲೆಬಲ್ ಕೇಸ್ ಆಗುತ್ತಾ ಇತ್ತು. ಅವರನ್ನು ಬಿಡಿಸಿಕೊಂಡು ಬರುವುದಕ್ಕೆ ಆಗುತ್ತಾ ಇರಲಿಲ್ಲ. ಯಾವ ಪರ್ಪಸ್‌ಗೆ ಕೇಸ್ ಹಾಕಿದ್ದೀರಿ ಇಂತಹವರನ್ನು ಅರೆಸ್ಟ್ ಮಾಡಿದ್ದೇವೆ ಎಂದು ಹೇಳಿ ಸಾಲಂ ಸಾಲಾಗಿ ತೆಗೆದುಕೊಂಡು ಹೋಗಿ ಮ್ಯಾಜಿಸ್ಟ್ರೇಟ್ ಮುಂದೆ ನಿಲ್ಲಿಸಿದಿರಿ. ಇವರು ಬೇಲ್ ಮೇಲೆ ಬಿಡಿಸಿಕೊಂಡು ಬಂದಿದ್ದಾರೆ. ನಾನು ಹೇಳುತ್ತೇನೆ, ಇವರ ಮೇಲೆ ಸರಿಯಾಗಿ ಕೇಸ್ ಹಾಕಿ ಕ್ಯಾನ್ಸಲೇಷನ್ ಆಫ್ ಬೇಲ್ ಆಗಬೇಕು ಎಂದು. ಇದುವರೆವಿಗೂ ಅಪೀಲ್ ಹಾಕಿದ್ದಾರಾ ಎಂದು ಕೇಳುತ್ತೇನೆ. ಇದುವರೆವಿಗೂ ಹಾಕಿಲ್ಲ. ಮಾರಿಮುತ್ತು ಎನ್ನುವ ಆಕೆ ರಾಣಿ ಎಂದು ಅಂದುಕೊಂಡಿದ್ದಾಳೆ. ಈಕೆ ಹೊರಬಂದವಳೇ, ನೋಡಿದಿರಾ ಹೇಗೆ ಬಿಡಿಸಿಕೊಂಡು ಬಂದಿದ್ದೇನೆ ಎಂದು ಹೇಳುತ್ತಿದ್ದಾಳೆ. ಇನ್ನೂ ಹಲವಾರು ವರ್ಷಗಳು ಇಂತಹವರನ್ನು ಹೊರಗೆ ಬಿಟ್ಟರೆ, ಕಳ್ಳಬಟ್ಟಿ ಸಾರಾಯಿ ಕಥೆ ಮುಗಿಯುವುದಿಲ್ಲ. ಜನರಿಗೆ ವಿಷಪಾನವಾಗುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಈ ಬಗ್ಗೆ ಸಮಗ್ರವಾದ ಕಾನೂನನ್ನು ತರಬೇಕೆಂದು ಹೇಳುತ್ತೇನೆ. ಇನ್ನು ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ ಅವರು ಟೆಂಪರೆನ್ಸ್ ಬೋರ್ಡಿನ ಅಧ್ಯಕ್ಷರಾಗಿದ್ದರು. ಇವರ ಅಧ್ಯಕ್ಷತೆಯಲ್ಲಿ ಕಳೆದ ಒಂದೊವರ ವರ್ಷದಿಂದ ಇದು ಸತತವಾಗಿ ನಡೆದುಕೊಂಡು ಬಂದಿದೆ. ಪಾನನಿರೋಧ ಮಂಡಲಿ ಬೇಡ ಎಂದು ನೀವು ತೆಗೆದು ಹಾಕಿದಿರಿ. ಪರಿಣಾಮ ಏನಾಯಿತು ಇವರು ಇದ್ದಾಗ ಇಡೀ ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಭಾಗಗಳಲ್ಲಿನ ಮನೆಮನೆಗಳ ಬಾಗಿಲಿಗೆ ಹೋಗಿ ಕುಡಿಯುವುದು ತಪ್ಪು ಎಂದು ಹೇಳಿ ಮನಸ್ಸನ್ನು ಪರಿವರ್ತನೆ ಮಾಡತಕ್ಕ ಕೆಲಸವನ್ನು ಮಾಡುತ್ತಿದ್ದರೆ. ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಲೋಕಸಭೆಯಲ್ಲಿ "Temperance

is the only panacia'' ಎಂದು ಹೇಳಿದ್ದಾರೆ. ಈ ಬಗ್ಗೆ ನಮ್ಮ ಸರ್ಕಾರ ಏನು ಮಾಡುತ್ತಾ ಇದೆ? ಈ ಡಿಪಾರ್ಟ್‌ಮೆಂಟನ್ನು ತೆಗೆದು ವಾರ್ತಾ ಇಲಾಖೆಗೆ ಸೇರಿಸಲಾಗಿದೆ. ಈ ಬಗ್ಗೆ ಆ ವಾರ್ತಾ ಇಲಾಖೆಯವರು ಏನೂ ಕೂಡ ಕೆಲಸವನ್ನು ಮಾಡಿಲ್ಲ. ಈಗ ಏನೋ ಮೂರು ನೂರು ಚಿಲ್ಲರೆ ಜನರು ಸತ್ತಿದ್ದಾರೆ ಎಂದು ಹೇಳಿದರೂ ಕೂಡಾ ಕನಿಷ್ಠ ಎರಡು ಸಾವಿರಕ್ಕೂ ಮೇಲ್ಪಟ್ಟು ಜನರು ಬಾಗಲೂರು ಲೇಔಟ್‌ನಲ್ಲಿ, ಸುತ್ತಮುತ್ತಲ ಹಳ್ಳಿಗಾಡುಗಳಲ್ಲಿ, ಬೆಂಗಳೂರು ಹಾಗೂ ಸುತ್ತಮುತ್ತ ಇರತಕ್ಕ ೧೦–೧೨ ಮೈಲಿ ಜಾಗದಲ್ಲಿ ಸತ್ತಿದ್ದಾರೆ ಎಂದು ನನಗನ್ನಿಸುತ್ತಾ ಇದೆ. ಪೋಲೀಸಿನವರಿಗೂ ಕೂಡಾ ತಿಳಿಸದೇ, ಆಸ್ಪತ್ರೆಗೂ ಕೂಡಾ ಸೇರಿಸದೇ ಎಷ್ಟೋ ಜನರು ಸತ್ತಿರತಕ್ಕ ಪ್ರಸಂಗಗಳು ಇವೆ. ಈ ಬಗ್ಗೆ ಅಧಿಕೃತವಾಗಿ ತನಿಖೆ ಮಾಡಬೇಕು. ಈ ಒಂದು ವಾರದಲ್ಲಿ ಎಷ್ಟು ಜನ ಸತ್ತಿದ್ದಾರೆ ಎಂಬ ಬಗ್ಗೆ ಲೆಕ್ಕ ತರಿಸಿ, ಸ್ಮಶಾಣಗಳಲ್ಲಿ ಎಷ್ಟು ಹೆಣಗಳನ್ನು ಹೂಳಲಾಯಿತು ಹಾಗೂ ಸುಡಲಾಯಿತು ಎಂಬ ಲೆಕ್ಕವನ್ನು ತರಿಸಿಕೊಂಡು ನೋಡಿದರೆ ಸರಿಯಾದ ಲೆಕ್ಕ ಸಿಗಬಹುದು. ಇವರು ಯಾವ ಕಾರಣಕ್ಕಾಗಿ ಸತ್ತಿದ್ದಾರೆ ಎಂಬುದನ್ನೂ ತರಿಸಿಕೊಳ್ಳಬೇಕು. ಈ ಬಗ್ಗೆ ಅಧಿಕೃತ ವರದಿಯನ್ನು ತರಿಸಿ ನಮಗೆ ಕೊಡಬೇಕಾದುದು ಅಗತ್ಯ. ಇದನ್ನು ಅಗತ್ಯವಾಗಿ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರೇ ನನಗನಿಸುತ್ತದೆ, ಇಂತಹ ಒಂದು ಕೆಟ್ಟ ಕೆಲಸವನ್ನು ಮಾಡತಕ್ಕವರನ್ನು ಗಡೀಪಾರು ಮಾಡಬೇಕೆಂದು. ಗಡೀಪಾರು ಮಾಡಲು ಏನೋದು ಕಾನೂನು ಪೋಲೀಸ್ ಇಲಾಖೆಯಲ್ಲಿದೆ, ಅದೇ ರೀತಿ ಕಳ್ಳಬಟ್ಟಿ ತಯಾರು ಮಾಡತಕ್ಕವರನ್ನು ಅದನ್ನು ಮ್ಯಾನುಫಾಕ್ಚರ್ ಮಾಡತಕ್ಕವರನ್ನು ಅದನ್ನು ವಿತರಣೆ ಮಾಡತಕ್ಕವರನ್ನು ಕೆಲವು ಕಾಲವಾದರೂ ಕೂಡ ಬೆಂಗಳೂರಿನ ಜನಗಳು ನಾಗರೀಕರೂ ನೆಮ್ಮದಿಯಿಂದ ಇರಬೇಕಾದರೆ ಅಂತಹವರನ್ನು ಪಟ್ಟಿಮಾಡಿ, ಬೆಂಗಳೂರಿನಿಂದ ಅಥವಾ ಕರ್ನಾಟಕ ರಾಜ್ಯದಿಂದ ಗಡೀಪಾರು ಮಾಡಬೇಕು. ಆ ರೀತಿ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆಯೇ ಹೊರತು ಇವತ್ತು ಅರೆಸ್ಟ್ ಮಾಡಿ ನಾಳೆ ಬಿಟ್ಟರೆ ಮತ್ತೊಂದು ಕಡೆ ಕಳ್ಳಭಟ್ಟಿ ಸಾರಾಯಿ ತಯಾರುಮಾಡಲು ಶುರು ಮಾಡುತ್ತಾರೆ. ಈ ಕೆಲಸ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಇದಕ್ಕೆ ಒಂದು ಸಮಗ್ರ ಕಾನೂನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ದುಃಖಕರವಾದ ಸಂಗತಿ, ಕಳ್ಳಬಟ್ಟಿ ಸಾರಾಯಿಯನ್ನು ಹೇಗೆ ಮಾಡುತ್ತಾರೆ. ಯಾರು ಮಾಡುತ್ತಾರೆ ಇದರ ಮಾಹಿತಿ ತಮ್ಮ ಡಿಪಾರ್ಟ್‌ಮೆಂಟಿನಲ್ಲಿ ಪ್ರತಿಯೊಬ್ಬರಿಗೂ ಗೊತ್ತಿದೆ. ಪೋಲೀಸ್ ಸ್ಟೇಷನ್ನಿನವರಿಗೆ ಇದರ ಬಗ್ಗೆ ಸತತ ಮಾಹಿತಿ ಇದೆ. ನನ್ನ ಕ್ಷೇತ್ರದಲ್ಲಿ ಶ್ರೀಮಾನ್ ಸಾಂಗ್ಲಿಯಾನರವರು ಬಂದ ತಕ್ಷಣ ಕಳ್ಳಬಟ್ಟಿ ತಯಾರು ಮಾಡುವವರನ್ನು ಹಿಡಿಯುವ ಸಾಧ್ಯತೆ ಇತ್ತು. ಅವರು ಅಧಿಕಾರ ವಹಿಸಿಕೊಂಡ ತಕ್ಷಣ ಮಾರನೆಯ ದಿವಸ ಫೋನ್ ಮಾಡಿ ಕೇಳಿಕೊಂಡಾಗ, ಅವರು ಬರಲು ಒಪ್ಪಿಕೊಂಡು, ನನ್ನ ಕ್ಷೇತ್ರ ಚಾಮರಾಜಪೇಟೆಯ ಆನಂದಪುರಂ ಸ ವ್ ಏರಿಯಾದಲ್ಲಿ ಕಳ್ಳಬಟ್ಟಿ ತಯಾರು ಮಾಡುವವರನ್ನು ಹಿಡಿಯಲಿಕ್ಕೆ ಹೋಗುವುದಕ್ಕೆ ಮುಂಚೆ ಚಾಮರಾಜಪೇಟೆಯ ಪೋಲೀಸ್ ಸ್ಟೇಷನ್ ಅಧಿಕಾರಿಗಳಿಗೆ ತಿಳಿಸಲಾಯಿತು ಪೋಲೀಸ್ ಸ್ಟೇಷನ್‌ಗೆ ತಿಳಿಸಿ ಅವರನ್ನು ಹಿಡಿಯಲು ಹೋಗುವಷ್ಟರಲ್ಲಿ, ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಆಗಲೇ ಹೋಗಿ ನಾವು ಬರುವ ವರದಿಯನ್ನು ಮುಟ್ಟಿಸಿದ್ದರಿಂದ ನಾವು ಅವರನ್ನು ಹಿಡಿಯಲಿಕ್ಕೆ ಆಗಲಿಲ್ಲ. ಇನ್ನುಮೇಲೆ ಪೋಲೀಸ್‌ಸ್ಟೇಷನ್‌ಗೆ ಹೋಗದೆ ನಾವೇ ಖುದ್ದಾಗಿ ಕಂಡು ಹಿಡಿಯಬೇಕು, ಏಕೆಂದರೆ ಪೋಲೀಸ್‌ಸ್ಟೇಷನ್ನಿನವರು ಶಾಮೀಲಾಗಿದ್ದಾರೆ, ಕಳ್ಳಬಟ್ಟಿ ತಯಾರು ಮಾಡುವವರನ್ನು ಪಟ್ಟಿಮಾಡೋಣವೆಂದು ಸಾಂಗ್ಲಿಯಾನರವರು ಹೇಳಿದರು. ಮತ್ತೆ ಕಾರಣಾಂತರಗಳಿಂದ ಅವರು ಅಧಿಕಾರದಲ್ಲಿರಲಿಲ್ಲ. ಬೇರೆ ಕಡೆ ಹೋದರು. ಇದುವರೆಗೂ ಕೂಡ ಆ ಕೆಲಸವನ್ನು ಮಾಡಲಿಕ್ಕೆ ಆಗಿಲ್ಲ. ಅಲ್ಲಿಗೆ ಒಬ್ಬ ದಕ್ಷ ಅಧಿಕಾರಿಯನ್ನು ಹಾಕಿದರೆ ಮಾತ್ರ ಸಾಧ್ಯ. ಅಲ್ಲಿ ಪೋಲೀಸ್ ಸ್ಟೇಷನ್‌ರವರೇ ಶಾಮೀಲಾಗಿದ್ದಾರೆ, ದಕ್ಷರಾಗಿರುವವರು ಆದರೆ ಆ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಿದೆ; ಇಲ್ಲದಿದ್ದರೆ ಮಾಡುವುದಕ್ಕಾಗುವುದಿಲ್ಲ. ಮತ್ತೊಂದು ದು:ಖಕರವಾದ ಸಂಗತಿ ಆ ವಿಷಯವನ್ನು ಈ ಸದನದಲ್ಲಿ ಹೇಳಬೇಕೆಂದಿದ್ದೇನೆ. ಕಳ್ಳಬಟ್ಟಿ ಸಾರಾಯಿ ತಯಾರು ಮಾಡುವ ಕೇಂದ್ರವೇನಿದೆ ಅಲ್ಲಿ ಈಜುಕೊಳ್ಳ ಇದ್ದ ಹಾಗೆ ಒಂದು ಪೂಲನ್ನು ಏರ್ಪಾಡು ಮಾಡಿಕೊಂಡಿರುತ್ತಾರೆ. ಬಹಳ ಕಷ್ಟವಾದ ಸಂಗತಿಯನ್ನು ಹೇಳಬೇಕಾಗಿದೆ, ಅಲ್ಲಿ ಕುಷ್ಠರೋಗಿಗಳನ್ನು ತೆಗೆದುಕೊಂಡು ಹೋಗಿ ಆ ಕೊಳದಲ್ಲಿ ಈಜಾಡುವುದಕ್ಕೆ ಇಟ್ಟಿದ್ದಾರೆ. ಆ ರೀತಿ ಮಾಡಲು ಕಾರಣವೇನೆಂದರೆ ಆ ಕುಷ್ಠರೋಗಿಗಳಿಂದ ಬರತಕ್ಕ ದುರ್ನಾತವನ್ನು ಕಳ್ಳಬಟ್ಟಿಯಲ್ಲಿ ಬೆರೆಸಿದರೆ ಅದರಿಂದ ಒಂದು ಫ್ಲೇವರ್ ಬರುತ್ತದೆಂದು ಅದರಿಂದ ಮಾರಾಟ ಜಾಸ್ತಿಯಾಗುತ್ತದೆಂದು ಈ ಕೆಲಸವನ್ನು ಕೂಡ ಮಾಡುತ್ತಿದ್ದಾರೆ. ಅಂದಮೇಲೆ ಕಳ್ಳಬಟ್ಟಿ ಸಾರಾಯಿ ಕುಡಿಯುವವರ ಗತಿ ಏನಾಗಬೇಕು ? ಅವರ ಆರೋಗ್ಯದೃಷ್ಟಿ ಏನಾಗಬೇಕು ? ಇದರ

ಬಗ್ಗೆ ತಾವು ಯೋಚನೆ ಮಾಡಬೇಕೆಂದು ಹೇಳುತ್ತಿದ್ದೇನೆ ಬೆಂಗಳೂರು ನಗರದಲ್ಲಿ ಈ ನತದೃಷ್ಟ ದುರಂತ ಆದ ನಂತರ ಬೋರಿಂಗ್ ಆಸ್ಪತ್ರೆಯಲ್ಲಿ ಆರ್.ಎಂ.ಒ.ರವರು ಇರಲಿಲ್ಲ. ಸಿನಿಮಾಮಂದಿರದಲ್ಲಿ ಸಿನಿಮಾ ನೋಡುತ್ತಿದ್ದರು ಅಂದರೆ, ಇವತ್ತು ನಾನು ಕೇಳುತ್ತಿದ್ದೇನೆ ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ರೋಗಿ ಸಾಯುತಕ್ಕ ಸಂದರ್ಭದಲ್ಲಿ ಸಿನಿಮಾ ನೋಡುವಂತಹ ಡಾಕ್ಟರುಗಳು ನಮ್ಮಲ್ಲಿ ಇದ್ದಾರೆ. ಈ ವಿಷಯ ಕೇಳಿ ನನಗೆ ಬಹಳ ದುಃಖವಾಯಿತು ; ಇದರ ಬಗ್ಗೆ ವಿಚಾರಣೆ ಮಾಡಬೇಕು ಯಾವ್ಯಾವ ಅಧಿಕಾರಿಗಳು ಇದರಲ್ಲಿ ನಿಷ್ಪಕ್ಷಪಾತವಾಗಿ ಕೆಲಸವನ್ನು ಮಾಡಿಲ್ಲ, ರೋಗಿಗಳ ಜೀವವನ್ನು ಉಳಿಸುವುದಕ್ಕೆ ಪ್ರಯತ್ನಪಟ್ಟಿಲ್ಲ ಅವರ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳಬೇಕು. ನ್ಯಾಯಾಂಗ ವಿಚಾರಣೆ ಮಾಡತಕ್ಕ ಸಂದರ್ಭದಲ್ಲಿ ರೆಫರ್‌ನ್ಸ್‌ನ್ನು ಕೇಳತಕ್ಕ ಸಂದರ್ಭದಲ್ಲಿ ಈ ಕಳ್ಳಬಟ್ಟಿ ಸಾರಾಯಿ......

SRI K. BHASKAR NAIDU —If the Hon. member could yield for a minute the Hon. Member has said about R. M. O. Say it clearly who is the R. M. O. Otherwise don't bring in officers here.

MR. SPEAKER.—She says, "R. M. O of the Bowring Hospital".

ಶ್ರೀ ಮಳ್ಳೂರು ಆನಂದರಾವ್.—ಕುಷ್ಠರೋಗಿಗಳನ್ನು ಕರೆದುಕೊಂಡು ಹೋಗಿ ಈಜು ಹೊಡೆಸುತ್ತಾರೆಂದು ಹೇಳಿದ್ದನ್ನು ಕೇಳಿದರೆ ನಮಗೆ ಭಯವಾಗುತ್ತಿದೆ. ಎಲ್ಲಿ ಆ ರೀತಿ ಮಾಡುತ್ತಾರೆಂದು ಹೇಳಿದರೆ ಸಾಯಂ ಕಾಲದೊಳಗೆ ಅಂತಹವರನ್ನು ಹಿಡಿಯ ಬಹುದಲ್ಲ ?

ಕುಃ ಎಸ್. ಪ್ರಮೀಳ.—ಅಧ್ಯಕ್ಷರೇ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿರುತ್ತೇನೆ. ಹೆಸರು ಹೇಳಿ ನಾವು ಹೋಗುವಷ್ಟರಲ್ಲೇ ಆ ಜಾಗವನ್ನು ಮುಚ್ಚಿರುತ್ತಾರೆ ಸಾರ್ವಜನಿಕರ ಹಿತದೃಷ್ಟಿಯಿಂದ ವಿಚಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆಸ್ಪತ್ರೆಯ ಡಾಕ್ಟರ್ ಹೆಸರು ಹೇಳಬಾರದೆಂದು ಇರುವಾಗ, ಅದಕ್ಕೋಸ್ಕರ ನಾನು ಹೇಳಲಿಲ್ಲ. ಬೋರಿಂಗ್ ಆಸ್ಪತ್ರೆಯಲ್ಲಿ ಆರ್. ಎಂ. ಒ. ಇರುವವರು ಒಬ್ಬರೇ ಅವರ ಹೆಸರನ್ನು ಕಂಡು ಹಿಡಿಯುವುದು ಕಷ್ಟವೇನು ಆಗುವುದಿಲ್ಲ, ಅದರ ಬಗ್ಗೆ ಎನ್‌ಕ್ವಾಯಿರಿ ಮಾಡಿ ಎಂದು ಕೇಳಿಕೊಳ್ಳುತ್ತೇನೆ ಅದರ ಬಗ್ಗೆ ಸಮಗ್ರ ನ್ಯಾಯಾಂಗ ವಿಚಾರಣೆಯಾಗುವ ಸಂದರ್ಭದಲ್ಲಿ ತಾವು ದಯವಿಟ್ಟು ಆ ವಿಷಯಗಳ ಪರಾಮರ್ಶೆಗೆ ದೊರೆಯಬೇಕು. ಯಾವ ಯಾವ ಅಧಿಕಾರಿಗಳು ಇದರ ಜೊತೆಗೆ ಶಾಮೀಲಾಗಿದ್ದಾರೆ, ಎಷ್ಟು ವರ್ಷಗಳಿಂದ ಚಾಲು ಆಗುತ್ತಾ ಬರುತ್ತಿದೆ ಯಾವ್ಯಾವ ಅಧಿಕಾರಿಗಳಿಗೆ ಎಷ್ಟೆಷ್ಟು ಮಾಮೂಲು ಇದೆ, ಯಾವ ಕಾರಣಕ್ಕಾಗಿ ಇಷ್ಟು ಜನ ಸತ್ತರು ಎಲ್ಲವನ್ನು ಕೂಡ ಸಮಗ್ರ ಪರಿಶೀಲನೆ ಮಾಡತಕ್ಕ ಕೆಲಸ ಮಾಡದಿದ್ದರೆ ಅದರ ನಿಜಾಂಶ ಹೊರಬರಲು ಸಾಧ್ಯವಾಗುವುದಿಲ್ಲ. ಕನ್‌ಸಾಲಿಡೇಟೆಡ್ ರೆಫರೆನ್ಸ್ ಇರಬೇಕು. ಈ ರೀತಿ ಮಾಡಿದಾಗ ಮಾತ್ರ ನ್ಯಾಯ ದೊರೆಯುವುದಕ್ಕೆ ಸಾಧ್ಯವಾಗುತ್ತದೆ. ಈ ಕೆಲಸವನ್ನು ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಐ ಪಿ. ಡಿ. ಸಾಲಪ್ಪ (ಬಿನ್ನೀಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ವಿಷಮಿಶ್ರಿತ ಭಟ್ಟಿಸಾರಾಯಿ ಕುಡಿದು ಬೆಂಗಳೂರು ನಗರದಲ್ಲಿ ಸತ್ತಿರತಕ್ಕ ವಿಚಾರ ಒಂದೇ ಅಲ್ಲದೆ ಇವತ್ತು ಬೆಂಗಳೂರಿನ ಸುತ್ತ ಮುತ್ತ ನೂರಾರು ಜನ ಸತ್ತಿರತಕ್ಕದ್ದು ಪತ್ರಿಕೆಗಳಲ್ಲಿ ಬಾರದೆ ಹೋದರೂ ನಿಜಾಂಶವನ್ನು ಬಚ್ಚಿಡುವುದಕ್ಕೆ ಆಗುವುದಿಲ್ಲ. ಕಳ್ಳಬಟ್ಟಿಯನ್ನು ಸಾಗಿಸತಕ್ಕವರು ಈ ಮದ್ಯವನ್ನು ತಯಾರು ಮಾಡತಕ್ಕ ಕೇಂದ್ರ ಎಲ್ಲವೂ ಕೂಡ ನಮ್ಮ ಸ್ನೇಹಿತರು ಹೇಳಿದಹಾಗೆ ನಮಗೊಂದು ಇಲಾಖೆ ಇದೆ. ಅದು ಗೃಹಖಾತೆ, ಈ ಗೃಹಖಾತೆಗೆ (ಎ ಟು ಜಡ್ ಗೊತ್ತು) ಮೊದಲಿನಿಂದ ಕೊನೆಯವರೆಗೂ ಗೊತ್ತು. ತಯಾರು ಮಾಡುವವರು ಯಾರು ಸಪ್ಲೈ ಮಾಡುವವರು ಯಾರು ಮಾರಾಟಮಾಡತಕ್ಕವರು ಯಾರು, ಸಾಗಿಸತಕ್ಕವರು ಯಾರು ಎಂಬುದು ಪ್ರತಿಯೊಂದು ಗೊತ್ತು. ಮದ್ಯವನ್ನು ಯಾವರೀತಿ ಸಾಗಿಸುತ್ತಾರೆಂದರೆ ಟ್ಯೂಬ್ ಮತ್ತು ಟಿನ್‌ಗಳಲ್ಲಿ ಸಾಗಿಸುತ್ತಾರೆ. ಯಾವುದರಲ್ಲಿ ಸಾಗಿಸುತ್ತಾರೆಂಬುದು ಗೊತ್ತಿದ್ದು. ಆದರಿಂದ ಜನಗಳಿಗೆ ತೊಂದರೆಯಾಗುತ್ತದೆ ಎಂಬುದನ್ನು ತಿಳಿದು, ಈ ವಿಷಯವನ್ನು ಶಾಸಕರು ಗಮನಕ್ಕೆ ತಂದರೂ ಸರಿಪಡಿಸಲಿಲ್ಲ. ಉದ್ದೇಶಪೂರ್ವಕವಾಗಿ ಅಧಿಕಾರಿಗಳು, ಸತ್ತವರು ಸಾಯಲಿ, ಬದುಕುವವರು ಬದುಕಲಿ, ನಮ್ಮ ಜೋಬು ಮಾತ್ರ ತುಂಬಬೇಕು ಎಂಬ ಈ ಉದ್ದೇಶವನ್ನು ಹೊಂದಿದ್ದಾರೆ ; ಎನ್ನ

ತಕ್ಕದ್ದು ನಿರ್ವಿವಾದ. ನಾನಾದರೂ ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ಸ್ವಾಮಿ ಮನೆಯ ಹತ್ತಿರ ಅಕ್ಕಪಕ್ಕದ ಮನೆಯವರು ಕೊಳಾಯಿಯಲ್ಲಿ ನೀರನ್ನು ತೆಗೆದುಕೊಳ್ಳುವಾಗ ಜಗಳ ಮಾಡಿಕೊಂಡು ಪೋಲೀಸ್ ಸ್ಟೇಷನ್‌ಗೆ ಹೋದರೆ, ಪೋಲೀಸ್‌ಸ್ಟೇಷನ್‌ನವರು ಒಂದು ನಿಮಿಷ ಕೂಡ ತಡಮಾಡದೇ ಗಂಡ ಮನೆಯಲ್ಲಿಲ್ಲದಿದ್ದರೂ ತಕ್ಷಣ ಪೋಲೀಸ್ ಕಾನ್‌ಸ್ಟೇಬಲ್ ಮನೆಯ ಹತ್ತಿರ ಹೋಗಿ, ಗೌರವವಾಗಿ ಇರತಕ್ಕ ಸಂಸಾರಗಳ ಹೆಣ್ಣುಮಕ್ಕಳನ್ನು ನಿಮ್ಮ ಮೇಲೆ ಕಂಪ್ಲೇಂಟ್ ಬಂದಿದೆ ಎಂದು ಕರೆದುಕೊಂಡು ಬರುತ್ತಾರೆ. ಅವರನ್ನು ಅಲ್ಲಿ ಬೆದರಿಸಿ ಕೇಸ್ ಹಾಕುತ್ತೇವೆಂದು ಹೆದರಿಸುತ್ತಾರೆ. ಗಂಡ ಬಂದು ಹಿತ್ತಲ ಬಾಗಿಲಿನಿಂದ ನೋಡಿಕೊಂಡ ಮೇಲೆ ಕೇಸ್ ಇಲ್ಲದಂತೆ ಮಾಡುತ್ತಾರೆ. ಕೇವಲ ಕೊಳಾಯಿ ನೀರಿಗೆ ಜಗಳ ಮಾಡಿಕೊಂಡು ಪೋಲೀಸ್‌ಸ್ಟೇಷನ್‌ಗೆ ಹೋದವರ ಮೇಲೆ ಇಷ್ಟು ಸೀರಿಯಸ್ಸಾಗಿ ತೆಗೆದುಕೊಂಡು ಕಠಿಣ ಕ್ರಮ ತೆಗೆದುಕೊಳ್ಳತಕ್ಕಂತಹ ಇಲಾಖೆ, ಇಷ್ಟೊಂದು ಜನ, ಸಾವಿರಾರು ಜನ ಸಾಯಿಸಿದವರ ಮೇಲೆ ಕ್ರಮ ತೆಗೆದುಕೊಳ್ಳದೇ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆಯೇ ? ನನಗನಿಸುತ್ತದೆ ನಾವೇನಾದರೂ ಕಳ್ಳಬಟ್ಟಿ ತಯಾರು ಮಾಡತಕ್ಕವರಿಗೆ ಲೈಸೆನ್ಸ್ ಕೊಟ್ಟಿದ್ದೇವೆಯೇ ? ಅವರೇನು ಸರ್ಕಾರಕ್ಕೆ ರೆವಿನ್ಯೂ ಕೊಡುತ್ತಿದ್ದಾರೆಯೆ ? ಲೀಗಲೈಸ್ ಮಾಡಿದ್ದೇವೆಯೆ ? ನನ್ನ ಮನಸ್ಸಿಗೆ ಬಹಳ ಸಂಕೋಚವಾಗುತ್ತಿದೆ ಸ್ವಾಮಿ. ನಾನೊಂದು ಪ್ರಶ್ನೆಯನ್ನು ಕೇಳುತ್ತೇನೆ. ಎಲ್ಲಾ ಶಾಸಕರು ಸಬ್‌ಇನ್ಸ್‌ಪೆಕ್ಟರ್‌ರವರ ಗಮನಕ್ಕೆ ಈ ವಿಷಯವನ್ನು ತಂದಿದ್ದಾರೆ. ಸಬ್‌ಇನ್ಸ್‌ಪೆಕ್ಟರ್ ಏನು ಮಾಡುತ್ತಾರೆ. ಯಾರು ಕಳ್ಳಬಟ್ಟಿ ತಯಾರು ಮಾಡುತ್ತಾರೆ, ಮಾರಾಟ ಮಾಡುತ್ತಾರೆ ಮತ್ತು ಸಾಗಿಸುತ್ತಾರೆ ಇಂತಹವರ ಒಂದು ಗುಂಪನ್ನು ತಯಾರುಮಾಡಿ ಎಂ.ಎಲ್.ಎ.ಗಳ ಮೇಲೆ ಬಿಟ್ಟಿರುತ್ತಾರೆ ಉದಾಹರಣೆಗೆ ನನ್ನ ಮನೆಯ ಹತ್ತಿರ ಒಂದು ಗುಂಪು ಇದೆ. ಈ ವಿಷಯವನ್ನು ಹೋಂ ಕಮೀಷನರ್, ಪೋಲೀಸ್ ಕಮಿಷನರ್, ಪೋಲೀಸ್ ಇಲಾಖೆಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಎಲ್ಲರ ಗಮನಕ್ಕೆ ತಂದಿದ್ದರೂ ಒಳ್ಳೆಯದಂತೂ ಆಗಲಿಲ್ಲ. ಒಳ್ಳೆಯದು ಆಗಿದೆ, ೧೫ ೨೦ ಅಡಿ ಮಾತ್ರ ಬದಲಾವಣೆಯಾಗಿದೆ. ಗುಂಪನ್ನು ತಯಾರು ಮಾಡಿಕೊಂಡಿರುವವರು ಏನು ಮಾಡುತ್ತಾರೆಂದರೆ, ಆ ಗುಂಪಿಗೆ ಚೆನ್ನಾಗಿ ಕುಡಿಸಿ ರಾತ್ರಿ ಒಂದು ಗಂಟೆಯ ಸಮಯದಲ್ಲಿ ನನ್ನ ಮನೆಯ ಹತ್ತಿರ ಬಂದು, ಸಧ್ಯ ಕಲ್ಲು ಹೊಡೆಯಲಿಲ್ಲ ನಡುಬೀದಿಯಲ್ಲಿ ನಿಂತುಕೊಂಡು ಜಾತಿ, ವಂಶ, ನಾನು ಹುಟ್ಟಿದ್ದು, ಬೆಳೆದದ್ದು, ನನ್ನ ಪೂರ್ವಿಕರು ಮಾಡುತ್ತಿದ್ದ ಕೆಲಸ ಒಂದಲ್ಲ ಸ್ವಾಮಿ. ಈ ರೀತಿ ಬಾಯಿಗೆ ಬಂದಹಾಗೆ ರಾತ್ರಿ ೧೧ ಗಂಟೆಯಿಂದ ೧ ಗಂಟೆಯುವರೆಗೆ ಬೈದರು. ನಾನು ಬಹಳ ಸಹಿಸಿಕೊಂಡು ಸುಮ್ಮನಾದೆ, ಕಾರಣವೇನೆಂದರೆ ಇನ್ನು ೨,೩ ದಿವಸಗಳಲ್ಲಿ ಲೋಕಸಭೆಯ ಚುನಾವಣೆಗೆ ಮತ ಚಲಾವಣೆಯ ದಿನ ಇತ್ತು. ಆ ಸಂದರ್ಭದಲ್ಲಿ ಪೋಲೀಸಿನವರ ಗಮನಕ್ಕೆ ತಂದರೆ ಅದರ ದುಷ್ಪರಿಣಾಮ ಏನಾಗುತ್ತದೆಂಬುದು ಗೊತ್ತಿದ್ದು ನಾನು ಸುಮ್ಮನಾದೆ. ನಾನು ಸಹಿಸಿಕೊಂಡು ಅಲ್ಲಿರತಕ್ಕವರನ್ನು ಕರೆದು ಒಪ್ಪಿಸಿದ್ದೇನೆ. ಅದರ ಮೇಲೆ ಏನಾಯಿತೆಂಬುದನ್ನು ಬಿಡೋಣ. ಕಳ್ಳಬಟ್ಟಿ ಸಾರಾಯಿ ತಯಾರಾಗುವುದು ಮಾರಾಟ ಮಾಡುವುದು; ಇಷ್ಟು ವ್ಯಾಪಕವಾಗಿ ಎಲ್ಲರಿಗೂ ಗೊತ್ತಿದ್ದರೂ ತಡಮಾಡಿರುವುದಕ್ಕೆ ಕ್ರಮ ಕೈಕೊಳ್ಳಬೇಕು. ಇವತ್ತು ಸಾವಿರಾರು ಜನ ಸಾಯಲು ಕಾರಣರಾಗಿರತಕ್ಕವರ ಮೇಲೆ ಅವರು ಯಾರೇ ಆಗಿರಲಿ, ನಾನೇ ಆಗಿದ್ದರೂ ಸಹ ನನ್ನ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನಾದರೂ ಕೂಡ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ತಮಗೆ ಈಗಾಗಲೇ ಗೊತ್ತಿದೆ. ತಾವು ಹಲವಾರು ವರ್ಷಗಳಿಂದ ಬಹುಶಃ ೪—೫ ಟರ್ಮ್‌ನಿಂದ ಈ ಸದನದ ಸದಸ್ಯರಾಗಿದ್ದೀರಿ. ಈ ವಿಷಯ ತಮಗೂ ಗೊತ್ತಿದೆ. ಹಿಂದೆ ಎಂ ಜಿ. ಬ್ರದರ್ಸ್ ಸಂಸ್ಥೆಯನ್ನು ಈಗಿನ ರಾಷ್ಟ್ರಪತಿಯಾದಂಥಾ ಶ್ರೀಮಾನ್ ಸಂಜೀವರೆಡ್ಡಿಯವರು ನ್ಯಾಷನಲೈಸೇಷನ್ ಮಾಡಿದಾಗ ಆ ಒಂದು ಕೇಸು ಹೈಕೋರ್ಟಿಗೋ ಅಥವಾ ಸುಪ್ರೀಂ ಕೋರ್ಟಿಗೋ ಹೋಯಿತು. ಆ ಕೋರ್ಟ್‌ನಲ್ಲಿ ಇವರು ನ್ಯಾಷನಲೈಸೇಷನ್ ಮಾಡಿದ್ದು ಸರಿಯಲ್ಲ ಎಂದು ಜಡ್ಜಮೆಂಟ್ ಬಂತು, ಆ ಬಗ್ಗೆ ತೀರ್ಪು ಬಂದ ಕೂಡಲೇ ತತ್‌ಕ್ಷಣವಾಗಿಯೇ ಅವರು ರಾಜೀನಾಮೆ ಕೊಟ್ಟರು. ಅದೇ ರೀತಿಯಾಗಿ ಇನ್ನೊಂದು ಪ್ರಕರಣದಲ್ಲಿ ಮತ್ತೊಬ್ಬರು ಕೇಂದ್ರ ಮಂತ್ರಿಯಾಗಿದ್ದಾಗ ನಡೆಯಿತು. ಆಗಲೂ ಸಹ ತತ್‌ಕ್ಷಣವಾಗಿ ಆ ಸಚಿವರು ರಾಜೀನಾಮೆ ಕೊಟ್ಟರು. ಈ ಒಂದು ಹಿನ್ನಲೆಯನ್ನು ನಾವು ವಿಮರ್ಶನೆ ಮಾಡಿಕೊಳ್ಳಬೇಕು ಈಗಿನ ಸಂದರ್ಭದಲ್ಲಿ ತಮಗೆ ಒಂದು ಉದಾಹರಣೆ ಹೇಳಬೇಕಾದರೆ ನಾವು ಸರಿಹೋದರೆ ನಮ್ಮ ಮನೆಯೂ ಸರಿಹೋಗುತ್ತದೆ, ನಮ್ಮ ಮನೆ ಸರಿಹೋದರೆ ನಮ್ಮ ಸಮಾಜ ಸರಿಹೋಗುತ್ತದೆ, ನಮ್ಮ ಸಮಾಜ ಸರಿಹೋದರೆ ಆವಾಗ ನಮ್ಮ ದೇಶವೂ ಸಹ ಸರಿಹೋಗುತ್ತದೆ. ಯಾವನು

ಮನೆಗೆ ಬೇಡವಾಗಿರುವುದಿಲ್ಲವೋ ಅವನು ಸಮಾಜಕ್ಕೂ ಬೇಡವಾಗಿರುತ್ತಾನೆ, ಹಾಗೆ ಸಮಾಜಕ್ಕೂ ಬೇಡವಾಗಿದ್ದವನು ದೇಶಕ್ಕೂ ಬೇಡವಾಗಿರುತ್ತಾನೆ ಅನ್ನುವ ಒಂದು ಗಾದೆಯೇ ಇದೆ. ದಯವಿಟ್ಟು ಇದನ್ನು ನಾನು ಪರಿಶೀಲನೆ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಈವಾಗ ಕಳ್ಳಭಟ್ಟಿ ಸಾರಾಯಿ ಒಂದನ್ನೇ ಕೊಳ್ಳತಕ್ಕಂಥಾದ್ದು ಮುಖ್ಯವಲ್ಲ, ಪಾಲಿಷ್ ಮುಂತಾದವನ್ನು ಕೊಳ್ಳತಕ್ಕಂಥಾದ್ದು ಕೂಡ ಅದು ವಿಷವಾಗಿರುತ್ತದೆ. ನಾವು ಅನೇಕ ಕಡೆ ಹೋದಾಗ ಈ ಪಾಲಿಷ್ ಅನ್ನು ಮಾರಾಟ ಮಾಡಿದವರನ್ನು ಅರೆಸ್ಟ್ ಮಾಡಿ ನಂತರ ಏನು ಬಿಡುಗಡೆ ಮಾಡುತ್ತಾರೆ ಅವರು ಹೊರಗಡೆ ಬಂದಾಗ ನಾವು ಅವರನ್ನು ಕೇಳಿದಾಗ ಏನು ಹೇಳುತ್ತಾರೆ ಎಂದರೆ ನಾವು ದಿನ ಎರಡು ಬಾಟಲನ್ನು ಅಥವಾ ಮೂರು ಬಾಟಲನ್ನೋ ಪಾಲಿಷ್ ಬಾಟಲನ್ನು ತಂದು ಮಾರಿದರೆ ನಮಗೆ ೪–೫ ರೂಪಾಯಿ ಸಿಕ್ಕುತ್ತದೆ ಎಂದು ಹೇಳಿದರು. ನಂತರ ನೀವು ಯಾರು ಎಂದು ಕೇಳಿದಾಗ ಅವರು ತಮ್ಮ ತಮ್ಮ ಹೆಸರುಗಳನ್ನೂ ಕೂಡ ಹೇಳಿದರು, ಅವರ ಹೆಸರುಗಳು ಪತ್ರಿಕೆಗಳಲ್ಲೂ ಕೂಡ ಬಂದಿದೆ. ತಮಗೆ ಹೇಳಬೇಕಾದರೆ ಪಾಲಿಷ್ ಇರುವುದು ಮರಗಳಿಗೆ ಹಾಕಲಿಕ್ಕೆ, ಅದನ್ನು ತಂದು ಶರಾಬು ಮಾಡಿ ಈ ಜನರಿಗೆ ಕುಡಿಸಿದರೆ ಮತ್ತೇನಾಗುತ್ತದೆ ಹೇಳಿ. ಇದನ್ನು ಬೆರೆಸಿ ಕಳ್ಳಭಟ್ಟಿ ಸಾರಾಯಿ ಮಾಡಿ ಕುಡಿಸಿದ್ದರಿಂದಲೇನೋ ಈವೊತ್ತು ಇದರಿಂದ ಸಾವಿರಾರು ಜನರು ಸಾಯುತಕ್ಕಂಥಾ ಪರಿಸ್ಥಿತಿ ಆಯಿತು. ಈ ವಿಚಾರವನ್ನು ತಾವು ಗಮನಕ್ಕೆ ತೆಗೆದುಕೊಂಡು ಈ ಪಾಲಿಷ್‌ಗೆ ಪರ್ಮಿಷನ್ ಅನ್ನು ಎಷ್ಟು ಜನಕ್ಕೆ ಕೊಟ್ಟಿದ್ದೀರಿ, ಅವರು ಯಾರ್ಯಾರು ಎನ್ನುವುದು ತಮ್ಮ ಲಿಸ್ಟ್‌ನಲ್ಲಿದೆ, ಅದನ್ನು ನೋಡಿ ಇದರಲ್ಲಿ ಯಾರು ಇನ್‌ವಾಲ್ವ್ ಆಗಿದ್ದಾರೆ ಅವರನ್ನು ತಕ್ಷಣ ಕರೆಸಿ, ಅವರಿಗೆ ಯಾವ ಕರುಣೆಯನ್ನೂ ತೋರಿಸಬೇಡಿ, ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಿ. ಹಾಗೇನಾದರೂ ತಾವು ಉಗ್ರಕ್ರಮ ತೆಗೆದುಕೊಳ್ಳದೇ ಹೋದರೆ ಈವೊತ್ತಿನ ದಿವಸ ಇದರಿಂದ ಒಂದು ಸಾವಿರ ಜನ ಸತ್ತಿರಬಹುದು ಮುಂದೆ ಇದನ್ನು ಕುಡಿಯುವವರು ಅಪಾರವಾಗಿ ಬೇಕಾದಷ್ಟು ಜನ ಸಾಯಬಹುದು. ಆದುದರಿಂದ ನಾನು ಹೇಳುವುದೇನೆಂದರೆ ಈ ಕಳ್ಳಭಟ್ಟಿ ಸಾರಾಯಿಯನ್ನು ಯಾರು ತಯಾರಿಸುತ್ತಾರೆ ಅವರ ಮೇಲೆ ತತ್‌ಕ್ಷಣವಾಗಿ ಯಾವ ಕರುಣೆಯನ್ನೂ ತೋರಿಸದೆ ಕ್ರಮ ತಗೆದುಕೊಳ್ಳಿ ಎಂದು ಹೇಳುತ್ತೇನೆ. ಏತಕ್ಕೆಂದರೆ ಈವೊತ್ತಿನ ದಿವಸ ಅನೇಕ ಹುಡುಗರು ಹಾಗೂ ಹೆಣ್ಣು ಮಕ್ಕಳು ಬಹಳ ಕುಡಿಯುತ್ತಿದ್ದಾರೆ. ಅನೇಕ ಸುಸಂಸ್ಕೃತ ಜನರೂ ಈ ರೀತಿ ಕುಡಿಯುತ್ತಾ ಇರುವುದರಿಂದ ಈವೊತ್ತು ಸಾವಿರಾರು ಜನರು ಸತ್ತಿದ್ದಾರೆ ಅನ್ನುವ ಪ್ರಶ್ನೆಯಲ್ಲ ಮುಂದೆ ಇದು ಒಂದು ದೊಡ್ಡ ದುರಂತವೇ ಸಂಭವಿಸಬಹುದು. ಆ ಕಾರಣದಿಂದ ಇದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥಾದ್ದು ಬಹಳ ಮುಖ್ಯವಾಗಿ ನಾವು ಇಂದು ಯೋಚನೆ ಮಾಡಬೇಕಾಗಿದೆ ಈ ಸದನ ಇರುವುದು ಸರ್ಕಾರವನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಹಾಗೂ ಜನರಿಗೆ ಬೇಕಾದಂಥಾ ಎಲ್ಲಾ ಸೌಕರ್ಯಗಳನ್ನೂ ನ್ಯಾಯವನ್ನೂ ಕೂಡ ಸರಿಯಾಗಿ ಒದಗಿಸುವುದಕ್ಕೆ ಜನರಿಗೆ ಈ ದೇಶದಲ್ಲಿ ಇಷ್ಟೊಂದು ಅನ್ಯಾಯವಾಗುತ್ತಾ ಇರುವಾಗ, ಅವರು ಸಾಯುತ್ತಾ ಇರುವಾಗ ಅವರನ್ನು ಕೇಳದೇ ಹಾಗೂ ಅವರು ಸಾಯುವುದಕ್ಕೆ ಶಾಮೀಲಾಗಿರುವವರ ಮೇಲೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ನಾವು ನಿರ್ವೀರ್ಯರಾಗಬೇಕಾಗುತ್ತದೆ. ಆದುದರಿಂದ ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳಿ. ಅವರಿಗೂ ನಮಗೂ ಏನು ಸಂಬಂಧ ಇದೆ ಹೇಳಿ. ಅವರ ಮೇಲೆ ಯಾವ ಕರುಣೆಯನ್ನೂ ತೋರಿಸದೇ ಉಗ್ರಕ್ರಮ ತೆಗೆದುಕೊಳ್ಳಿ. ಮತ್ತು ಇದರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ನಡೆಸಿ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳಿ, ಇಲ್ಲದೇ ಹೋದರೆ ಇದು ಇಡೀ ದೇಶವನ್ನೇ ವ್ಯಾಪಿಸೀತು. ಇದರಲ್ಲಿ ಯಾವ ಜಾತಿಯವನೇ ಇರಲಿ, ಯಾವ ಬಂಧುಬಳಗದವನೇ ಇರಲಿ, ಯಾವ ಜಮಾಯತ್‌ನವನೇ ಇರಲಿ ನಮ್ಮ ಅಣ್ಣನೇ ಇರಲಿ, ನಮ್ಮ ಅಪ್ಪನೇ ಇರಲಿ ಅವರ ಮೇಲೆ ಕೇಸ್ ಹಾಕಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಿ, ಬೇಡ ಅನ್ನುವುದಿಲ್ಲ. ಈ ಬಗ್ಗೆ ನಿಮ್ಮ ಕಾನೂನು ಸರಿ ಇಲ್ಲದೇ ಹೋದರೆ ಸರಿಪಡಿಸಿ. ಹಾಗೆ ಮಾಡದೇ ಹೋದರೆ ಇದೇ ಕಾನೂನನ್ನು ಇಟ್ಟುಕೊಂಡರೆ ಈವೊತ್ತು ಸಾವಿರ ಜನರು ಸಾಯುವುದು ಅಷ್ಟೇ ಅಲ್ಲ, ಮುಂದೆ ಇಂತಹ ಯಾವ ದುರಂತವಾದರೂ ಕೂಡ ಖಂಡಿತ ತಪ್ಪಿಸುವುದಕ್ಕಾಗುವುದಿಲ್ಲ. ಸರ್ಕಾರ ಈ ಬಗ್ಗೆ ಅಸಡ್ಡೆ ಮಾಡದೆ ಈ ಒಂದು ದುರಂತ ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ಆಗಿದೆ ಅನ್ನುವುದರ ಬಗ್ಗೆ ಯೋಚನೆ ಮಾಡದೆ ಇದರ ಬಗ್ಗೆ ಉಗ್ರವಾದ ಕ್ರಮ ತೆಗೆದುಕೊಳ್ಳಿ. ಒಂದುವೇಳೆ ನೀವು ಹಾಗೆ ಮಾಡದೇಹೋದರೆ ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪಕವಾಗಬಹುದು. ಅಲ್ಲದೆ ಈವೊತ್ತು ಈ ಕಳ್ಳಭಟ್ಟಿ ಸಾರಾಯಿಯನ್ನು ಏನು ಸರಬರಾಜು ಮಾಡುತ್ತಿದ್ದಾರೆ ಅದು ಇಡೀ ಕರ್ನಾಟಕ

ರಾಜ್ಯದಲ್ಲೆಲ್ಲಾ ಇನ್ನೂ ಬೇಕಾದಷ್ಟು ಸಾವಿರಗಟ್ಟಲೆ ಜನರು ಸಾಯಬಹುದು. ಇದಂ ಯಾರ ಮೇಲೆ ಜವಾಬ್ದಾರಿ ಇದೆ ಅಂದರೆ ಎರಡೂ ಖಾತೆಗಳನ್ನು ಹೊತ್ತಿರತಕ್ಕಂಥಾ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ತೀವ್ರ ಗಮನಹರಿಸಿ ಹಿಂದುಮುಂದು ಯೋಚನೆ ಮಾಡದೆ ಉಗ್ರವಾದ ಕಾರ್ಯಕ್ರಮ ತೆಗೆದು ಕೊಂಡು ಇದನ್ನು ತಪ್ಪಿಸಬೇಕು, ಈ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಎಂದು ಹೇಳುತ್ತೇನೆ.

ಇನ್ನು ಈ ಜನರು ಈಗ ಏನು ಸತ್ತಿದ್ದಾರೋ ಅವರ ಸಂಬಂಧಿಕರು ಏನು ಇದ್ದಾರೆ ಆ ನತದೃಷ್ಟರ ಜನರ ಒಂದು ಯೋಗಕ್ಷೇಮವನ್ನೂ ಕೂಡ ನಾವು ವಿಚಾರಿಸಿಕೊಳ್ಳಬೇಕಾಗುತ್ತದೆ. ತಮಗೆ ಹೇಳ ಬೇಕಾದರೆ ನಾನು ವಿಚಾರಿಸಿದ್ದರಲ್ಲಿ ತಾವು ಈ ಜನರಿಗೆ ಒಂದು ಸಾವಿರ ರೂಪಾಯಿ ಪರಿಹಾರ ಅಂತ ಏನು ಕೊಡುತ್ತಿದ್ದೀರೋ ಅವರು ಅದರಲ್ಲಿ ಅಲ್ಲಿ ಗುಂಡಿ ಹೊಡೆಯುವವರಿಗೆ ೭೦ ರೂಪಾಯಿ ಕೊಡಬೇಕಾಗು ತ್ತದೆ ಅಲ್ಲದೆ ಅಲ್ಲಿಯ ಪೋಸ್ಟ್ ಮಾರ್ಟಂಗೆ ಬೇರೆ ಒಂದಷ್ಟು ದುಡ್ಡು ಕೊಡಬೇಕಾಗುತ್ತದೆ, ಪೋಲೀಸ ರಿಗೆ ಒಂದಷ್ಟು ಕೊಡಬೇಕಾಗಿದೆ, ಅಂತ ನನಗೆ ಅನಿಸುತ್ತದೆ. ಅಲ್ಲದೆ ನಾವೆಲ್ಲಾ ಅಲ್ಲಿಗೆ ಹೋದಾಗ ಅವರು ಏನು ಹೇಳಿದರು ಎಂದರೆ ನಮಗೆ ಸರ್ಕಾರದವರು ಒಂದು ಸಾವಿರ ರೂಪಾಯಿ ಏನು ಪರಿಹಾರ ಕೊಡು ತ್ತಾರೆ ಅದರಲ್ಲಿ ೩೦೦ ರೂಪಾಯಿ ಅವರು ಕಸಿದುಕೊಂಡು ಇನ್ನು ಉಳಿಕೆ ೭೦೦ ರೂಪಾಯಿಗಳನ್ನು ಕೊಡುತ್ತಾರೆ ಅಂತ ಹೇಳಿದರು. ನೀವು ಕೊಡತಕ್ಕಂಥಾ ಪರಿಹಾರ ಅವರ ಕೈಗೆ ಪೂರ್ತಾ ಸಿಗದೇಹೋದರೆ ಇನ್ನು ನ್ಯಾಯ ಎಲ್ಲಿದೆ, ಧರ್ಮ ಎಲ್ಲಿದೆ, ಅಲ್ಲದೆ ಅವರಿಗೆ ರಕ್ಷಣೆ ಎಲ್ಲಿದೆ, ಅದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿ ಕೊಳ್ಳುವುದೇನೆಂದರೆ ಈ ಸದನದ ಕೀರ್ತಿಯನ್ನು ಉಳಿಸಬೇಕಾದರೆ ಅವರ ಕೈಯ್ಯಲ್ಲಿದೆ ಏತಕ್ಕೆಂದರೆ ಎರಡೂ ಖಾತೆಗಳು ಅವರ ಕೈಯ್ಯಲ್ಲಿರುವುದರಿಂದ ಅವರು ಇದರ ಬಗ್ಗೆ ಮನಸ್ಸು ಮಾಡಬೇಕು, ಕಾನೂನಿನಲ್ಲಿ ಏನಾದರೂ ದೋಷ ಇದ್ದರೆ ಅದನ್ನು ಸರಿಪಡಿಸಬೇಕು, ಏತಕ್ಕೆಂದರೆ ಅವರೇ ಇದಕ್ಕೆ ಸಂಬಂಧಪಟ್ಟ ಮಂತ್ರಿಯಾಗಿರುವುದರಿಂದ ಅವರು ಇದರ ಬಗ್ಗೆ ಮನಸ್ಸು ಮಾಡಬೇಕು. ಮೇಲಾಗಿ ಅವರು ಮನಸ್ಸುಮಾಡಿ ಆ ಜನರ ಪ್ರಾಣವನ್ನು ಉಳಿಸಬೇಕು, ಆ ಜನರಿಗೆ ಸರಿಯಾದ ರಕ್ಷಣೆ ನೀಡಬೇಕು, ಆ ಜನರಿಗೆ ಸರಿಯಾದ ನ್ಯಾಯ ದೊರಕಬೇಕು ಎಂದು ಮತ್ತೊಮ್ಮೆ ಅವರಲ್ಲಿ ಮನವಿ ಮಾಡಿಕೊಂಡು, ನನಗೆ ಮಾತುಗಳನ್ನಾಡಲು ಅವಕಾಶ ಕೊಟ್ಟಂಥಾ ಅಧ್ಯಕ್ಷರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†SRI V.V. PATTAR (Jamkhandi).—Speaker Sir, now, as we stand here we cannot enforce prohibition. That is very clear from the experiments made in various states. Even the man like Sri Morarji Desai who was the staunch exponent of prohibition has failed in the experiment of prohibition.

ಅಧ್ಯಕ್ಷರು.—ತಾವು ಇದಕ್ಕೆ ಸಂಬಂಧಪಟ್ಟಂತೆ ಮಾತನಾಡಿ.

SRI V.V. PATTER.—I shall come to that point.

ಅಧ್ಯಕ್ಷರು.—ನೀವು ಹಾಗೆ ಮಾತನಾಡುತ್ತಾ ಹೋದರೆ ಕೊಂಕಣ ಸುತ್ತಿಕೊಂಡು ಮೈಲಾರಕೆ ಬಂದ ಹಾಗಾಗುತ್ತದೆ' ಆಮೇಲೆ ತುಂಬಾ ಲೇಟ್ ಆಗುತ್ತದೆ. ಈಗ ಸಭೆಯ ಮುಂದೆ ಯಾವ ವಿಷಯ ಇದೆಯೋ ಅದಕ್ಕೆ ಮಾತ್ರ ಸೀಮಿತವಾಗಿರಲಿ.

SRI V.V. PATTAR.—So, when we think that drinking is inevitable in our society...

MR. SPEAKER.—Not for all.

SRI V.V. PATTAR.--But, the thing is whether the present system of producetion, distribution is quite good enough from the view point of the public and that is the only thing that we have to consider. Now. mostly labour classes are addicted to drinks. People, who are earning by hard labour are taking to drinks and it is increasing day by day. That is the practical experience of our day to day life. So, what has to be done is the important factor. My friends have given many suggestions. But, according to me. the Excise contract should be abolished. The liquor of the State should be taken over by the Government and it must be easier and cheaper for the people to drink. That is the only inevitable alternative according to me, whic will end the distilliation of the illicit liquor.

MR. SPEAKER. – You have raised the matter under Rule 312 regarding the death of more than 250 persons by consuming illicit liquor in Bangalore and Mysore. Please confine yourself to that.

SRI V.V. PATTAR.--I am suggessting the remedy. We must be very cautious.

MR. SPEAKER.--Please hear me. Rule 312 is very limited. But, anyway, since yesterday it has allowed agitated very much the minds of the members in the, house I have.

SRI V.V. PATTAR.--I am doing the same thing. This sort of thing should not happen again and again. That is the thing that we have to consider. I am suggesting ways and means to the Government for that purpose. I am bringing to the kind notice of the Chair and also to the Government that cheaper liquor should be made available to the public, ಸ್ವಾಮಿ, ಈ ಸಂದರ್ಭದಲ್ಲಿ ನನಗೆ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ. ಅದು ಕನ್ನಡದಲ್ಲಿ ಈ ರೀತಿ ಇದೆ : "ಹುತ್ತ ಹೊಡೆದರೆ ಹಾವು ಸಾಯುವುದಿಲ್ಲ" ಅಂತ ಇದೆ.

ಅಧ್ಯಕ್ಷರು.—ತಾವು ಹಾವನ್ನೇ ಹೊಡೆಯಿರಿ, ನೀವು ಹುತ್ತ ಹೊಡೆಯೋದಕ್ಕೆ ಹೋಗುತ್ತಿದ್ದೀರಲ್ಲಾ.

ಶ್ರೀ ವಿ.ವಿ. ಪತ್ತಾರ್.—ನಾನು ಹುತ್ತ ಹೊಡೆಯುದಕ್ಕೆ ಹೋಗುತ್ತಾ ಇಲ್ಲವಲ್ಲಾ.

ಅಧ್ಯಕ್ಷರು.– ನೀವು ಹೇಳುತ್ತಾ ಇರತಕ್ಕ ರೀತಿ ಆ ರೀತಿ ಇದೆ. ಆದ್ದರಿಂದ ನೀವು ಹಾವು ಹೊಡೆಯಿರಿ ಹುತ್ತ ಹೊಡೆಯುವುದಕ್ಕೆ ಹೋಗಬೇಡಿ.

SRI V.V. PATTAR.—Sir, I am telling that lot of accusations are made against Police. Police is inevitable. They may do something which we cannot stop

10-30 A.M.

This is not the only thing in which the police have collaboration. There are so many evil things in our State. We see Matka, we see gambling and so many other thing. Is it practical and possble for

us to stop the police from callaborating with such persons who are doing all these business? We hava to takle the root-cause. Unless we tackle the root-cause. even the Judical Inquiry or CBI Inquiry will not do anything. Hon. member has made a suggestion to take off excise duty. That suggestion may be good enough. But my hum ble submission is, the State should get the income, which is veryhard Therefore, what I suggest is. instead of taking off this excise duty or giving it to the Contractor. the Government must take over in their hands production of liquor. distribution and sell it at cheaper price to the people. The main remedy would be, to supply liquor at cheaper rates to the people. That is my point.

ಅಧ್ಯಕ್ಷರು.—ನೀವು ಈಗ ವಿಷಯಕ್ಕೆ ಬನ್ನಿ. ಎಕ್ಸೈಜ್ ಇಲಾಖೆಯ ಡಿಮ್ಯಾಂಡ್ ಬಂದಾಗ ನೀವು ಅದನ್ನೆಲ್ಲಾ ಮಾತನಾಡಿದರೆ ಚೆನ್ನಾಗಿ ಇರುತ್ತದೆ. ಈಗ ನಮ್ಮ ಮುಂದೆ ಇರತಕ್ಕಂಥ ವಿಷಯ ಏನಿದೆ ಅದಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ. ರೂಲ್ ೩೧೨ರ ಪ್ರಕಾರ ಎತ್ತಿರತಕ್ಕ ವಿಷಯ ಏನಿದೆ ಅದಕ್ಕೆ ಲಿಮಿಟೆಡ್ ಸ್ಕೋಪ್ ಇದೆ. ಅದನ್ನು ೧೦-೧೨ ನಿಮಿಷದಲ್ಲಿ ಮಾತನಾಡುವುದು ಇದೆ. ಅಷ್ಟಕ್ಕೆ ಸೀಮಿತ ಮಾಡಿ.

SRI V.V. PATTAR.—There are many families who have lost their parents and practically the children have become orphans. For this my suggestion to the Government is if there are any children of these unfortunate parents, they should be taken into orphanages for protection.

MR. SPEAKER.—That has been done by the Government.

V.V. PATTAR.—Some people are trying to take advantage of this incident to say that the Chief Minister should step down from office.

MR. SPEAKER.—We are not concerned with those things.

SRI V.V. PATTAR.—But, I say this is not a cause to ask the Chief Minister to step down, because the Chief Minister is not directly responsible in such cases. It is only the executive which is responsible for execution of certain policies of the Government. Here distillation is going on and my hon. friends said that, it is the police who have practically colluded with these distillers and illcit liquor sellers Here strong action is needed against those persons who are involve in these things. I support the views of Sri Mallur Ananda Rao and Sri Lakshman to take every kind of action against these persons so that people will be satisfied.

†SRI K. BHASKAR NAIDU.—Mr. Speaker Sir, the tragedy that has be fallen in the State of Karnataka is deeply regretted by everybody and everbody is sorry for it nobody is happy about it.

At the outsft I think the Government has done its best because the Chief Minister rushed twice to the spot and he has announced

giving thousind rupees as immediate relief to the people. But I consider that this benevolent idea has been misused because the people went again to drink with that money and if there are more deaths it is because of that. The goodness of the Government is mistaken and it is misused by the people. But most of the members must know that we should not have politicised this issue and we should not politicise this. That is my feeling. I am not talking on prohibition. I am just suggesting that the police force must be increased. Particularly, in Karnataka there agitations all over the State I know policemen have been hardpressed. I know the police have to maintain law and order also prevention of crime illicit distillation and so many other things. The illicit distillation must be put an end to and I request the Hon'ble Chief Minister to see that the police force is increased. The police were doing a good job in our State recently because they had lot of strikes and other things. So their force must be increased. I would like to suggest to the Exise Commissioner through you Sir, that if any illicit distillation is found in a particular jurisdiction of a particular inspector, no sympathy must be shown. When flying squad raid detect it, how the inspector is not able to detect it? So, severe and stringent action must be taken against lower officials. It is only with the connivance of small man that this bootlegging is going on. So, I would suggest that the police and excise force should be increased, because a lot of income is derived from excise. That does't mean that we should be going on killing people by neglecting bootleggers. Bootleggers must be punished. Miss Pramila made a point, but I have a doubt here, whichthe society must also look into it. A man takes spirit for what purpose? The way in which he takes the quota and sells it away, is it not the duty of the citizen to seize and give up bootlegging? The society must also take a part and also lawyers in such cases should avoid defending the cases. Why not that ethics come into the profession? How many lawyers have made money out of that? He must also be one of the arbitrators. If you take that logic, you must stretch it to that point. So the society is more important, There is no use of my sitting here; speak for ten minutes and go out. As a citizen, as a kannadiga and as a man in Karnaraka, we sympathise with these poor people. That is why I told the Chief Minister that we are prepared to contribute a months's salary. As far as I am concerned, I am prepared to adopt a female child and give her a house in her name. The sympathy is not just by speaking here, It should be practical. I am prepared to adopt, if Mr. Salappa brings a girl and bring her up as my own daughter, I will see that she is married and I will also give her a house, because I have house in my

name. My sons have one each. Calamities do happen, But it is a worst thing that has happened in our State, In America. I know. and I have read in the paper that aboutten thousand people were killed by eating bread. It happens. I am not here to politicise the issue. But what I want is that police force must be increased and we must go to the succour of the people as legislators. There are so many children to be adopted. Let each one of us adopt a child. Then what the Government or the department must have done is, they should have taken a film of all these things, screen it and tell the evil f drinking. Education is more important. They have to do this. The Film department instead of filming something else, it should take film of such things which is most important. Please do this. Thank you very much.

† ಶ್ರೀ ವಿ.ಬಿ. ಭಾವಿ.- ಮಾನ್ಯ ಅಧ್ಯಕ್ಷರೇ ಈ ಘಟನೆ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಹಿಂದೆಂದೂ ನಡೆಯದೇ ಇರತಕ್ಕಂತಹ ಒಂದು ಧಾರುಣ ಘಟನೆ ಅದಕ್ಕೆ ಅನುಗೂಣವಾಗಿ ತಾವು ಈ ಸಭೆಯಲ್ಲಿ ಮುಕ್ತ ಚರ್ಚೆ ಮಾಡ ವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಈ ಚರ್ಚೆ ನಡೆಯತಕ್ಕಂತಹ ಕಾಲದಲ್ಲಿ ನಮ್ಮ ಮಾನ್ಯ ಸದಸ್ಯರು ಅನೇಕರು ಈ ವಿಷಯವನ್ನು ವ್ಯಕ್ತಪಡಿಸಿದ್ದಾರೆ, ಅವರೆಲ್ಲರ ಅಭಿಪ್ರಾಯವನ್ನು ನೋಡಿದರೆ ಈ ಸರ್ಕಾರ ಏನೂ ಮಾಡಿಲ್ಲ ಎನ್ನತಕ್ಕಂತಹ ಒಂದು ಅಭಿಪ್ರಾಯ ಗೊತ್ತಾಗುತ್ತದೆ, ಈ ಘಟನೆ ನಡೆದ ಮಾರನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಆಸ್ಪತ್ರೆಗೆ ಧಾವಿಸಿ ಅಲ್ಲಿ ಘಟನೆಗೆ ಒಳಗಾಗಿರತಕ್ಕಂತಹ ಜನರ ಯೋಗಕ್ಷೇಮವನ್ನು ವಿಚಾರಿಸಿ ಈ ಘಟನೆ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಿಸಿ ಈ ಒಂದು ಘಟನೆಗೆ ಯಾರು ಕಾರಣರಾಗಿದ್ದಾರೆ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆ ಎನ್ನುವಂತಹ ಒಂದು ವಚನವನ್ನು ಸಹ ಕೊಟ್ಟು ಬಂದಿದ್ದಾರೆ ಮತ್ತು ಈ ದುರ್ಘಟನೆಯಲ್ಲಿ ತಂದೆ ತಾಯಿಗಳನ್ನು ಕಳೆದುಕೊಂಡ ಮಕ್ಕಳಿಗೆ ಆಶ್ರಯವನ್ನು ಕೊಡುವ ಒಂದು ಭರವಸೆಯನ್ನು ಸಹ ಅವರು ಕೊಟ್ಟಿದಾರೆ ಇದಕ್ಕಾಗಿ ನಾವೆಲ್ಲರೂ ಮಾನ್ಯ ಮುಖ್ಯಮಂತ್ರಿಗಳಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕಾಗಿದೆ. ಇಷ್ಟೆಲ್ಲಾ ಮಾಡಿದರೂ ಸರ್ಕಾರ ಏನೂ ಮಾಡಿಲ್ಲ ಎಂಬ ಭಾವನೆ ಇಟ್ಟುಕೊಂಡಿದ್ದಾರೆ. ಸರ್ಕಾರ ಏನು ಮಾಡುವುದಕ್ಕೆ ಸಾಧ್ಯ ಎನ್ನತಕ್ಕಂತಹ ಭಾವನೆ ನನಗೆ ಬರುತ್ತದೆ. ಮತೊಂದು ಮಾತನ್ನು ನಾವು ಓಪನ್ ಆಗಿ ಹೇಳಬೇಕಾಗುತ್ತದೆ ಅದೇನೆಂದರೆ ಇವತ್ತು ರಾಜ್ಯದಲ್ಲಿ ದುರ್ಘಟನೆ ನಡೆದಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಆದೇನೆಂದರೆ ನಮ್ಮ ಸರ್ಕಾರದ ವಿರುದ್ಧ ದುರುದ್ದೇಶವನ್ನು ಇಟ್ಟುಕೊಂಡು ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರುವುದಕ್ಕಾಗಿ ಉದ್ದೇಶಪೂರ್ವಕವಾಗಿ ಇಂಥಾ ಒಂದು ಕೃತ್ಯವನ್ನು ಮಾಡಿದಂತಹ ಕುಹಕರು ಇದ್ದಾರೆ. ಅಂಥವರ ಮೇಲೆ ಮಾನ್ಯ ಮುಖ್ಯಮಂತ್ರಿಗಳು ನಿರ್ದಾಕ್ಷಿಣ್ಯವಾಗಿ ನ್ಯಾಯಾಂಗ ತನಿಖೆಯನ್ನು ಮಾಡಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ. ಮಾಡಿಕೊಳ್ಳುತ್ತೇನೆ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಷ್ಮಣ್‌ರವರು ಹೇಳಿದರು ಈ ಒಂದು ದುರ್ಘಟನೆಗೆ ಹೆಚ್ಚಾಗಿ ಬಡಜನರು ಒಳಗಾಗಿದ್ದಾರೆ. ಆದ್ದರಿಂದ ಇನ್ನು ಮುಂದೆ ಈ ಗೌರ್ನಮೆಂಟ್ ಲಿಕ್ಕರ್ ಮತ್ತು ಅರಕ್‌ಗೆ ಅಭ್ಕಾರಿ ಸುಂಕವನ್ನು ತೆಗೆದು ಹಾಕಿ ಬಡಜನರಿಗೆ ಗೌರ್ನಮೆಂಟ್ ಲಿಕ್ಕರ್ ಮತ್ತು ಅರಾಕ್‌ಗೆ ರೂಪಾಯಿ ಮತ್ತು ೧–೫೦ ಪೈಸೆಗಳಿಗೆ ಸಿಗುವಂತೆ ಮಾಡಿದರೆ ಬಡಜನರು ಯಾರು ಇನ್ನು ಮುಂದೆ ಈ ಕಳ್ಳಬಟ್ಟಿ ಸಾರಾಯಿಯನ್ನು ಕುಡಿಯುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪರಿಶೀಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಅಭ್ಕಾರಿ ಸುಂಕದಿಂದ ಸರ್ಕಾರಕ್ಕೆ ಆದಾಯ ಕಡಿಮೆಯಾಗಬಹುದು ಆದರೂ ಸಹಾ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪರಿಶೀಲನೆ ಮಾಡಿ ಈ ಅಭ್ಕಾರಿ ಸುಂಕವನ್ನು ತೆಗದು ಹಾಕಬೇಕೆಂದು ನಾನು ಮತ್ತೊಮ್ಮೆ ಪ್ರಾರ್ಥನೆ ಮಾಡಿಕೋಳ್ಳುತ್ತೇನೆ. ಮತ್ತು ಈ ದುರ್ಘಟನೆಗೆ ಒಳಗಾಗಿರತಕ್ಕಂತಹ ಬಡಜನರು ಸರ್ಕಾರದ ಮೇಲೆ ಅವಲಂಬಿತರಾಗಿರುತ್ತಾರೆ ಆದ್ದರಿಂದ ಅವರಿಗೆ ಸರ್ಕಾರದವರು ಏನೇನು ಸೌಲಭ್ಯಗಳನ್ನು ಒದಗಿಸಿ

ಕೊಡಬೇಕೊ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗಂಗಹನುಮಯ್ಯ (ಮಧುಗಿರಿ).— ಮಾನ್ಯ ಅಧ್ಯಕ್ಷರೇ ಈ ಒಂದು ಘಟನೆ ನಡೆದಿರ ತಕ್ಕಂತದ್ದು ಇಡೀ ದೇಶದಲ್ಲಿಯೇ ಒಂದು ಆತಂಕವನ್ನು ಮೂಡಿಸತಕ್ಕಂತಹ ಮತ್ತು ದೇಶದ ಎಲ್ಲಾ ಜನಗಳ ಮನಸ್ಸನ್ನು ಸೆಳೆಯುತಕ್ಕಂತಹ ಘಟನೆಯಾಗಿದೆ. ಈ ಸಂದರ್ಭದಲ್ಲಿ ನಾನಾದರೂ ಕೂಡ ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಭಿನ್ನವಿಸಿ ಕೊಳ್ಳುವುದೇನೆಂದರೆ ಎರಡು ತಿಂಗಳುಗಳ ಹಿಂದೆ ತುಮಕೂರಿನಲ್ಲಿ ನಡೆದಂತಹ ಘಟನೆಯಲ್ಲಿ ದೊಡ್ಡಣ್ಣ ಹುಚ್ಚಪ್ಪ ಮತ್ತು ಆಂಜನಪ್ಪ ರಾಮಪ್ಪ ಇನ್ನಿತರ ಹಲವಾರು ಹರಿಜನರ ಕುಟುಂಬಗಳು ಸೇರಿದಂತೆ ತುಮಕೂರಿನ ಎನ್‌ಆರ್ ಕಾಲೋನಿಯಲ್ಲಿ ಈ ಕಳ್ಳಬಟ್ಟಿ ಸಾರಾಯಿಯನ್ನು ಕುಡಿದು ತೊಂದರೆಗೆ ಒಳಗಾಗಿದ್ದಾರೆ ಆಗ ಶ್ರೀ ಹುಚ್ಚಣ್ಣ ಎನ್ನುವವರನ್ನು ಸುಮಾರು ರಾತ್ರಿ ೧೨ ಗಂಟೆಯ ಸಮಯದಲ್ಲಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು ಅಲ್ಲಿ ಅವರಿಗೆ ಸರಿಯಾದ ಚಿಕಿತ್ಸೆ ಸಿಗದ ಆಸ್ಪತ್ರೆ ಯಲ್ಲಿಯೇ ಸತ್ತು ಹೋದನು. ಶ್ರೀ ಹುಚ್ಚಣ್ಣನ ಬಾಡಿಯನ್ನು ಪೋಸ್ಟ್ ಮಾರ್ಟಂ ಮಾಡಿ ಹೆಣವನ್ನು ವಾಪಸ್ಸು ಕೊಟ್ಟ ಮೇಲೆ ಮನೆಗೆ ಬಂದ ಮೇಲೆ ಮತ್ತೆ ಉಳಿದ ೪ ಜನರು ಮನೆಯಲ್ಲಿ ಸತ್ತು ಮಲಗಿ ಕೊಂಡಿದ್ದರು. ಈ ಘಟನೆ ನಡೆದ ತಕ್ಷಣ ಪೋಲೀಸ್ ಅಧಿಕಾರಿಗಳಿಗೆ ಮತ್ತು ಎಸ್.ಪಿ. ಯವರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ನಾನು ತಿಳಿಸಿದ್ದೇನೆ. ಜಿಲ್ಲಾಧಿಕಾರಿಗಳು ತಕ್ಷಣ ಎಕ್ಸೈಜ್ ಸೂಪರಿಂಟೆಂಡ್‌ಂಟ್ ರವರಿಗೆ ತಿಳಿಸಿದರು. ಪೋಲೀಸಿನವರು ಮತ್ತು ಎಕ್ಸೈಜ್ ಡಿಪಾರ್ಟಮೆಂಟ್ ಸಿಬ್ಬಂದಿಯವರು ಈ ಕಳ್ಳಬಟ್ಟಿ ಸಾರಾಯಿ ವ್ಯಾಪಾರಸ್ಥರನ್ನು ಹಿಡಿದುಕೊಂಡು ಬಂದು ಮತ್ತೆ ಅವರಿಂದ ಹಣವನ್ನು ಸುಲಿಗೆ ಮಾಡಿ ಅವರ ಮೇಲೆ ಯಾವ ಕೇಸು ಹಾಕದೆ ಅವರನ್ನು ಹಾಗೆಯೇ ಬಿಟ್ಟು ಬಿಟ್ಟರು. ಮತ್ತು ತೊಂದರೆಗೆ ಒಳಗಾಗಿರುವಂತಹ ಜನರಿಗೆ ಪರಿಹಾರವನ್ನು ಕೊಡಬೇಕೆಂದು ನಾನು ಡೆಪ್ಯುಟಿ ಕಮೀಷನರಿಗೆ ಹೇಳಿದಾಗ ಅವರು ನೋಡೋಣ ಎಂದು ಹೇಳಿದರು.

ಅಧ್ಯಕ್ಷರು .— ಘಟನೆ ನಡೆದಿರುವುದು ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಆದ್ದರಿಂದ ಮಾನ್ಯ ಸದಸ್ಯರು ಆ ಬಗ್ಗೆ ಮಾತನಾಡಿದರೆ ಒಳ್ಳೆಯದು.

ಶ್ರೀ ಗಂಗಹನುಮಯ್ಯ .— ಹಿಂದೆ ಶ್ರೀ ರಾಮನವಮಿ ಹಬ್ಬದ ದಿನ ತುಮಕೂರಿನಲ್ಲಿ ೪ ಜನರು ಸತ್ತರು. ಆಗಲೇ ಈ ಕಳ್ಳಬಟ್ಟಿ ಸಾರಾಯಿ ವ್ಯಾಪಾರ ಮಾಡುಂಥವವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿದ್ದರೆ ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದರೆ ಇವತ್ತು ಇಡೀ ರಾಜ್ಯದಲ್ಲಿಯೆ ಒಂದು ದೊಡ್ಡ ವ್ಯಾಪ್ತಿಯಲ್ಲಿರುವ ಈ ಕಳ್ಳಭಟ್ಟಿ ಇವತ್ತು ಎಲ್ಲರ ಮನಸ್ಸಿನಲ್ಲಿ ಬಹಳ ನೋವುಂಟಾಗಿರಕ್ಕ ಘಟನೆ ನಡೆಯುತ್ತಾ ಇರಲಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ಒಂದು ಘಟನೆಗೆ ಒಳಗಾಗಿರತಕ್ಕಂತ ಅಧಿಕಾರಿಗಳೇ ಆಗಲಿ ಅಥವಾ ಯಾರೆ ಆಗಲಿ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಅವರನ್ನು ವಜಾ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೆ ಯಾವ ಕುಟುಂಬಗಳು ಇವತ್ತು ಬೀದಿ ಪಾಲಾಗಿವೆ ಅಂತಹ ಕುಟುಂಬಗಳಿಗೆ ಸರ್ಕಾರದವರು ಕೊಡುವ ೧೦೦೦ ರೂಪಾಯಿಗಳು ಏನೂ ಸಾಕಾಗುವುದಿಲ್ಲ. ಆದ್ದರಿಂದ ಇಂತಹ ಘಟನೆಗೆ ಒಳಗಾಗಿರತಕ್ಕಂತಹ ಸಂಸಾರಗಳಿಗೆ ಶಾಶ್ವತವಾದ ಒಂದು ನೆರವು ಸರ್ಕಾರದವರು ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳು ತ್ತೇನೆ, ಮತ್ತು ಎಕ್ಸೈಜ್‌ನವರು ಈ ಒಂದು ಹೆಂಡವನ್ನು ಮತ್ತು ಸಾರಾಯಿಯನ್ನು ಈಚಲ ಮರದಿಂದ ತಯಾರು ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಕಂಟ್ರಾಕ್ಟ್‌ದಾರರು ಹೆಂಡವನ್ನು ಪೌಡರ್‌ನಿಂದ ತಯಾರು ಮಾಡುತ್ತಿದ್ದಾರೆ. ಇವತ್ತು ದೇಶದಲ್ಲಿ ಈಚಲು ಮರಗಳು ಎಲ್ಲೂ ಇಲ್ಲ. ಈ ಕಂಟ್ರಾಕ್ಟ್‌ದಾರರು ಮಾನ್ಯ ಮುಖ್ಯಮಂತ್ರಿಗಳ ಬಳಿ ಬರುವುದಿಲ್ಲ ಕಂಟ್ರಾಕ್ಟ್‌ದಾರರು ಅಧಿಕಾರಿ ಗಳ ಹತ್ತಿರ ಹೋಗಿ ಅಧಿಕಾರಿಗಳು ಕಂಟ್ರಾಕ್ಟ್‌ದಾರರಿಂದ ಹಣವನ್ನು ಸುಲಿಗೆ ಮಾಡುತ್ತಿದ್ದಾರೆ.

† Indicates that remarks or speeches have not been revised by the member concerned.

ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇತ್ತ ಕಡೆ ತಮ್ಮ ಗಮನವನ್ನು ಹರಿಸಿ ಅವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮತ್ತು ಮುಂದೆ ಇಂತಹ ಘಟನೆಗಳು ನಡೆಯದಂತೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಹನುಮೇಗೌಡ.—ಸನ್ಮಾನ್ಯ ಅಧ್ಯಕ್ಷರೇ ಬೆಂಗಳೂರಿನಲ್ಲಿ ಮೊನ್ನೆ ನಡೆದಂತಹ ದುರ್ಘಟನೆ ಬಹುಶ: ಯಾರಿಗೂ ಸಹ ಒಳ್ಳೆಯ ಹೆಸರನ್ನು ತರತಕ್ಕಂತಹ ವಿಷಯವಲ್ಲ. ಈ ಒಂದು ದುರ್ಘಟನೆಯಲ್ಲಿ ಸುಮಾರು ೩೦೦ ಜನ ಬಡಜೀವಿಗಳು ನಿರ್ಭಾಗ್ಯರು ಸತ್ತಿದ್ದಾರೆ. ಇದಕ್ಕೆ ಬಹುಶಃ ಯಾರು ಹೊಣೆಗಾರರೋ ಅವರನ್ನು ಖಂಡಿತವಾಗಿ ದೇವರೂ ಕೂಡ ಕ್ಷಮಿಸುವುದಿಲ್ಲ ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಘಟನೆಯಲ್ಲಿ ಸತ್ತಿರತಕ್ಕಂತಹ ಎಲ್ಲಾ ಅಸಹಾಯಕರಾದ ಬಡಜನರು ಹಗಲು ರಾತ್ರಿ ದೇಶದ ಏಳಿಗೆಗೆ ದುಡಿಯುತಕ್ಕಂತಹ ಬಡಜನರು. ಈ ದುರ್ಘಟನೆಗೆ ಒಳಗಾಗಿರತಕ್ಕಂತಹ ಬಡಜನಗಳ ಬಗ್ಗೆ ಇವತ್ತು ನಾವೆಲ್ಲರೂ ವ್ಯಥೆ ಪಡಬೇಕಾಗಿದೆ. ನಮ್ಮ ದೇಶಕ್ಕಾಗಿ ದುಡಿಯುತ್ತಿರುವ ಬಡ ಜನಗಳ ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದರೆ ಬಹಳ ದುಃಖವಾಗುತ್ತದೆ. ಈ ಬಡಜನರು ರಾತ್ರಿ ಹಗಲು ಹೊಟ್ಟೆಗೆ ಊಟವಿಲ್ಲದೆ ಮೈಗೆ ಬಟ್ಟೆ ಇಲ್ಲದೆ ಚಿಂದಿ ಚಿಂದಿ ಬಟ್ಟೆಯನ್ನು ಹಾಕಿಕೊಂಡೂ ಇವತ್ತು ರಾತ್ರಿ ಹಗಲು ದೇಶಕ್ಕಾಗಿ ದುಡಿಯುತ್ತಿದ್ದಾರೆ .ಚುನಾವಣೆ ಸಂದರ್ಭದಲ್ಲಿ ಚುನಾವಣೆ ನಡೆಯುವ ದಿವಸ ಬೆಳಗ್ಗೆ ೮ ಗಂಟೆಗೆ ಚುನಾವಣೆ ಇದ್ದರೆ ಅವರು ಬೆಳಿಗ್ಗೆ ೬ ಗಂಟೆಗೆ ಬಂದು ಮತಗಟ್ಟೆಯಲ್ಲಿ ಮತ ಹಾಕುವುದಕ್ಕೆ ನಿಂತುಕೊಳ್ಳುತ್ತಾರೆ. ನಮ್ಮ ರಾಷ್ಟ್ರದ ನಾಯಕಿಯನ್ನು ಅವರು ದೇವರೆಂದು ತಿಳಿದುಕೊಂಡು ಹಾಡಿ ಹೊಗಳಿದೆ ಈ ನಿರ್ಭಾಗ್ಯಜನರು. ಇಂತಹ ಜನಗಳಿಗೆ ರಕ್ಷಣೆ ಕೊಡದಿದ್ದರೆ ಮತ್ತೆ ಅವರಿಗೆ ರಕ್ಷಣೆಯನ್ನು ಕೊಡತಕ್ಕಂತಹವರು ಯಾರು? ಮತ್ತು ಅವರಿಗೆ ಆಶ್ರಯವನ್ನು ಕೊಡತಕ್ಕಂತಹವರು ಯಾರು? ನಾವು ಅಧಿಕಾರಕ್ಕೆ ಯಾವ ಜನಗಳಿಂದ ಬಂದಿದ್ದೇವೆಯೋ ಆ ಜನಗಳ ರಕ್ಷಣೆಯನ್ನು ಮಾಡುವುದಕ್ಕೆ ಆಗದಿದ್ದರೆ ನಾವು ಆ ಅಧಿಕಾರದಲ್ಲಿ ಇರುವುದಕ್ಕೆ ಅರ್ಹರೆ ಎನ್ನುವ ಮಾತನು ನಾನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ನಾನು ಬಹಳ ಸಂಕಟದಿಂದ ಈ ಒಂದು ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ನಿರ್ದಾಕ್ಷಿಣ್ಯವಾದ ವ್ಯಕ್ತಿ ಅವರು ಏನಾದರೂ ಮಾಡಬಹುದು ಅವರು ಏನು ಮಾಡಿದರು ಧೈರ್ಯದಿಂದ ಮಾಡುತ್ತಾರೆ. ಅವರು ಯಾರ ಮರ್ಜಿಗೂ ಒಳಗಾಗತಕ್ಕಂತ ವ್ಯಕ್ತಿಯಲ್ಲ. ಇಂತಹ ಮುಖ್ಯಮಂತ್ರಿಗಳು ಇರುವಾಗ ನಿರಪರಾಧಿಗಳಾದ ಸಾವಿರಾರು ಜನರು ಈ ಘಟನೆಗೆ ಒಳಗಾಗಿದ್ದಾರೆ, ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚು ಗಮನವನ್ನು ಹರಿಸಲಿಲ್ಲವೊ ಏನೋ ಎಂದು ನನಗನಿಸುತ್ತದೆ. ಅವರು ಮನಸ್ಸು ಮಾಡಿದ್ದರೆ ಈ ಒಂದು ಅನಾಹುತವನ್ನು ತಪ್ಪಿಸಬಹುದಿತ್ತು ಎನ್ನುವ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳಿಗೆ ಆ ಜನಗಳು ಕುಡಿಯಲು ಹೋಗುವುದು ಗೊತ್ತಾಗುತ್ತದೆಯೇ? ಇದುವರಿವಿಗೂ ಮಾನ್ಯ ಸದಸ್ಯರು ಮಾನ್ಯಮುಖ್ಯ ಮಂತ್ರಿಗಳ ಬಗ್ಗೆ ಹೇಳಿದ ವಿಶೇಷಣಗಳೆಲ್ಲವೂ ಸರಿಯೇ. ಆದರೆ ಸಂಜೆ ಪತ್ರಿಕೆ ಓದಿದ ಮೇಲೆ, ಘಟನೆ ಆದಮೇಲೆ ಸಹಾ ಹೋಗಿ ಕುಡಿದಿದ್ದಾರೆ. ಮತ್ತು ಬೌರಿಂಗ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದವಳು ಒಬ್ಬ ಕುಡಿದು ಅವನ ಕಣ್ಣು ಹೋಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ನಾನು ಆ ದೃಷ್ಟಿಯಿಂದ ಹೇಳುತ್ತಿಲ್ಲ, ಒಬ್ಬ ಶಕ್ತಿಯುತವಾದ ಮುಖ್ಯಮಂತ್ರಿಗಳು ಇರುವಾಗ ನಡೆದಂತಹ ಈ ಘಟನೆಯನ್ನು ತಪ್ಪಿಸಿಬಹುದಿತ್ತು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದನ್ನು ನೋಡುವಂತಹ ಅಧಿಕಾರಿಗಳು ಇದ್ದರೂ ಸಹ ಮತ್ತು ಅವರಿಗೆ ಎಲ್ಲ ತರಹದ ಅನುಕೂಲಗಳು ಇದ್ದರೂ ಸಹ ಹಾಗೂ ಅವರಿಗೆ ಒಳೆಯ ಸಂಬಳ ಸಾರಿಗೆ ಸಿಗುತ್ತಿದ್ದರೂ ಸಹ ಅವರು ಕ್ರಮ ತೆಗೆದುಕೊಳ್ಳದೆ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿರುವುದರಿಂದಲೇ ಇದು ಸಾರೋದ್ಧಾರವಾಗಿ ನಡೆದುಕೊಂಡು ಬಂದಿದೆ. ಆದ್ದರಿಂದ ಇದಕ್ಕೆ ಅಧಿಕಾರಿಗಳೇ ಹೊಣೆಯಾಗಬೇಕಾಗುತ್ತದೆ.

ಅಧ್ಯಕ್ಷರು.—ಪೋಲೀಸಿನವರು ಈ ಬಗ್ಗೆ ಹಿಡಿದಂಥ ಜನರು ಬೈಲ್ ಮೇಲೆ ಬಿಡುಗಡೆಯಾಗಿ ಬಂದಿದ್ದಾರೆ. ತಾವು ಇದನ್ನು ಪತ್ರಿಕೆಗಳಲ್ಲಿ ಓದಿರಬಹುದು.

ಶ್ರೀ ಕೆ. ಎಚ್. ಹನುಮೇಗೌಡ.—ಇದನ್ನೆಲ್ಲಾ ಸಂಪೂರ್ಣವಾಗಿ ನಿಲ್ಲಿಸುವಂಥ ಶಕ್ತಿ ಮುಖ್ಯಮಂತ್ರಿಗಳಿಗೆ ಇವೆ ಆದ್ದರಿಂದ ನಾನು ಅವರಿಗೆ ನೇರವಾಗಿ ಹೇಳುತ್ತಿದ್ದೇನೆ. ಇದು ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದು ಎಕ್ಸೈಜ್ ಮತ್ತು ಪೋಲೀಸ್ ಅಧಿಕಾರಿಗಳಿಗೆ ಗೊತ್ತಿದೆ. ಆದರೂ ಕ್ರಮ ತೆಗೆದುಕೊಳ್ಳಲಿಲ್ಲ. ಅವರೇನಾದರೂ ಮಾನವೀಯ ದೃಷ್ಟಿಯಿಂದ ಕ್ರಮ ತೆಗೆದುಕೊಂಡಿದ್ದರೆ, ಈ ಶ್ರಮಜೀವಿಗಳು ಇಷ್ಟೊಂದು ಪ್ರಮಾಣದಲ್ಲಿ ಸಾಯುತ್ತಿರಲಿಲ್ಲ. ಮತ್ತು ಈ ದುರಂತವೂ ನಡೆಯುತ್ತಿರಲಿಲ್ಲ. ಇದು ನಡೆದ ಮೇಲೆ ಅನೇಕ ಜನರನ್ನು ಹಿಡಿಯಲಾಯಿತು, ಲಕ್ಷಾಂತರ ಲೀಟರ್ ಸ್ಪಿರಿಟ್‌ನ್ನು ವಶಪಡಿಸಿಕೊಳ್ಳಲಾಯಿತು, ಅನೇಕ ಕೇಂದ್ರಗಳ ಮೇಲೆ ದಾಳಿ ಮಾಡಲಾಯಿತು, ಎಂಬ ತಕ್ಕಂಥ ವಿಚಾರಗಳು ಪತ್ರಿಕೆಗಳ ತುಂಬಾ ಬರುತ್ತಿದೆ. ಜೊತೆಗೆ ಫೋಟೋಗಳನ್ನು ಸಹ ಹಾಕಿದ್ದಾರೆ. ಈ ಒಂದು ಕೆಲಸವನ್ನು ಮೊದಲೇ ಮಾಡಿದ್ದರೆ ಈ ದುರಂತ ನಡೆಯುತ್ತಿರಲಿಲ್ಲ. ಕಳೆದ ಏಪ್ರಿಲ್ ತಿಂಗಳಲ್ಲಿ ಇದೇ ಕಾರಣದಿಂದ ೨೦–೩೦ ಜನರು ಸತ್ತಾಗಲೇ ಅಧಿಕಾರಿಗಳು ಜಾಗ್ರತೆ ವಹಿಸಿದ್ದರೆ ಇದೆಲ್ಲಾ ನಡೆಯುತ್ತಿರಲಿಲ್ಲ ಆದರೆ ಮಾನವೀಯತೆ ದೃಷ್ಟಿ ಬಿಟ್ಟು ಯಾರಾದರೂ ಸಾಯಲಿ, ಏನಾದರೂ ಆಗಲಿ, ತಮಗೆ ಹಣ ಬೇಕು, ತಮ್ಮ ಸಂಸಾರ ಸುಖವಾಗಿರಬೇಕು, ತಾವು ಅನುಕೂಲ ಸ್ಥಿತಿಯಲ್ಲಿ ಬಾಳಬೇಕು ಎಂಬತಕ್ಕಂಥ ಸ್ಥಿತಿಯಲ್ಲಿ ಅಧಿಕಾರಿಗಳು ಇರುವುದರಿಂದಲೇ ಇಂತಹ ಅನಾಹುತಗಳಾಗುತ್ತಿರುವುದು. ಎಲ್ಲರೂ ಈ ರೀತಿ ಇಲ್ಲ, ಉತ್ತಮ ಅಧಿಕಾರಿಗಳೂ ಸಹ ಇದ್ದಾರೆ. ಆದರೆ ಹಣದಾಸೆ ಇರುವವರೇ ಜಾಸ್ತಿ. ಈ ಮೊದಲು ಮುಖ್ಯಮಂತ್ರಿಗಳು ಲೋಕೋಪಯೋಗಿ ಇಲಾಖೆಯಲ್ಲಿ ಹಣ ಹೊಡೆದ ಅಧಿಕಾರಿಗಳನ್ನು ಹಿಡಿದು ಬಲಿ ಹಾಕಿದರು. ಅದಕ್ಕಾಗಿ ಅವರನ್ನು ಜನತೆಯ ಪರವಾಗಿ ಅಭಿನಂದಿಸುತ್ತೇನೆ. ಈಗ ಈ ಎಕ್ಸೈಜ್ ಮತ್ತು ಪೋಲೀಸ್ ಸ್ಕ್ವಾಡ್‌ನಲ್ಲಿರುವ ಅಧಿಕಾರಿಗಳು ಸಹ ಮಾಮೂಲು ಪಡೆಯುತ್ತಿರುವುದರಿಂದ, ಈ ಅಧಿಕಾರಿಗಳು ಎಷ್ಟು ಆಸ್ತಿ ಮಾಡಿದ್ದಾರೆಂಬುದನು ತನಿಖೆ ಮಾಡಿಸಬೇಕು. ಪ್ರತಿ ಎಕ್ಸೈಜ್ ಇನ್‌ಸ್ಪೆಕ್ಟರ್ ಸಹ ೨–೩ ಕಾರು ಇಟ್ಟುಕೊಂಡಿದ್ದಾರೆ. ಇವಕ್ಕೆಲ್ಲಾ ಹಣ ಎಲ್ಲಿಂದ ಬಂತು? ಇದೆಲ್ಲಾ ನಡೆಯದಂತೆ ತಕ್ಕ ಬಂದೋಬಸ್ತು ಮಾಡಬೇಕು. ಈ ಒಂದು ದುರಂತ ನಡೆದದ್ದು ತಪ್ಪು ಎಂದು ಇಡೀ ದೇಶದ ಜನರೆಲ್ಲರೂ ಹೇಳುತ್ತಿದ್ದಾರೆ. ಇಂತಹ ಒಂದು ಅನ್ಯಾಯ ಇಂತಹ ಒಂದು ಅಯೋಗ್ಯತನ ನಡೆಯಬೇಕಾದರೆ ಸರ್ಕಾರ ಅಷ್ಟೊಂದು ಅಸಹಾಯಕತೆಯಿಂದ ಕೂಡಿದೆಯೇ ಎಂದು ವಿಚಾರ ಮಾಡಬೇಕಾಗುತ್ತದೆ. ಇದು ಮನುಷ್ಯ ಪ್ರಯತ್ನ ಮೀರಿ ನಡೆದಿದೆಯೇ? ನಮ್ಮ ಅಧಿಕಾರಿಗಳು ದೇಶದ ಜನರ ಹಿತದೃಷ್ಟಿಯಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ತರುವ ದೃಷ್ಟಿಯಿಂದ ಕೆಲಸ ಮಾಡಬೇಕು. ನಮ್ಮ ಮುಖ್ಯ ಮಂತ್ರಿಗಳು ಉತ್ಸಾಹ ಶಾಲಿಗಳಾಗಿದ್ದಾರೆ. ಮತ್ತು ದಕ್ಷತೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕೆಂದು ಅವರು ಹೊರಟಿರುವಾಗ ಅವರ ಜೊತೆಯಲ್ಲಿ ಅಧಿಕಾರಿಗಳೂ ಸಹ ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಇದನ್ನು ನಿಲ್ಲಿಸಲು ನೂರಾರು ವರ್ಷಗಳು ಬೇಕಾಗುವುದಿಲ್ಲ. ಕೇವಲ ೨೪ ಗಂಟೆಗಳಲ್ಲಿ ಇದನ್ನು ನಿಲ್ಲಿಸಬಹುದು. ಇದಕ್ಕೆ ಮೊದಲು ಅಧಿಕಾರಿಗಳಲ್ಲಿ ಮಾನವೀಯತೆ ದೃಷ್ಟಿ ಇರಬೇಕು. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ನಿನ್ನೆ ದಿವಸ ಹೊಟೇಲ್ ಒಂದರಲ್ಲಿ ಜನರು ಏನು ಮಾತನಾಡುತ್ತಿದ್ದರು ಎಂದರೆ ಸಂಬಂಧಪಟ್ಟ ಎಸ್. ಪಿ. ಅವರಿಗೆ ಪ್ರತಿ ತಿಂಗಳು ಒಂದು ಲಕ್ಷ ರೂಪಾಯಿಗಳ ಮಾಮೂಲಿ ಇದೆಯೆಂದು. ಈ ಹಣವನ್ನು ಜವಾನನಿಂದ ಹಿಡಿದು ಮೇಲ್ಪಟ್ಟ ಅಧಿಕಾರಿಗಳವರೆಗೆ ಹಂಚಿಕೊಳ್ಳುತ್ತಾರೆ, ಇದು ಬಡಜನತೆಯ ದುಡ್ಡಲ್ಲವೇ? ಯಾರು ಹಗಲೂ ರಾತ್ರಿ ದುಡಿಯುತ್ತಾರೋ ಅಂತಹ ಜನರ ಸಾವಿಗೆ ಈ ರಾಕ್ಷಸರೇ ಕಾರಣರಾಗಿದ್ದಾರೆ. ಒಂದು ರೀತಿಯಲ್ಲಿ ಇದನ್ನೆಲ್ಲಾ ನೋಡಿದರೆ ನನಗೆ ಸಂಕಟವಾಗುತ್ತದೆ. ಈ ಬಡಜನರ ಸಂಪಾದನೆ ಹಣವನ್ನು ಈ ಅಧಿಕಾರಿಗಳು ಲಕ್ಷಗಟ್ಟಲೆ ರೂಪದಲ್ಲಿ ಲೂಟಿ ಮಾಡುವುದರ ಮೂಲಕ ನಮ್ಮ ಸರ್ಕಾರಕ್ಕೆ ನಮ್ಮ ಮುಖ್ಯಮಂತ್ರಿಗಳಿಗೆ ಹಾಗೂ ನಮ್ಮ ದೇಶದ ನಾಯಕಿಗೆ ಕೆಟ್ಟ ಹೆಸರು ತರುತ್ತಿದ್ದಾರೆ. ಇಂತಹ ಅಧಿಕಾರಿಗಳನ್ನು ಮುಖ್ಯಮಂತ್ರಿಗಳು ಮೊದಲು ಗಮನಿಸಬೇಕು. ಬೇರೆ ದೇಶದಲ್ಲಿ ಇಂತಹ ಕೃತ್ಯ ನಡೆದಿದ್ದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಸರ್ಕಲ್ ಮಧ್ಯ ನಿಲ್ಲಿಸಿ ಗುಂಡಿಟ್ಟು ಸಾಯಿಸುತ್ತಿದ್ದರು. ಬೇರೆ ಅಧಿಕಾರಿಗಳು ಹುಷಾರಾಗಿರಲಿ ಎಂದು ಈ ರೀತಿ ಅಲ್ಲಿ ಮಾಡುತ್ತಾರೆ. ಅದೇ ರೀತಿ ಇಲ್ಲಿಯೂ ಸಹ ಮಾಡಬೇಕು. ಜನರು ವಿದ್ಯಾವಂತರಾಗಬೇಕು. ವಿದ್ಯೆ ಇದ್ದರೆ ಇದೆಲ್ಲಾ ತಪ್ಪುತ್ತದೆ ಎಂದು ಹೇಳುತ್ತಾರೆ. ಹಾಗಾದರೆ ಪೋಲೀಸ್ ಇಲಾಖೆಯವರು ಎಕ್ಸೈಜ್ ಇಲಾಖೆಯವರು ವಿದ್ಯಾವಂತರಲ್ಲವೇನು? ಅವರುಗಳು ಸಾವಿರಾರು ರೂಪಾಯಿಗಳ ಸಂಬಳ

ತೆಗೆದುಕೊಂಡು ಈ ಕೆಲಸ ಮಾಡುವುದು ಸರಿಯೇ! ಇವರ ತಂದೆತಾಯಿಗಳು ಓದಿಸಲು ಇವರಿಗಾಗಿ ೫-೬ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಸರ್ಕಾರ ೫೦-೬೦ ಸಾವಿರ ರೂಪಾಯಿಗಳನ್ನು ಕಾಲೇಜು ಮಟ್ಟದಲ್ಲಿ ವಿದ್ಯಾಭ್ಯಾಸ ಕೊಡಿಸಲು ಖರ್ಚು ಮಾಡುತ್ತದೆ. ಈ ಹಣ ದೇಶದ ಜನರು ಕೊಟ್ಟ ಹಣವಲ್ಲವೇ ಇದು ತೆರಿಗೆಯಿಂದ ಬಂದ ಹಣವಲ್ಲವೇ ಈ ಹಣದಿಂದ ಓದಿ ಮುಂದೆ ಬಂದವರು ಇಂತಹ ಕೆಲಸ ಮಾಡುವುದನ್ನು ನೋಡಿದರೆ ನಾವೆಲ್ಲಾ ತಲೆತಗ್ಗಿಸಬೇಕಾಗುತ್ತದೆ. ಇವರ ಜೊತೆಗೆ ತಪ್ಪು ಮಾಡಿದವರೇ ಕೋರ್ಟಿಗೆ ಹೋಗಿ ಬಿಡಿಸಿಕೊಳ್ಳುತ್ತಾರೆ. ಇಂತಹವರನ್ನು ದೇವರು ಕ್ಷಮಿಸುವುದಿಲ್ಲ. ಯಾರು ಮುಗ್ಧಜೀವಿಗಳ ಸಾವಿಗೆ ಕಾರಣರಾಗಿದ್ದಾರೋ ಅಂತಹವರನ್ನು ದೇವರು ಎಂದಿಗೂ ಕ್ಷಮಿಸುವುದಿಲ್ಲ. ಈ ವಿಚಾರದಲ್ಲಿ ನಾನು ಮುಖ್ಯಮಂತ್ರಿಗಳಲ್ಲಿ ಕೈಮುಗಿದು ಕೇಳಿಕೊಳ್ಳುವುದೇನೆಂದರೆ ನಾವೆಲ್ಲರೂ ನಿಮ್ಮ ಹಿಂದೆ ಇದ್ದೇವೆ. ತಾವು ಕೂಡಲೇ ಕಾರ್ಯಪ್ರವೃತ್ತರಾಗಿ ಇದನ್ನೆಲ್ಲಾ ಮೊದಲು ತಡೆಗಟ್ಟಬೇಕು.

ಅಧ್ಯಕ್ಷರು.—ಬೆಂಗಳೂರಿನಲ್ಲಿ ಇಂತಿಂತಹ ಕಡೆಗಳಲ್ಲಿ ಇದು ನಡೆಯುತ್ತಾ ಇದೆ ಎಂದು ತಾವು ಮಾಹಿತಿಗಳನ್ನು ಕೊಟ್ಟರೆ ಆಗ ಅದರಿಂದ ಸರ್ಕಾರಕ್ಕೆ ಸಹಾಯವಾಗುತ್ತದೆ. ಆದರೆ ತಾವು ಜನರಲ್ ಆಗಿ ಹೇಳಿದರೆ ಹೇಗೆ ?

ಶ್ರೀ ಕೆ. ಎಚ್. ಹನುಮೇಗೌಡ.—ಈ ಪ್ರಕರಣ ನಡೆದ ಮೇಲೆ ಅನೇಕ ಮಕ್ಕಳು ಬೀದಿಪಾಲಾಗಿವೆ. ಅವುಗಳನ್ನು ನೋಡುವವರು ಯಾರು?

ಅಧ್ಯಕ್ಷರು.—ತಾವು ಏನಿದ್ದರೂ ಸರ್ಕಾರಕ್ಕೆ ಸಹಾಯವಾಗುವಂತಹ ವಿಷಯಗಳಿದ್ದರೆ ಹೇಳಿ ಅದು ಬಿಟ್ಟು ತಾವು ಸರ್ಕಾರಕ್ಕೆ ಬುದ್ಧಿವಾದ ಹೇಳುವುದಾದರೆ ಸರ್ಕಾರದವರಿಗೆ ಬುದ್ಧಿ ಇಲ್ಲ ಎಂದು ಅರ್ಥವೇ?

ಶ್ರೀ ಕೆ. ಎಚ್. ಹನುಮೇಗೌಡ.—ಕಳೆದ ನಾಲ್ಕೈದು ದಿನಗಳಿಂದ ಅನೇಕ ಸಂಸಾರಗಳು ಹಾಳಾದುವು ಮುಖ್ಯಮಂತ್ರಿಗಳು ಹೋಗಿ ನೋಡಿಕೊಂಡು ಬಂದರು. ಪರಿಹಾರವನ್ನೂ ಸಹ ಒದಗಿಸಿದರು. ಇದನ್ನೂ ಹೆಚ್ಚು ಮಾಡಬೇಕು.

ಅಧ್ಯಕ್ಷರು.—ಕೊಟ್ಟ ಸಹಾಯದ ಹಣನ್ನು ಸಹ ತೆಗೆದುಕೊಂಡು ಹೋಗಿ ಮತ್ತೆ ಕುಡಿಯುತ್ತಿದ್ದಾರೆ. ಅದಕ್ಕೆ ಏನು ಮಾಡುವುದು?

ಶ್ರೀ ಕೆ. ಎಚ್. ಹನುಮೇಗೌಡ.—ಜನರು ಆ ಒಂದು ಸ್ಥಿತಿಯಲ್ಲಿ ಇರಬೇಕಾದರೆ ಅದಕ್ಕೆ ನಮ್ಮ ಸಮಾಜವೇ ಹೊಣೆ. ಅವರು ಇರತಕ್ಕಂಥಹ ಸ್ಥಿತಿಯಲ್ಲಿ ಆ ರೀತಿ ನಡೆದುಕೊಳ್ಳುತ್ತಿದ್ದಾರೆ. ಅದನ್ನು ಈ ಸಮಾಜದ ಮುಖಂಡರು ಹಾಗೂ ನಾಯಕರು ಬಿಡಿಸಬೇಕು. ಆ ರೀತಿ ಮಾಡದೆ ಅವರು ಕುಡಿದು ಸಾಯಲಿ ಎಂದು ಬಿಡುವುದಕ್ಕಾಗುತ್ತದೆಯೇ, ಈ ಅನಾಹುತಕ್ಕೆಲ್ಲಾ ಯಾರು ಹೊಣೇ ಯಾರು ಜವಾಬ್ದಾರರು ಎಂಬುದನ್ನು ಕಂಡುಹಿಡಿದು ದಯಾ ದಾಕ್ಷಿಣ್ಯಕ್ಕೆ ಒಳಗಾಗದೆ ಕ್ರಮತೆಗೆದುಕೊಳ್ಳಬೇಕು ಈಗ ಶ್ರೀಮತಿ ಪ್ರಮಿಳಾ ಅವರು ಹೇಳಿದಂತೆ ಈ ಪ್ರಕರಣದಲ್ಲಿ ಅರೆಸ್ಟ್ ಆದವರು ಕೋರ್ಟಿಗೆ ಹೋಗಿ ಬಿಡಿಸಿಕೊಂಡು ಹೋಗುತ್ತಿದ್ದಾರೆ.

ಅಧ್ಯಕ್ಷರು.—ತಮಗೆ ಎಷ್ಟು ಸಮಯ ಬೇಕು ಹೇಳಿ? ನಾನು ಬೆಲ್ಲು ಹೊಡೆದರೆ ಅದಕ್ಕೆ ಬೆಲೆ ಕೊಡಬೇಕು. ಇಲ್ಲದಿದ್ದರೆ ತಾವು ಎರಡು ಗಂಟೆಯ ವರೆಗೆ ಮಾತನಾಡುವುದಿದ್ದರೆ ಮಾತನಾಡಿ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಕೊನೆಯದಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇಂಥಾ ಅನಾಹುತ ಮುಂದೆ ಆಗದಂತೆ ನೋಡಿಕೊಂಡರೆ ತಮ್ಮ ಹೆಸರು ಕೊನೆಯವರೆಗೂ ಉಳಿಯುತ್ತದೆ. ಆದ್ದರಿಂದ ಕರ್ತವ್ಯ ಲೋಪ ಮಾಡಿದ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತು ಬಡಜೀವಿಗಳು ಏನು ತೊಂದರೆಗೆ ಒಳಗಾಗಿದ್ದಾರೆ. ಅವರಿಗೆ ಹೆಚ್ಚಿನ ಸಹಾಯ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

೧೧—೦೦ ಎ. ಎಂ.

ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಬಹಳ ಉತ್ತಮವಾದಂಥ ಸಲಹೆಗಳಿಂದ ಕೂಡಿದಂಥ ಚರ್ಚೆ ಈ ದಿನ ಆಗಿದೆ. ಬೆಂಗಳೂರು ನಗರದಲ್ಲಿ ಮತ್ತು ಮೈಸೂರು ನಗರದಲ್ಲಿ ನಡೆದಂಥ ದುರಂತದ ಬಗ್ಗೆ ನಮ್ಮ ಸನ್ಮಾನ್ಯ ಸದಸ್ಯರೆಲ್ಲಾ ಇಲ್ಲಿ ಭಾಗವಹಿಸಿದ್ದಾರೆ, ಮತ್ತು ಸಲಹೆಗಳನ್ನು ನೀಡಿದ್ದಾರೆ. ಮಾತನಾಡುವಂಥ ಸಂದರ್ಭದಲ್ಲಿ ಇದು ದುಃಖಕರವಾದಂಥಾದ್ದು ಎಂದು ಹೇಳಿದ್ದಾರೆ. ಇದನ್ನು ಯಾರೂ ಒಳ್ಳೆಯ ಘಟನೆ ಎಂದು ಹೇಳುವುದಿಲ್ಲ ಅಥವಾ ಘಟನೆ ಆಗ ಬೇಕು. ಎಂದು ಯಾರೂ ಇಷ್ಟಾನೂ ಪಟ್ಟಿರುವುದಿಲ್ಲ. ಘಟನೆ ನಡೆದಿದೆ, ಇದು ಯಾತಕ್ಕೋಸ್ಕರ ನಡೆದಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕು ಈ ಘಟನೆಗೆ ಸಂಬಂಧಪಟ್ಟಂತೆ ಹೇಳುವುದಾ ದರೆ, ಸರ್ಕಾರ ಮಾರುವಂಥ ಸಾರಾಯಿಯಾಗಲಿ ಅಥವಾ ಸೇಂದಿಯಾಗಲಿ ಇದರ ಕ್ರಯ ಜಾಸ್ತಿ ಇರುವು ದರಿಂದ ಈ ಬಡ ಜನತೆ ಈ ರೀತಿ ಕಳ್ಳಭಟ್ಟಿ ಕುಡಿಯುತ್ತಾರೆ, ಅದನ್ನು ನಿಲ್ಲಿಸಬೇಕು ಎಂದು ಹೇಳು ತ್ತಾರೆ. ಹಾಗಾದರೆ ಈ ಕಳ್ಳಭಟ್ಟಿ ವ್ಯವಹಾರವನ್ನು ಹೇಗೆ ನಿಲ್ಲಿಸುವುದು. ನಾವು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕಾನೂನಿಗೆ ಒಳಪಟ್ಟು ಸರ್ಕಾರ ಕೆಲಸ ಮಾಡಬೇಕಾಗಿದೆ. ಪ್ರೊಹಿಬಿಷನ್ ತಂದರೆ ಈ ಕಳ್ಳಭಟ್ಟಿ ನಿಲ್ಲುತ್ತದೊ ಎಂದು ಹಿಂದೆ ಚರ್ಚೆಯಾಗಿದೆ. ಆದರೆ ಪಾನನಿರೋಧವನ್ನು ಜಾರಿಗೆ ತರುವುದ ರಿಂದ ಕಳ್ಳಭಟ್ಟಿ ಒಂದಕ್ಕೆ ನೂರು ಪಾಲು ಜಾಸ್ತಿಯಾಗಿ ಅನೇಕ ರಾಜ್ಯಗಳಲ್ಲಿ ನಮ್ಮ ರಾಜ್ಯವೂ ಮೊದ ಲ್ಗೊಂಡು ಇಂತಹ ಕಳ್ಳಭಟ್ಟಿ ಕುಡಿದು ಸಾವಿಗೆ ಈಡಾಗಿದ್ದಾರೆ ; ಶಕ್ತಿಯನ್ನು ಕಳೆದುಕೊಂಡಿದ್ದಾರೆ, ಕಣ್ಣನ್ನು ಕಳೆದುಕೊಂಡಿದ್ದಾರೆ. ಇದನ್ನೆಲ್ಲಾ ನಾವು ಕೇಳಿ ತಿಳಿದಿದ್ದೇವೆ, ನೋಡಿದ್ದೇವೆ. ಆದುದರಿಂದ ಪಾನನಿರೋಧವನ್ನು ಜಾರಿಗೆ ತರುವುದರಿಂದ ಇದು ನಿಲ್ಲುವುದಿಲ್ಲ ಎಂದು ಎಲ್ಲರೂ ಸಾಕಷ್ಟು ಒಪ್ಪಿದ್ದಾರೆ, ನಮ್ಮ ದೇಶದ ಆಡಳಿತವನ್ನು ವಹಿಸಿಕೊಂಡ ಮೇಲೆ ಪೂರ್ಣವಾಗಿ ಪಾನನಿರೋಧವನ್ನು ತರಲಿಕ್ಕೆ ಸಾಧ್ಯ ವಾಗದೇ ಹೋದರೆ, ಕುಡಿಯುವ ಚಟವನ್ನು, ಕುಡಿಯುವಂಥ ಅಭ್ಯಾಸವನ್ನು ತಪ್ಪಿಸಲಿಕ್ಕೆ ಇನ್ನು ಯಾವ ತರಹ ಕ್ರಮ ಕೈಗೊಳ್ಳಬೇಕು ಎಂದು ಬೇಕಾದಷ್ಟು ಚರ್ಚೆಗಳಾಗಿವೆ. ಕುಡಿಯುವಂಥ ಪದಾರ್ಥಗಳ ಬೆಲೆಯನ್ನು ಅಂದರೆ ಸಾರಾಯಿ ಕ್ರಯವನ್ನು ಜಾಸ್ತಿ ಮಾಡಿದರೆ, ಸೇಂದಿ ಕ್ರಯವನ್ನು ಜಾಸ್ತಿ ಮಾಡಿದರೆ ಬಡವರು ಕುಡಿಯುವುದನ್ನು ಬಿಡುತ್ತಾರೆ, ಆದುದರಿಂದ ಇವುಗಳ ಬೆಲೆಯನ್ನು ಸ್ವಲ್ಪ ಜಾಸ್ತಿ ಮಾಡಬೇಕು ಎನ್ನುವುದರ ಬಗ್ಗೆಯೂ ಕೂಡ ಸಾಕಷ್ಟು ಚರ್ಚೆಗಳಾಗಿದೆ. ಆ ಮೇಲೆ ಬಡವರು ಇರತಕ್ಕಂಥ ಜಾಗದಲ್ಲಿ ಸಾರಾಯಿ, ಸೇಂದಿ ಅಂಗಡಿಗಳನ್ನು ಇಟ್ಟರೆ ಜಾಸ್ತಿ ಕುಡಿಯುತ್ತಾರೆ, ಅದನ್ನು ಬಹಳ ದೂರ ಇಟ್ಟರೆ ಕುಡಿಯುವುದಿಲ್ಲ ಅಥವಾ ಕಡಿಮೆ ಮಾಡುತ್ತಾರೆ, ಆದುದರಿಂದ ಬಡ ಜನತೆ ಇರುವ ಜಾಗದಲ್ಲಿ ಅಂಗಡಿಗಳನ್ನು ಇಡಬಾರದು ಎಂದು ಚರ್ಚೆಯಾಗಿದೆ. ಇಷ್ಟೆಲ್ಲಾ ಆದರೂ ಕುಡಿಯು ವರ ಸಂಖ್ಯೆ ಕಡಿಮೆ ಆಗಿದೆಯೋ, ಕಡಿಮೆ ಆಗಿಲ್ಲ, ಜಾಸ್ತಿಯಾಗುತ್ತಾ ಇದೆ. ಇದನ್ನು ಹೇಗೆ ನಿಲ್ಲಿಸು ವುದು ? ಪೋಲೀಸ್ ಸಿಬ್ಬಂದಿ ಇದೆ, ಅಬ್ಕಾರಿ ಸಿಬ್ಬಂದಿ ಇದೆ. ನಮ್ಮ ದೇಶದಲ್ಲಿ ಇರುವಂಥ ಜನ ಸಂಖ್ಯೆಗೆ ನಮ್ಮ ದೇಶದಲ್ಲಿ ಇವತ್ತು ಇದು ವ್ಯಾಪಕವಾಗಿ ಹರಡಿಕೊಂಡಿರುವಂಥಾದ್ದನ್ನು ಕೇವಲ ಸರ್ಕಾರ ಒಂದರಿಂದಲೇ ಇದನ್ನು ನಿಲ್ಲಿಸಲಿಕ್ಕೆ ಸಾಧ್ಯವಾಗುತ್ತದೆಯೋ ಎಂದು ತಾತ್ವಿಕವಾಗಿ ನಾವು ವಿಚಾರ ಮಾಡಬೇಕಾಗಿದೆ. ನಾವೂ ಹೇಳಬಹುದು. ಪೋಲೀಸ್ ಇಲಾಖೆಯವರು ಅಥವಾ ಅಬ್ಕಾರಿ ಇಲಾಖೆಯ ವರು ಏನೂ ಕೆಲಸ ಮಾಡಿಲ್ಲ, ಶಾಮೀಲಾಗಿದ್ದಾರೆ ಎಂದು ಜನರಲ್ ರಿಮಾರ್ಕ್ಸ್ ಸಾಮಾನ್ಯವಾಗಿ ಮಾಡಿದರೆ ಅದರಿಂದ ಕಾರ್ಯಸಾಧನೆಯಾಗುವುದಿಲ್ಲ, ನಾನೂ ಮಾಡಬಹುದು. ಅದರ ಬದಲು ನಮ್ಮ ಕಾನೂನಿನ ಮಿತಿ ಏನಿದೆ, ಇವತ್ತು ರಾಜ್ಯಾಂಗದಲ್ಲಿ, ಸಂವಿಧಾನದಲಿ ನಮಗೆಷ್ಟು ಅವಕಾಶವಿದೆ ಎಂದು ನೋಡಬೇಕಾಗಿದೆ, ಒಂದು ಕಡೆ ಎಕ್ಸೈಜ್ ಇಲಾಖೆಯವರು, ಪೋಲೀಸ್ ಇಲಾಖೆಯವರು ಹೋಗಿ ಮಾನವೀಯತೆಯನ್ನು ಇಟ್ಟುಕೊಂಡು ಹೋಗಿ ನೋಡುತ್ತಾರೆ ಅಂದರೆ ಯಾರನ್ನೂ ಹಿಡಿಯಲಿಕ್ಕೆ ಯಾವ ಸರ್ಕಾರದ ಕೈಯಲ್ಲೂ ಸಾಧ್ಯತೆಯಿಲ್ಲ. ಬಹುಶಃ ದೇವರೇ ಬಂದರೆ ನಿಲ್ಲಿಸುತ್ತೇನೆ ಎಂದು ಹೇಳುವುದಕ್ಕೆ ಸಾಧ್ಯತೆಯಿಲ್ಲ. ಇನ್ನು ಮಾನವೀಯತೆಯನ್ನು ಬಿಟ್ಟು ಅವರು ಹಿಡಿಯಬೇಕು ಅಂದರೆ ಪ್ರಜಾಪ್ರಭುತ್ವದಲ್ಲಿ ಅದಕ್ಕೆ ಅವಕಾಶವಿಲ್ಲ. ಪ್ರಜಾಪ್ರಭುತ್ವದ ಪ್ರಕಾರ ಪೋಲೀಸ್ ಇಲಾಖೆಯವ ರಿಗೂ, ಎಕ್ಸೈಜ್ ಇಲಾಖೆಯವರಿಗೂ ಹಿಡಿಯುವುದಕ್ಕೆ ಅಧಿಕಾರವಿಲ್ಲ. ಏನಪ್ಪ ಸಾರಾಯಿ ಕಾಯಿಸುತ್ತಾ ಇದ್ದೀಯ, ಕಾಯಿಸುವುದು ತಪ್ಪು, ನಿನ್ನ ಮೇಲೆ ಕಾನೂನು ಪ್ರಕಾರ ಕೇಸ್ ಮಾಡಬೇಕು ಗೌರವವಾಗಿ ಬಾ ಎಂದು ಪೋಲೀಸರು ಕೇಳಿದರೆ ಹಿಂದೇನೇ ಕರಿ ಕೋಟು ಹಾಕಿಕೊಂಡು ಲಾಯರ್ ಇರುತ್ತಾನೆ. ಯಾವ ಕಾನೂನು ಪ್ರಕಾರ ಅರೆಸ್ಟ್ ಮಾಡುತ್ತೀರಿ, ಯಾವ ಇದರ ಪ್ರಕಾರ ಮಾಡಿದ್ದೀರಾ, ೧೨ ಗಂಟೆ

ಇಟ್ಟುಕೊಳ್ಳುವುದಕ್ಕೆ ನಿಮಗೇನು ಅಧಿಕಾರವಿದೆ ಎಂದು ಹೇಳಿ ಜಾಮೀನಿನ ಮೇಲೆ ಬಿಡಿ ಎಂದು ಹೇಳುತ್ತಾನೆ. ಸಾವಿರಾರು ಕೇಸುಗಳನ್ನು ಕೋರ್ಟಿನಲ್ಲಿ ಹಾಕಿದ್ದೇವೆ ಒಂದು ಕೇಸಿನಲ್ಲೂ ಸಹ ಸಾಕ್ಷಿ ಹೇಳುವುದಕ್ಕೆ ಸಮಾಜ ಬರುವುದಿಲ್ಲ. ಬಂದು ಸಾಕ್ಷಿ ಹೇಳುವುದಕ್ಕೆ ಯಾರೂ ತಯಾರಾಗಿಲ್ಲ. ಅದಕ್ಕಿಂತ ಹೆಚ್ಚಾಗಿ, ಯಾರು ಈಸಿಕೊಂಡು ಕುಡಿದಿದ್ದಾರೆ, ಕುಡಿದವರನ್ನು ಎಲ್ಲಿಂದ ಕುಡಿದೆ ಅಂದರೆ ಇಂಥಾ ಕಡೆ ಕುಡಿದಿದ್ದೇನೆ ಎಂದು ಹೇಳುವುದಕ್ಕೆ ತಯಾರಿಲ್ಲ. ಆದರಿಂದ ಯಾರಿಗೆ ಪನಿಷ್‌ಮೆಂಟ್ ಕೊಡುತ್ತೀರಿ. ಚೀಫ್ ಮಿನಿಸ್ಟರು ಪನಿಷ್‌ಮೆಂಟ್ ಕೊಡುವುದಕ್ಕೆ ಆಗುವುದಿಲ್ಲ, ಶಾಸನ ಸಭೆ ಪನಿಷ್‌ಮೆಂಟ್ ಕೊಡುವುದಕ್ಕೆ ಆಗುವುದಿಲ್ಲ, ಪನಿಷ್‌ಮೆಂಟ್ ಕೊಡಬೇಕಾಗಿರುವುದು ಕೋರ್ಟ್. ಕೋರ್ಟಿನಲ್ಲಿ ತೆಗೆದುಕೊಂಡು ಹೋದ ತಕ್ಷಣ, ಕಾನೂನು ಇರುತ್ತದೆ, ಲಾಯರುಗಳನ್ನು ಇಟ್ಟುಕೊಳ್ಳುತ್ತಾರೆ ಬಿಡುಗಡೆಯಾಗಿ ಬರುತ್ತಾರೆ. ಬಂದು ಪುನ: ಶುರು ಮಾಡುತ್ತಾರೆ ಯಾರು ಇದನ್ನು ನಿಲ್ಲಿಸಬೇಕಾಗಿರುವುದು ಇದನ್ನು ನಿಲ್ಲಿಸಬೇಕಾಗಿರುವುದು ಸರ್ಕಾರ ಎಂದು ಹೇಳುತ್ತಾರೆ. ಮೊನ್ನೇ ಮೂರೇ ಮೂರು ತಿಂಗಳಲ್ಲಿ ಸುಮಾರು ೨.೫ ಲಕ್ಷ ಲೀಟರುಗಳನ್ನು ಹಿಡಿದು ತೆಗೆದುಕೊಂಡು ಹೋಗಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ವಿಧಾನ ಸೌಧದ ಮುಂದೆ, ಕಬ್ಬನ್ ಪಾರ್ಕ್‌ನಲ್ಲಿ ಅಥವಾ ಮಹಾತ್ಮಾಗಾಂಧಿ ರೋಡಿನಲ್ಲಿ ನಿಲ್ಲಿಸಿ ಗುಂಡು ಹೊಡೆಯುವುದಕ್ಕೆ ಅಧಿಕಾರ ಯಾವ ಸರ್ಕಾರಕ್ಕೂ ಇಲ್ಲ, ಯಾವ ಶಾಸನ ಸಭೆಗೂ ಇಲ್ಲ.

ಆದುದರಿಂದ, ಇದನ್ನು ಯಾವ ರೀತಿ ನಿಲ್ಲಿಸಬೇಕು ? ಇವರನ್ನು ಹಿಡಿದುಕೊಂಡು ಹೋದ ತಕ್ಷಣ ನ್ಯಾಯಾಲಯದವರು ಬಿಟ್ಟುಬಿಡುತ್ತಾರೆ. ಮತ್ತೆ ಒಂದೆರಡು ಸಲ ಹಿಡಿದುಕೊಂಡು ಹೋದರೆ, ಪೋಲೀಸಿನವರು ಹಿಂಸೆ ಕೊಡುತ್ತಾರೆ—ಮಾಮೂಲು ಕೊಡಲಿಲ್ಲವೆಂದು ಹಿಡಿದುಕೊಂಡು ಬಂದಿದ್ದಾರೆ; ಅಬ್ಕಾರಿ ಇಲಾಖೆಯವರೂ ಸಹ ಮಾಮೂಲಿ ಕೊಡಲಿಲ್ಲವೆಂದು ಹಿಡಿದುಕೊಂಡು ಬಂದಿದ್ದಾರೆಂದು ಅವರು ಹೇಳಿದರೆ ನ್ಯಾಯಾಲಯದವರು ಸ್ಟ್ರಿಕ್ಚರ್ಸ್ ಪಾಸ್ ಮಾಡುತ್ತಾರೆ. ಸರಿ; ನಾವು ಸರ್ಕಾರಿ ಸಾರಾಯಿಯನ್ನು ಎರಡು ರೂಪಾಯಿಗೆ ಕೊಡುತ್ತೇವೆ ಎಂದರೆ, ಕೊಡಲೀ ಅವರು ನಾಲ್ಕಾಣೆಗೆ ಕೊಡುತ್ತಾರೆ; ಇಪ್ಪತ್ತು ಪೈಸೆಗೆ, ಮುವತ್ತು ಪೈಸೆಗೆ ಕೊಡುತ್ತಾರೆ. ಆದುದರಿಂದ, ಮೂಲಭೂತವಾಗಿ ಕುಡಿಯುವ ಚಟವುಳ್ಳ ಜನರಿಗೆ ಶಿಕ್ಷಣ ಕೊಟ್ಟು ಕುಡಿಯಬಾರದೆಂದು ಹೇಳಬೇಕಾಗುತ್ತದೆ ಕಾನೂನು ಇದೆ. ಆದರೆ, ಇದನ್ನು ಬುದ್ಧಿ ಹೇಳಿ ತಿದ್ದುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಕಾನೂನಿನಲ್ಲಿ ಸರಿ ಮಾಡುವುದಕ್ಕಾಗುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ, ಇವತ್ತು ಅವರನ್ನು ಹಿಡಿಯಬಹುದು; ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಬಹುದು. ಆದರೆ, ಅವರಿಗೆ ಬೆಂಬಲ ಕೊಡುವಂಥ ನಾಗರೀಕರೂ ನಮ್ಮಲ್ಲಿದ್ದಾರೆ. ಅವರನ್ನು ಏತಕ್ಕೆ ಹಿಡಿದುಕೊಂಡು ಹೋದರು ? ಏತಕ್ಕ ಅವರಿಗೆ ತೊಂದರೆ ಕೊಟ್ಟರು ? ಎಂದು ಕೇಳುವ ನಾಗರೀಕರೂ ಇದ್ದಾರೆ. ಇದು ನಮ್ಮ ಸಮಾಜದಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಕಾಯಿಲೆ. ಕಳೆದ ಮೂರು ತಿಂಗಳಲ್ಲಿ ಸುಮಾರು ೨,೦೧೪ ಜನರನ್ನು ಈ ಸಂಬಂಧವಾಗಿ ದಸ್ತಗಿರಿ ಮಾಡಲಾಗಿದೆ; ಇದರ ಜೊತೆಗೆ ಸುಮಾರು ೨೫೭ ಕಾರು ಮತ್ತು ಲಾರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಆದರೆ, ಹಾಗೆ ವಶಪಡಿಸಿಕೊಂಡ ತಕ್ಷಣ ಅವುಗಳನ್ನು ಇಟ್ಟುಕೊಳ್ಳುವ ಅಧಿಕಾರವಿಲ್ಲ. ಮಾರನೆ ದಿವಸ ಬಿಟ್ಟುಬಿಡುತ್ತಾರೆ. ಆದುದರಿಂದ, ಈ ರೀತಿಯಾಗಿ ನಾವು ಆವೇಶಭರಿತರಾಗಿ ಮಾತನಾಡುವುದು ಸರಿಯಲ್ಲ. ವಿಷಯ ತಿಳಿದ ತಕ್ಷಣ ನಾನು ಆಸ್ಪತ್ರೆಗೆ ಹೋದೆ. ಮಾನ್ಯ ಅಧ್ಯಕ್ಷರು ತಿಳಿಸಿದ ಹಾಗೆ, ಸಾವಿರ ರೂಪಾಯಿಗಳನ್ನು ಸಮಾಧಿ ಖರ್ಚಿಗೆಂದು ಕೊಟ್ಟರೆ ಆ ದುಡ್ಡಿನಲ್ಲೇ ಪುನಃ ಹೋಗಿ ಕುಡಿದು ಬಂದಿದ್ದಾರೆ; ನಮ್ಮ ಪದ್ಧತಿ ಪ್ರಕಾರ, ಕುಡಿದು ನೃತ್ಯ ಮಾಡುತ್ತಾ ಶವ ಸಂಸ್ಕಾರ ಮಾಡಿದರೆ ಮಾತ್ರ ಸತ್ತವನ ಆತ್ಮ ಸ್ವರ್ಗಕ್ಕೆ ಹೋಗುತ್ತದೆ; ಇಲ್ಲದಿದ್ದರೆ ಹೋಗುವುದಿಲ್ಲ; ವಾಪಸ್ಸು ಬಂದು ಭೂತವಾಗಿರುತ್ತದೆ ಎಂದು ಅವರು ಹೇಳುತ್ತಾರೆ; ಇದನ್ನೆಲ್ಲ ಹೇಗೆ ನಿಲ್ಲಿಸುತ್ತೀರಿ ? ಯಾವ ಕಾನೂನು ಪ್ರಕಾರ ನಿಲ್ಲಿಸುತ್ತೀರಿ ? ದಯವಿಟ್ಟು ತಿಳಿಸಬೇಕು. ನಡೆದದ್ದೆಲ್ಲ ಹೃದಯ ವಿದ್ರಾವಕ ಘಟನೆಯೇ, ಆಸ್ಪತ್ರೆಯಲ್ಲಿ ಸತ್ತವರಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ನಾನು ವಿಧಾನ ಸಭೆಯಲ್ಲಿ ಘೋಷಣೆ ಮಾಡಿದ ಅರ್ಧ ಗಂಟೆಯಲ್ಲೇ ಆ ವಿಚಾರ ಎಲ್ಲ ಕಡೆ ಪ್ರಚಾರವಾಯಿತು. ಸರಿ, ಕೂಡಲೇ ಯಾರು ಯಾರು ಸತ್ತರೋ ಅವರನ್ನೆಲ್ಲ ತೆಗೆದುಕೊಂಡು ಆಸ್ಪತ್ರೆಗೆ ಬಂದರು ; ಆದರೆ, ಆಸ್ಪತ್ರೆಗೆ ಸೇರಿರುವವರಲ್ಲಿ ಮೂರನೆ ಎರಡು ಭಾಗದಷ್ಟು ಜನರನ್ನು ವೈದ್ಯರುಗಳು ಉಳಿಸಿದ್ದಾರೆ. ಯಾರು ಯಾರು ಎಲ್ಲೆಲ್ಲಿ ಯಾವ ಯಾವ ಕಾರಣದಿಂದ ಸತ್ತರೋ ಗೊತ್ತಿಲ್ಲ. ಸ್ವಾಮಿ, ಕಣ್ಣು ಉರೀತಿತ್ತು ; ಕಿವಿ ಉರೀತಿತ್ತು ಎಂದು ತೆಗೆದು

ಕೊಂಡು ಬಂದಿದ್ದಾರೆ ; ಹೆಣಕ್ಕೆ ಸಮಾಧಿ ಮಾಡುವುದಕ್ಕೆ ಸಾವಿರ ರೂಪಾಯಿ ಕೊಡಿ ಎಂದು ಕೇಳುತ್ತಿದ್ದಾರೆ : ಆದುದರಿಂದ, ಸಮಾಜದಲ್ಲಿ ಇವೆಲ್ಲಾ ಇರುವಾಗ, ನಾವು ಇದರ ಬಗ್ಗೆ ಕೂಲಂಕುಷವಾಗಿ ಯೋಚನೆ ಮಾಡಿ, ನಮ್ಮ ಮಿತಿಯೊಳಗೆ ಏನೇನು ಮಾಡಬೇಕೋ ಮತ್ತು ಏನೇನು ಮಾಡುವುದಕ್ಕೆ ಸಾಧ್ಯತೆ ಇದೆಯೋ ಎನ್ನುವುದನ್ನು ನೋಡಬೇಕಾಗುತ್ತದೆ. ಪೋಲಿಸ್ ಇಲಾಖೆಗೆ ಕಳ್ಳಭಟ್ಟಿಯವರನ್ನು ಪೂರ್ಣವಾಗಿ ಹಿಡಿಯುವುದೊಂದೇ ಕೆಲಸವಲ್ಲ. ತಾವೇ ಒಪ್ಪಿಕೊಂಡ ಹಾಗೆ ಅವರಿಗೆ ದೇಶದಲ್ಲಿ ಬೇಕಾದಷ್ಟು ಕೆಲಸವಿದೆ. ಹದಿನಾಲ್ಕು ಸಾವಿರ ಜನರಿಗೆ ಒಬ್ಬ ಪೋಲಿಸ್ ಪೇದೆಯನ್ನು ಕೊಡುವುದಕ್ಕೆ ನಮ್ಮ ಕೈಯಲ್ಲಿ ಇನ್ನೂ ಆಗಿಲ್ಲ. ಆತ ದೇಶದಲ್ಲಿ ಸಂಚಾರ ವ್ಯವಸ್ಥೆಯನ್ನು ನಿಯಂತ್ರಿಸಬೇಕು ; ಕಳ್ಳತನವಾಗುವುದನ್ನು ತಪ್ಪಿಸಬೇಕು , ಕಳ್ಳರನ್ನು ಹಿಡಿಯಬೇಕು , ಬೇರೆ ರೀತಿಯ ವ್ಯವಹಾರಗಳನ್ನು ತಡೆಗಟ್ಟಬೇಕು , ಎಲ್ಲಾ ಕಡೆ ಸಂಚಾರ ಮಾಡಬೇಕು ಮತ್ತು ಶಿಸ್ತು ಹಾಗೂ ಕಾನೂನು ಪರಿಪಾಲನೆ ಮಾಡಬೇಕು. ಜೊತೆಗೆ ಎಕ್ಸೈಸ್ ರೇಡ್, ಇನ್ನೊಂದು ರೇಡ್ ಮಾಡಬೇಕು. ಆದರೂ ಅವನ ಮಿತಿಯೊಳಗೆ ಅವನು ಕೆಲಸ ಮಾಡುತ್ತಿದ್ದಾನೆ. ಇಂಥಾ ಹೃದಯ ವಿದ್ರಾವಕ ಘಟನೆ ನಡೆದಾಗ ಸತ್ತು ಹೋದವರ ಬಳಿಗೆ ಹೋಗಿ, ನಾನು ಸರ್ಕಾರದಿಂದ ಸಾವಿರ ರೂಪಾಯಿ ಕೊಡಿಸುತ್ತೇನೆಂದು ಏಜೆಂಟ್ ಆಗಿ ಹೋಗುವವರೂ ಸಮಾಜದಲ್ಲಿ ಹುಟ್ಟಿಕೊಂಡರೆ ಹೇಗೆ ? ಅದೇ ರೀತಿ ಪೋಲೀಸ್ ಅಥವಾ ಇನ್ನೊಂದು ಇಲಾಖೆಯಲ್ಲಿ ಕೆಲಸ ಮಾಡುವವರೂ ಇರಬಹುದು. ಅಂದ ಮಾತ್ರಕ್ಕೇ, ಒಬ್ಬ ಅಧಿಕಾರಿ ತಪ್ಪು ಮಾಡಿದ ಎಂದರೆ ಆತನನ್ನು ಸೇವೆಯಿಂದ ವಜಾ ಮಾಡುವುದಕ್ಕೆ ಅಧಿಕಾರವಿದೆಯೇ ? ಏನಿದೆ ಸರ್ಕಾರಕ್ಕೆ ಅಧಿಕಾರ ? ನಮಗೆ ಸರಿಯಾದ ಮಾಹಿತಿ ಸಿಕ್ಕಿದರೆ ಮತ್ತು ಅವನೇ ನಿಜವಾಗಿಯೂ ಇದರಲ್ಲಿ ಭಾಗಿಯಾಗಿದ್ದಾನೆಂದು ಗೊತ್ತಾದರೆ ಆತನನ್ನು ಸಸ್ಪೆಂಡ್ ಮಾಡಿ ವಿಚಾರಣೆ ನಡೆಸಬಹುದು. ವಿಚಾರಣೆ ಸಮಯದಲ್ಲಿ ಅವನ ವಿರುದ್ಧ ಸಾಕ್ಷ್ಯ ಹೇಳುವುದಕ್ಕೆ ಯಾರು ಬರುತ್ತಾರೆ ? ಅಯ್ಯೋ ಮಕ್ಕಳಿಂದಿಗ, ವಯಸ್ಸಿಗೆ ಬಂದ ಮಗಳಿದ್ದಾಳೆ ಹೆಚ್ಚಿಗೆ ಮಕ್ಕಳಿದ್ದಾರೆ, ನಿವೃತ್ತನಾಗುವ ಕಾಲ, ಏತಕ್ಕೆ ತೊಂದರೆ ಕೊಡುತ್ತೀರಿ, ಕಡ್ಡಾಯ ನಿವೃತ್ತಿಯನ್ನಾದರೂ ಮಾಡಿ ಎಂದು ಎಷ್ಟೋ ಜನ ಬರುತ್ತಾರೆ. ಇದೊಂದು ವಿಷ ಚಕ್ರ. ಇದು ಎಲ್ಲಾ ಕಡೆ ಆವರಿಸಿಕೊಂಡು ಕುಳಿತಿದೆ. ರೈಲಿನಲ್ಲಿ ಸುಖವಾಗಿ ದೆಹಲಿ ತಲುಪಬೇಕೆಂಬ ಆಸೆ ಪ್ರಯಾಣಿಕರಿಗೆ, ಆದರೆ, ಮಧ್ಯೆ ಕಂಬಿ ತಪ್ಪಿ, ಅಪಘಾತದಲ್ಲಿ ಆರುನೂರು ಜನ ಸತ್ತು ಹೋಗುತ್ತಾರೆ. ಇದಕ್ಕೆ ಯಾರು ಜವಾಬ್ದಾರರು ? ರೈಲು ಬೀಳಬೇಕೆಂಬ ಇಷ್ಟ ಯಾರಿಗೆ ಇರುತ್ತದೆ ? ಆಕಾಶದಲ್ಲಿ ವಿಮಾನ ಹೋಗುತ್ತಾ ಇರುತ್ತದೆ. ಅದರಲ್ಲಿ ಸುಖವಾಗಿ ತಲುಪಬೇಕೆಂಬುದು ಪ್ರಯಾಣಿಕರ ಆಸೆ. ಮಧ್ಯೆ ಬೆಂಕಿ ಹತ್ತಿಕೊಂಡು ಬಿದ್ದು ಹೋಗಿ ಮುನ್ನೂರು ಜನ ಸತ್ತು ಹೋಗುತ್ತಾರೆ. ಇದಕ್ಕೆ ಯಾರು ಜವಾಬ್ದಾರರು ? ಸುಪ್ರೀಂ ಕೋರ್ಟ್‌ನ ಕಟ್ಟಡಕ್ಕೆ ಬೆಂಕಿ ಬಿದ್ದು ಲಕ್ಷಾಂತರ ರೂಪಾಯಿ ದಾಖಲೆ ಪತ್ರಗಳು ಬೆಂದು ಹೋದವು. ಇದಕ್ಕೆ ಯಾರು ಜವಾಬ್ದಾರರು? There are all the issues of accident an accident uncalled for and nobody wants these incidents. ಇದರಿಂದ ಯಾರಿಗೆ ತೃಪ್ತಿ ಇದೆ? ಸಾರಾಯಿ ಮಾರುವವರಿಗೂ ಇವರನ್ನು ಕೊಲ್ಲಬೇಕೆಂಬ ಇಷ್ಟವಿಲ್ಲ. ನಾವಿದನ್ನು ಆಳವಾಗಿ ವಿಚಾರ ಮಾಡೋಣ. ಅವರನ್ನು ಹಿಡಿಯುತ್ತೇವೆ , ದಂಡ ಹಾಕುತ್ತೇವೆ. ಆದರೆ, ಎಷ್ಟು ಹಿಡಿದರೂ ಅವರು ಮಾಡುತ್ತಾ ಇರುತ್ತಾರೆ. ಕೊಲೆ ಮಾಡಿದವನನ್ನು ತೂಗಿ ಹಾಕಬೇಕೆಂದು ಹೇಳುತ್ತೇವೆ. ಆದರೆ, ಕೊಲ್ಲುವವರು ನಿಲ್ಲಿಸಿದ್ದಾರೇನು ? ಆದುದರಿಂದ, ಇದನ್ನೆಲ್ಲ ಸರ್ಕಾರದ ಅಧಿಕಾರಕ್ಕೊಳಪಟ್ಟು ಅಷ್ಟರಮಟ್ಟಿಗೆ ಮಾಡಬೇಕು. ಏನು ತಿದ್ದುಪಡಿ ತರಬೇಕೆಂದು ಯೋಚನೆ ಮಾಡೋಣ. ತಿದ್ದುಪಡಿ ತರುವುದಕ್ಕೆ ಅವಕಾಶವಿದೆಯೋ ಎನ್ನುವುದನ್ನೂ ನೋಡೋಣ. ತಿದ್ದುಪಡಿ ತಂದರೆ ಅದು ಸುಪ್ರೀಂ ಕೋರ್ಟಿನಲ್ಲಿ ಅಥವಾ ಹೈಕೋರ್ಟಿನಲ್ಲಿ ನಿಲ್ಲುತ್ತದೆಯೋ ಎಂದು ಆಲೋಚನೆ ಮಾಡಬೇಕು. ಸುಮ್ಮನೇ ಏನೋ ಒಂದು ಘಟನೆ ನಡೆಯಲಿ ಅದಕ್ಕೆ ಸರ್ಕಾರ ರಾಜೀನಾಮೆ ಕೊಡಬೇಕು , ಒಂದು ಹಸು ನಾಲ್ಕು ಕರು ಹಾಕಿತು, ಪಶುಸಂಗೋಪನಾ ಸಚಿವರು ರಾಜೀನಾಮೆ ಕೊಡಬೇಕು , ಒಂದು ಹಸು ನಾಲ್ಕು ತಿಂಗಳು ಕರು ಹಾಕಲೇ ಇಲ್ಲ, ಏತಕ್ಕೆ ಕರ ಹಾಕಲಿಲ್ಲ, ರಾಜೀನಾಮೆ ಕೊಡಬೇಕು ಎಂದೆಲ್ಲಾ ಕೇಳುವುದೇ ? Where are the issues and what are the issues. ಇದೆಲ್ಲಾ ಆಗಬೇಕೆಂದು ಯಾರಿಗೆ ಇಷ್ಟವಿದೆ , ಸರ್ಕಾರ ಲಕ್ಷಾಂತರ ಲೀಟರು ಕಳ್ಳಭಟ್ಟಿಯನ್ನು ಹಿಡಿದಿದೆ. ಅದನ್ನು ಬಹಿರಂಗವಾಗಿ ನ್ಯಾಯಾಲಯದ ಮುಂದೆ ಹಾಜರ್ಪಡಿಸಿದೆ. ಕಾನೂನು ಪ್ರಕಾರ ಇಷ್ಟನ್ನು ಸರ್ಕಾರ ಮಾಡುವುದಕ್ಕೆ ಸಾಧ್ಯವಿದೆ. ಎಲ್ಲರನ್ನೂ ಕರೆದುಕೊಂಡು ಬಂದು ಗುಂಡಿಕ್ಕಿರೆಂದು ಹೇಳುವುದಕ್ಕೆ ಇಲ್ಲೇನು ಮಾರ್ಷಲ್ ಲಾ ಇಲ್ಲ.

ಒಬ್ಬ ಅಪರಾಧಿಯನ್ನು ಅಥವಾ ಕಳ್ಳನನ್ನು ಹಿಡಿದುಕೊಂಡು ಬಂದು ಒಂದರ್ಧ ಗಂಟೆ ಕಾಲ ಜಾಸ್ತಿ ಪೋಲೀಸ್ ಸ್ಟೇಷನ್ನಿನಲ್ಲಿ ಇಟ್ಟುಕೊಂಡರೆ ಅಥವಾ ಹೊಡೆದರೆ ಅದಕ್ಕೆ ಕಾನೂನು ಕೇಳುತ್ತಾರೆ. ಅವರನ್ನು ಹೊಡೆಯಲೂ ಬಾರದು, ಇಟ್ಟುಕೊಳ್ಳಲೂ ಬಾರದು. ಕಳ್ಳತನ ಮಾಡಿದವನಿಗೆ ಮೈಸೂರುಪಾಕು, ಖಾರ, ಕಾಫಿ ಕೊಟ್ಟು ಕಳ್ಳತನ ಮಾಡಿದ್ದೀಯಾ ಎಂದು ಕೇಳಬೇಕು. ಅತ ಒಪ್ಪಿಕೊಂಡರೆ ಚಾರ್ಜ್ ಷೀಟ್ ಹಾಕಬೇಕು, ಇಲ್ಲದಿದ್ದರೆ ಬಿಟ್ಟುಬಿಡಬೇಕು. ಒಂದು ವೇಳೆ, ಸಬ್ ಇನ್ಸ್‌ಪೆಕ್ಟರು ಕದ್ದಿದ್ದೀಯ ಇಲ್ಲವೇ ಎಂಬುದನ್ನು ನಿಜ ಹೇಳು ಎಂದು ಕಳ್ಳನಿಗೆ ಒದೆಯುವುದಕ್ಕೆ ಹೋದರೆ ಅಥವಾ ಒದ್ದರೆ ಯಾವ ಕಾನೂನು ಪ್ರಕಾರ ಸಬ್ ಇನ್ಸ್‌ಪೆಕ್ಟರ್ ಒದ್ದರು, ಅವರನ್ನು ಸಸ್ಪೆಂಡ್ ಮಾಡಿ ಎಂದು ಹೇಳುವುದು ; ಈ ದೇಶದಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ, ಮಾನವನ ಹಕ್ಕಿಗೆ ಚ್ಯುತಿ ಬಂದಿದೆ, ನಿರಪರಾಧಿಗಳಿಗೆ ಯಾವ ರೀತಿಯ ರಕ್ಷಣೆಯೂ ಇಲ್ಲ ಎಂದು ಹೇಳುವುದನ್ನು ಇವತ್ತು ಕಾಣುತ್ತಿದ್ದೇವೆ. ಆದರಿಂದ ಯಾವ ತರಹ ಯಾರಿಗೆ ರಕ್ಷಣೆ ಕೊಡಬೇಕೆಂಬುದನ್ನು ಸಮಾಜ ತೀರ್ಮಾನ ಮಾಡಬೇಕಾಗಿದೆ. What is the way out ? Show it ? I want to know. I am very glad that though the Opposition Members are not here today, our own Party people have taken up this issue seriously and have discussed it at length. But what is the way out ? ಇವತ್ತಿನ ದಿವಸ, ಇದಕ್ಕೆಲ್ಲ ಮೂಲ ರಾಣಿ ಒಬ್ಬಳು ಇದ್ದಾಳೆಂದು ಕುಮಾರಿ ಪ್ರಮೀಳರವರು ಏನು ಹೇಳಿದರು ಆಕೆ ಸಾವಿರಾರು ಜನರನ್ನು ಸಾಕುತ್ತಿದ್ದಾಳೆ. ಅವಳು ದಿನಬೆಳಗಾದರೆ ಕುಮಾರಿ ಪ್ರಮೀಳರವರಂಥ ೧೦ ಜನ ವಕೀಲರನ್ನು ಇಟ್ಟುಕೊಳ್ಳುತ್ತಾಳೆ. ಅವಳ ವಿಚಾರದಲ್ಲಿ ಯಾರೂ ಕೈಹಾಕಲಿಕ್ಕೆ ಸಾಧ್ಯವಿಲ್ಲ. ವಕೀಲರಿಗೆ ಬೇಕಾಗಿರುವುದು ಫೀಜು, ಫೀಜು ಬರುತ್ತದೆಂದರೆ ಯಾವ ಕೇಸನ್ನು ಬೇಕಾದರೂ ತೆಗೆದುಕೊಂಡು ವಾದ ಮಾಡುತ್ತಾರೆ. "My Lord, these police people have brought this lady unnecessarily. She is an innocent lady and this is all concocted by the Police." ಎಂದು ಹೇಳಿ ವಾದ ಮಾಡುತ್ತಾರೆ. And the Court will say "Yes. She is given bail." And then she is released. The moment she is released, she goes back and says, "ಪೋಲೀಸರು ಹಿಡಿದುಕೊಂಡರೆ ಏನು ಮಾಡುತ್ತಾರೆ ; ವಕೀಲರು ಇದ್ದಾರೆ, ಹಣ ಇದೆ" ಎಂದು ಸ್ವಾಭಾವಿಕವಾಗಿ ಹೇಳುತ್ತಾಳೆ. ಕೋರ್ಟಿನಲ್ಲಿ ಬಿಟ್ಟರು ಅಂದ ತಕ್ಷಣ, ಸರ್ಕಾರಕ್ಕೆ ಇವತ್ತು ಬಹಳ ತೊಂದರೆ ಮಾಡಿದ್ದಾರೆಂದು ಬಂಧಿಸಲಿಕ್ಕೆ ನನಗಾಗಲೀ ಅಥವಾ ಶಾಸನ ಸಭೆಗಾಗಲೀ ಅಧಿಕಾರ ಇಲ್ಲ. ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಹಾಕಿದರೂ (ಬಂಧಿಸಿದರೂ) ಸಹ ಅದಕ್ಕೂ ಕೂಡ ಒಂದು ಕಮಿಟಿ ಇದೆ. ಅದು ವಿಚಾರ ಮಾಡಬೇಕಾಗುತ್ತದೆ. ಯಾವ ಕಾರಣಕ್ಕೋಸ್ಕರ ಬಂಧಿಸಿದಿರಿ ? ದೇಶದ್ರೋಹ ಆಪಾದನೆ ಮಾಡಿದ್ದಾರೆಯೇ, ಸಮಾಜದ್ರೋಹ ಮಾಡಿದ್ದಾರೆಯೇ, ಆರ್ಥಿಕವಾಗಿ ಅಪರಾಧ ಮಾಡಿದ್ದಾರೆಯೇ ಎಂದು ಕೇಳುತ್ತಾರೆ. ೧೦ ಜನರನ್ನು ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಬಂಧಿಸಿ ತೆಗೆದುಕೊಂಡು ಹೋದರೆ ಕಮಿಟಿಯಲ್ಲಾಗಲೀ ಅಥವಾ ಕೋರ್ಟಿನಲ್ಲಾಗಲೀ ಬಿಟ್ಟುಬಿಡುತ್ತಾರೆ. ಅನೇಕ ಜನ ಮಾನ್ಯ ಸದಸ್ಯರುಗಳಿಗೆ ಆವೇಶ ಬಂದಹಾಗೆ ನನಗೂ ಬರುತ್ತದೆ. ಆದರೆ ಮಾಡುವುದು ಏನು ? ಕೆಲವು ಮಂದಿ ನಿರ್ಗತಿಕರು ಆಸ್ಪತ್ರೆ ಸೇರಿದ್ದಾರೆ ; ಅವರಿಗೆ ನಾವು ಮಾಡುವುದಾದರೂ ಏನು ? ನಮ್ಮ ಕೈಯಲ್ಲಿ ಆಗುವುದಾದರೂ ಇಷ್ಟೆ ಅವರಿಗೆ ಒಳ್ಳೆಯ ಔಷಧಿಯನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡುವುದು ; ಒಂದು ವೇಳೆ ಪ್ರಯತ್ನ ವಿಫಲವಾಗಿ ಸತ್ತರೆ ಅವರ ಕುಟುಂಬಕ್ಕೆ ಸಾವಿರ ರೂಪಾಯಿಗಳನ್ನು ಕೊಡುವುದು. ಇವತ್ತು ಅನೇಕ ಜನರಿಗೆ ಕಣ್ಣು ಹೋಗುತ್ತಿದೆ ; ಅವರಿಗೆ ಏನು ಸಹಾಯ ಬೇಕೋ ಅದನ್ನು ಮಾಡುವುದು ಮತ್ತು ಅವರ ಮಕ್ಕಳನ್ನು ರಕ್ಷಿಸಲು ಏರ್ಪಾಡು ಮಾಡುವುದು. ನಿರ್ಗತಿಕರನ್ನು ಸಮಾಧಿ ಮಾಡುವಾಗ ಚಾರ್ಜ್ ವಸೂಲ್ಮಾಡದೆ ಸಮಾಧಿ ಮಾಡಬೇಕೆಂದು ಕಾರ್ಪೊರೇಷನ್ನಿಗೆ ಆದೇಶ ಕೊಟ್ಟಿದ್ದೇವೆ. ಅದೇ ಪ್ರಕಾರ ಜಟಕಾ ಗಾಡಿಗಳನ್ನು ಮತ್ತೊಂದನ್ನು ಮಾಡಿ ಶವವನ್ನು ತೆಗೆದುಕೊಂಡು ಹೋಗಿ ಸಮಾಧಿ ಮಾಡಲಾಗಿದೆ. ಶವವನ್ನು ತೆಗೆದುಕೊಂಡು ಹೋಗುವುದಕ್ಕಾಗಲೀ, ಸಮಾಧಿ ಮಾಡುವುದಕ್ಕಾಗಲೀ ಹಣ ಕೇಳಿಲ್ಲ. ಆದರೂ ನಾನು ಇದಕ್ಕೆಲ್ಲ ತಕ್ಕ ಏರ್ಪಾಡು ಮಾಡಿಸಿದ್ದೇನೆಂದು ದಲ್ಲಾಳಿ ಬಂದು ಕಮೀಷನ್ ತೆಗೆದುಕೊಂಡು ಹೋಗುತ್ತಿರುತ್ತಾನೆ. ಕಾರ್ಪೊರೇಷನ್ ಮತ್ತಿತರ ಕಛೇರಿಗಳಲ್ಲಿ ತಿಂಗಳ ಸಂಬಳ ಪಾವತಿಯಾಗತಕ್ಕ ಸಂದರ್ಭದಲ್ಲಿ ಕಮೀಷನ್ ಅನ್ನು ಕಸ ಗುಡಿಸುವವರ ಹತ್ತಿರವೆಲ್ಲ ವಸೂಲ್ಮಾಡುವ ಜನ ಈ ದೇಶದಲ್ಲಿದ್ದಾರೆ.

ಇಂಥ ವಿಚಾರವನ್ನು ಬೇರೆ ಯಾವ ದೇಶದಲ್ಲಿಯಾದರೂ ಕೇಳಿದ್ದೀರಾ ಅಧ್ಯಕ್ಷರೇ ? ಕಾರ್ಪೊರೇಷನ್ನಿನಲ್ಲಿ ಕಸ ಗುಡಿಸುವವರ ಹತ್ತಿರವೆಲ್ಲ ನಾನು ನಿನಗೆ ಸರ್ಕಾರದಿಂದ ಕೊಡಿಸಿದೆ ನನಗೆ ಕಮೀಷನ್ ಕೊಡು ಎಂದು ಹತ್ತಿಪ್ಪತ್ತು ರೂಪಾಯಿಗಳನ್ನು ತೆಗೆದುಕೊಳ್ಳುವ ಜನ ಈ ಸಮಾಜದಲ್ಲಿರಬೇಕಾದರೆ ಇದಕ್ಕೆಲ್ಲ ಯಾರು ರಕ್ಷಣೆ ಕೊಡುವುದಕ್ಕಾಗುತ್ತದೆ ? ಆಸ್ಪತ್ರೆಯಲ್ಲಿ ಸತ್ತವರ ಸಂಬಂಧಿಕರ ಬಳಿ ಹೋಗಿ, ನಾವು ಸರ್ಕಾರದಿಂದ ನಿಮಗೆ ಸಾವಿರ ರೂಪಾಯಿಗಳನ್ನು ಕೊಡುವಂತೆ ಮಾಡಿಸಿದ್ದೇವೆಂದು ಹೇಳಿ ನಮಗೆ ೧೦ ರೂಪಾಯಿಗಳನ್ನು ಕೊಡಿ ಎಂದು ಕೇಳುವುದು–ಇವೆಲ್ಲ ನಡೆಯುವುದನ್ನು ಕಾಣುತ್ತೇನೆ. ಹೀಗೆ ನಾನಾ ಕಡೆಗಳಲ್ಲಿ ಈ ರೀತಿಯ ವ್ಯವಹಾರಗಳು ನಡೆಯುತ್ತಿವೆ. ಇವನ್ನೆಲ್ಲ ಹೇಗೆ ಬಿಡಿಸುವುದು ಎಂಬುದೇ ಒಂದು ಸಮಸ್ಯೆಯಾಗಿದೆ. ಉಗ್ರ ಕ್ರಮ ಕೈಗೊಳ್ಳಬೇಕು ಅಂದರೆ ಏನು ? ಪೋಲೀಸರು ಒಂದು ಹತ್ತು ಬಾರಿ ರೈಡ್ ಮಾಡಬಹುದು, ತಪ್ಪಿತಸ್ಥರನ್ನು ಹಿಡಿದುಕೊಂಡು ಬಂದು ಕೋರ್ಟಿಗೆ ಕೊಡಬಹುದು. ಇವತ್ತು ಇಂತಿಂಥ ತಪ್ಪುಗಳನ್ನು ಮಾಡಿದ್ದಾರೆಂದು ಹೇಳಿ ನ್ಯಾಯಾಧೀಶರ ಮುಂದೆ ನಿಲ್ಲಿಸಬಹುದು. ಇವತ್ತು ೨೦೧೪ ಜನರನ್ನು ಅಪರಾಧಿಗಳೆಂದು ಅರೆಸ್ಟ್ ಮಾಡಿದ್ದು ೨೫೭ ಜನರನ್ನು ಬಿಡಲಾಗಿದೆ. ಅವರನ್ನು ಬಿಡಬಾರದು ಎಂದು ಹೇಳುವುದಕ್ಕೆ ನನಗೂ ಅಧಿಕಾರ ಇಲ್ಲ ಮತ್ತು ಶಾಸನ ಸಭೆಗೂ ಅಧಿಕಾರ ಇಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಇದೆ. ಕಾನೂನನ್ನು ಬದಲಾವಣೆ ಮಾಡುವುದಕ್ಕೆ ಅವಕಾಶ ಇದೆ. ಕಾನೂನನ್ನು ಬದಲಾವಣೆ ಮಾಡುವುದಕ್ಕೆ ಅಧಿಕಾರ ಇಲ್ಲವೆ ?

ಶ್ರೀ ಆರ್. ಗುಂಡೂರಾವ್.—ನೀವು ಬದಲಾವಣೆ ಮಾಡಿದರೆ ಅದು ತಪ್ಪೋ ಸರಿಯೋ ಎಂದು ತೀರ್ಮಾನ ಕೊಡುವವರು ಅವರು. ವಾಹನ ಅಪಘಾತಕ್ಕೆ ಕಾರಣರಾದವರಿಗೆ ೧೦ ವರ್ಷ ಶಿಕ್ಷೆ ವಿಧಿಸಬೇಕೆಂದು ಕಾನೂನಿನಲ್ಲಿದೆ. ಅದನ್ನು ವಿಧಿಸುವ–ಬಿಡುವ ಅಧಿಕಾರ ಅವರಿಗೆ ಇದೆ. ಅದರಲ್ಲಿ ನಮಗೆ ಏನು ಅಧಿಕಾರ ಇದೆ ? ನಾವು ಒಂದು ಸಾರಿಯಲ್ಲ, ಹತ್ತು ಸಾರಿಯಾದರೂ ತಪ್ಪಿತಸ್ಥರನ್ನು ಹಿಡಿಯಬೇಕು ; ಹಿಡಿದು ಅವರ ಮುಂದೆ ನಿಲ್ಲಿಸಬೇಕು ; ಅವರು ಅದನ್ನು ತೀರ್ಮಾನಿಸಬೇಕು. ಆದುದರಿಂದ, ಮೊನ್ನೆ ನಡೆದ ಘಟನೆ ಏನಿದೆ ಇದು ಬಹಳ ದುಃಖಕರವಾದ ಘಟನೆ. ಇದರ ಬಗ್ಗೆ ಸರ್ಕಾರ ಸಾಕಷ್ಟು ಕ್ರಮ ಕೈಗೊಂಡಿದೆ ; ಬೇಕಾದಷ್ಟು ಜನರನ್ನು ದಸ್ತಗಿರಿ ಮಾಡಲಾಗಿದೆ. ನಿರ್ಗತಿಕರ ಸಲುವಾಗಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ಕೈಗೊಂಡಿದ್ದೇವೆ. ಇನ್ನೂ ಸ್ವಲ್ಪ ಪೋಲೀಸ್ ಪೋಸ್ಟುಗಳನ್ನು ಹಾಗೂ ಎಕ್ಸೈಜ್ ಇನ್ಸ್‌ಪೆಕ್ಟರ್ ಪೋಸ್ಟ್‌ಗಳನ್ನು ಜಾಸ್ತಿ ಮಾಡಬೇಕೆಂದರೆ ಅದಕ್ಕೆ ಹಣದ ಚೌಕಟ್ಟು ಬೇಕಲ್ಲ. ಅದು ನಾನ್ ಪ್ಲಾನ್ ಪ್ರಾಜೆಕ್ಟ್ ಆಗುತ್ತದೆ. ಇವತ್ತಿನ ದಿವಸ, ವಿದ್ಯುತ್, ನೀರಾವರಿ, ರಸ್ತೆ, ಶಾಲೆ, ಆಸ್ಪತ್ರೆ, ಸಮಾಜ ಕಲ್ಯಾಣ ಕೇಂದ್ರಗಳು ಇತ್ಯಾದಿಗಳನ್ನು ನಿರ್ಮಿಸಲು ಹಣ ಖರ್ಚು ಮಾಡಬೇಕಾಗಿರುವಾಗ there is a limitation to spend on Police and Excise. ಇವತ್ತು ಎಕ್ಸೈಜ್ ಇಲಾಖೆಯಿಂದ ೬೦ ಕೋಟಿ ರೂಪಾಯಿ ಆದಾಯ ಬಂದಿದೆಯಾದ್ದರಿಂದ ನಾಳೆ ದಿವಸ ೨೫ ಕೋಟಿ ರೂಪಾಯಿಗಳನ್ನು ಇಲಾಖೆಗಾಗಿ ಖರ್ಚು ಮಾಡುತ್ತೇನೆಂದರೆ ಯಾವ ಪ್ಲಾನಿಂಗ್ ಕಮೀಷನ್ನೂ ಒಪ್ಪಿಗೆ ಕೊಡುವುದಿಲ್ಲ, ವಿಧಾನ ಸಭೆಯಲ್ಲಿ ಸಹ ಒಪ್ಪಿಗೆ ದೊರೆಯುವುದಿಲ್ಲ. ಅಲ್ಲಿ ಒಂದು ಮಿತಿ ಇರುತ್ತದೆ. ಇಷ್ಟೇ ಖರ್ಚು ಮಾಡಬೇಕೆಂಬ ದಿಗ್ಬಂಧನವನ್ನು ಹಾಕುತ್ತಾರೆ. ಈ ದೇಶದ ಆರ್ಥಿಕ ವ್ಯವಸ್ಥೆ ಆ ಒಂದು ತಳಹದಿಯ ಮೇಲೆ ಬಂದಿದೆ. ಇವತ್ತು ನಾವು ೧೦ ಸಾವಿರ ಪೋಲೀಸ್ ಪೋಸ್ಟುಗಳನ್ನು ಜಾಸ್ತಿ ಮಾಡಬೇಕೆಂದರೆ ೫ ವರ್ಷಗಳ ಕಾಲ ಪ್ರಯತ್ನ ಮಾಡಬೇಕು. ತಮಿಳ್ನಾಡಿನಲ್ಲಿ ಎಷ್ಟಿದೆ, ಗುಜರಾತಿನಲ್ಲಿ ಎಷ್ಟಿದೆ, ಮಹಾರಾಷ್ಟ್ರದಲ್ಲಿ ಎಷ್ಟಿದೆ ಎಂಬ ಮಾಹಿತಿಗಳನ್ನೆಲ್ಲ ತರಿಸಿ ನಮ್ಮ ಮತ್ತು ಕೇಂದ್ರದ ಹಣಕಾಸಿನ ಸಚಿವರುಗಳ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಹಾಗೆ ಒಪ್ಪಿಗೆ ನೀಡುವಾಗ ೧೦ ಸಾವಿರ ಪೋಲೀಸ್ ಹುದ್ದೆಗಳನ್ನು ಜಾಸ್ತಿ ಮಾಡುವುದಾದರೆ ನೀರಾವರಿ ಬಾಬಿನಲ್ಲಿ ೩ ಕೋಟಿ ರೂಪಾಯಿಗಳನ್ನು ಕಟ್ ಮಾಡುತ್ತೇವೆ, ವಿದ್ಯುಚ್ಛಕ್ತಿ ಬಾಬಿನಲ್ಲಿ ೨ ಕೋಟಿ ರೂಪಾಯಿಗಳನ್ನು ಕಟ್ ಮಾಡುತ್ತೇವೆ, ದೊಡ್ಡ ನೀರಾವರಿ ಬಾಬಿನಲ್ಲಿ ೪ ಕೋಟಿ ರೂಪಾಯಿಗಳನ್ನು ಕಟ್ ಮಾಡುತ್ತೇವೆ ಎಂದೆಲ್ಲ ಷರತ್ತು ಹಾಕಿ ಅದಕ್ಕೆ ಒಪ್ಪುವುದಾದರೆ ೧೦ ಸಾವಿರ ಪೋಲೀಸ್ ಹುದ್ದೆಗಳನ್ನು ಜಾಸ್ತಿ ಮಾಡುತ್ತೇವೆ ಅನ್ನುತ್ತಾರೆ. ಇತ್ತಕಡೆ ನೀವುಗಳು ನಾಳೆ ದಿವಸ ಹೇಮಾವತಿ ನಾಲೆ ಆಗಿಲ್ಲ, ಕಬಿನಿ ನಾಲೆ ಆಗಿಲ್ಲ, ಭದ್ರ ನಾಲೆ ಮುಳುಗುತ್ತಿದೆ, ಆಲಮಟ್ಟಿಯಲ್ಲಿ ನೀರು ಬಂದಿಲ್ಲ, ನಾರಾಯಣಪುರ ಹಾಗೂ ಮಲಪ್ರಭದಲ್ಲಿ ನೀರಿಲ್ಲ ಎಂದು ಬರುತ್ತೀರಿ. ನಾನೂ ಅದನ್ನೂ ಮಾಡಬೇಕು, ಇದನ್ನೂ ಮಾಡಬೇಕು. ಹೀಗಿರುವಾಗ, ಈ ದಿನ ಇದನ್ನು ಮಾಡಿ ಎಂದರೆ, ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆಯೋ ಹೊರತು, ಅದನ್ನು ಪೂರ್ತಿ ಮಾಡಿಯೇ

ಮಾಡುತ್ತೇನೆಂದು ಹೇಳುವುದಕ್ಕೆ ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಯಾವಾಗ ಪೂರ್ತಿಯಾಗಿ ಯಾರೂ ಕುಡಿಯುವುದಿಲ್ಲವೆಂದು ತೀರ್ಮಾನಿಸುತ್ತಾರೋ ಆಗ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ. ಆಗ ಮಾತ್ರ ನಮ್ಮ ಬಡತನ ಹೋಗಿ ಅನುಕೂಲ ಸ್ಥಾನಕ್ಕೆ ಬರಲು ಸಾಧ್ಯ. ಸರಾಯಿ, ಸೇಂದಿ, ಬೀಡಿ ವಗೈರೆಗಳಿಗೆ ಏತಕ್ಕೋಸ್ಕರ ಬೆಲೆಯನ್ನು ಜಾಸ್ತಿ ಮಾಡಲಾಗುತ್ತಿದೆ ಎಂದರೆ ಕುಡಿಯುವ ಚಟವನ್ನು ಕಡಿಮೆ ಮಾಡಿ ಕ್ರಮೇಣ ಬಿಡಿಸಬೇಕು ಎಂದು, ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಯಾಗಿದೆ. ಮಾದಕ ಪದಾರ್ಥಗಳ ಬೆಲೆಯನ್ನು ಜಾಸ್ತಿ ಮಾಡಿದರೆ ಜನರು ಕುಡಿಯುವುದನ್ನು ಕಡಿಮೆ ಮಾಡುತ್ತಾರೆಂಬ ಉದ್ದೇಶದಿಂದ ಅವುಗಳ ಬೆಲೆಯನ್ನು ಜಾಸ್ತಿ ಮಾಡಲಾಗಿದೆಯೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ.

೧೧–೩೦ ಎ. ಎಂ.

ಆದರೆ ನಾವು ಬೆಲೆ ಎಷ್ಟೇ ಜಾಸ್ತಿ ಮಾಡಿದರೂ ಕುಡಿಯುವುದೂ ಜಾಸ್ತಿಯಾಗುತ್ತಲೇ ಇದೆ. ನಿಮಗೆ ಹೇಳಬೇಕು ಎಂದರೆ ಹೋದ ವಾರ ಬೆಂಗಳೂರಿನಲ್ಲಿ ಸರ್ಕಾರದಿಂದ ಅಪ್ರೂವಲ್ ಮಾಡಲ್ಪಟ್ಟ ಅರಾಕ್ ಮಾರಾಟವಾಗಿರುವುದು ಸುಮಾರು ೧ ಲಕ್ಷ ೩೪ ಸಾವಿರ ಲೀಟರ್‌ಗಳು. ಇಷ್ಟು ಕ್ರಯ ಜಾಸ್ತಿಯಾಗಿ ಅಷ್ಟು ಮಾರಾಟವಾಗಿದೆ. ಇದು ಸರ್ಕಾರದ್ದು, ಕಳ್ಳಭಟ್ಟಿ ಅಲ್ಲ. ಸಾರಾಯಿ ಬೆಲೆಯನ್ನು ಜಾಸ್ತಿ ಮಾಡಿದರೂ ಮಾರಾಟವಾಗಿರುವುದು ಒಂದು ಲಕ್ಷ ೩೪ ಸಾವಿರ ಲೀಟರ್‌ಗಳು. ಅದೂ ಒಂದು ವಾರದಲ್ಲಿ. ಜೂನ್‌ನಲ್ಲಿ ೧ ಲಕ್ಷ ೬೨ ಸಾವಿರ ಲೀಟರ್‌ಗಳ ಮಾರಾಟವಾಗಿದೆ. ಇದನ್ನು ನೋಡಿದಾಗ ಗೊತ್ತಾಗುತ್ತದೆ ಕುಡಿಯುವುದು ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಕುಡಿಯುವವರು ನಾವು ಕ್ರಯವನ್ನು ಎಷ್ಟೇ ಜಾಸ್ತಿ ಮಾಡಿದರೂ ಕುಡಿಯುತ್ತಿದ್ದಾರೆ. ಕುಡಿಯದ ಜನ ನಾವು ಎಷ್ಟೇ ಬೆಲೆ ಕಡಿಮೆ ಮಾಡಿದರೂ ಕುಡಿಯುವುದಿಲ್ಲ. ಮಾನ್ಯ ಪ್ರಧಾನಮಂತ್ರಿಯವರೂ ಈ ಬಗ್ಗೆ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ್ದಾರೆ. ಬೇರೆ ಮದ್ಯಪಾನಗಳ ಬೆಲೆಯನ್ನು ಎಷ್ಟೇ ಕಡಿಮೆ ಮಾಡಿದರೂ ಕಳ್ಳಭಟ್ಟಿ ಕುಡಿಯುವವರು ಅದನ್ನು ಕುಡಿಯುವುದಿಲ್ಲ. ಏಕೆಂದರೆ ಅದರಲ್ಲಿ ಸ್ಟ್ರಾಂಗ್ ಕಿಕ್ ಸಿಗುವುದಿಲ್ಲವಂತೆ. ನೀವು ಕುಡಿಯುವುದಿಲ್ಲ ಅಲ್ಲವೇ ? (ಶ್ರೀ ಕೆ. ಹೆಚ್. ಹನುಮೇಗೌಡರನ್ನು ಕುರಿತು).

ಶ್ರೀ ಕೆ. ಹೆಚ್. ಹನುಮೇಗೌಡ.—ಇಲ್ಲ.

ಶ್ರೀ ಆರ್. ಗುಂಡೂರಾವ್.—ಆದ್ದರಿಂದ ನೀವು ಏತಕ್ಕೆ ತಲೆ ಕೆಡಿಸಿಕೊಳ್ಳುತ್ತೀರಿ ? (ನಗು) ಇವತ್ತು ಯಾರು ಸಾರಾಯಿ ಕುಡಿಯುತ್ತಾರೆ ಅವರ ಮುಂದೆ ೫೦೦ ರೂಪಾಯಿಯಲ್ಲ ೧೦೦೦ ರೂಪಾಯಿ ಬೆಲೆಯ ವಿಸ್ಕಿ ತೆಗೆದುಕೊಂಡುಹೋಗಿ ಇಟ್ಟರೂ ಅವರು ಮುಟ್ಟುವುದಿಲ್ಲ. ಲಕ್ಷ್ಮಣ್ ಅವರನ್ನು ಬೇಕಾದರೆ ಕೇಳಿ, ಹೇಳುತ್ತಾರೆ.

ಶ್ರೀ ಕೆ. ಲಕ್ಷ್ಮಣ್.—ಸರ್ಕಾರೀ ಸಾರಾಯಿಗೆ ಬೆಲೆ ಕಡಿಮೆ ಮಾಡಿದರೆ ಕಳ್ಳಭಟ್ಟಿ ಕುಡಿಯುವುದಿಲ್ಲ. ಏಕೆಂದರೆ ಅರಾಕ್‌ಗೂ, ಕಳ್ಳಭಟ್ಟಿಗೂ ವ್ಯತ್ಯಾಸ ಇಲ್ಲ.

ಶ್ರೀ ಆರ್. ಗುಂಡೂರಾವ್.—೫೦೦ ರೂಪಾಯಿನ ಬಾಟಲ್ ತೆಗೆದುಕೊಂಡುಹೋಗಿ ಇದು ಒಳ್ಳೆಯದು, ಚೆನ್ನಾಗಿರುತ್ತೆ, ಕುಡಿ ಎಂದರೂ ಅವರು ಕುಡಿಯುವುದಿಲ್ಲ. ಅಥವಾ ಅದನ್ನು ಬಿಟ್ಟಿ ಕೊಟ್ಟರೂ ಕುಡಿಯುವುದಿಲ್ಲ. ಈ ಅರಾಕ್, ಕಳ್ಳಭಟ್ಟಿ ಕುಡಿದು ಅಭ್ಯಾಸ ಆಗಿರುವಾಗ ಸರ್ಕಾರೀ ಸಾರಾಯಿಯನ್ನು ಕುಡಿಯುವುದಿಲ್ಲ. ೧೦–೧೨ ಮೈಲಿಯಾದರೂ ಹೋಗಿ ಕಳ್ಳಭಟ್ಟಿಯನ್ನು ಕುಡಿಯುತ್ತಾರೆ. ಇದನ್ನು ತಪ್ಪಿಸಬೇಕಾದರೆ ನಮ್ಮ ಕೈಯಲ್ಲಿ ಸರ್ವಾಧಿಕಾರಿತನ ಬರಬೇಕು. ಹೃದಯ ವಿದ್ರಾವಕ ಘಟನೆ ನಡೆದಿದೆ, ತಪ್ಪಿತಸ್ಥರನ್ನು ತಂದು ನೇಣ ಹಾಕಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ನಿಜ. ಆದರೆ ಅವರು ಹೇಳಿದ ಕೆಲಸವನ್ನು ಮಾಡುವುದಕ್ಕೆ ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ವಿಧಾನ ಸೌಧದ ಮುಂದೆ ತಂದು ನೇಣು ಹಾಕುವುದಕ್ಕೆ, ಗುಂಡಿಟ್ಟು ಕೊಲ್ಲುವುದಕ್ಕೆ ಯಾವ ಸರ್ಕಾರಕ್ಕೂ ಆಗುವುದಿಲ್ಲ.

ಅಧ್ಯಕ್ಷರು.—ಹಾಗೆ ಮಾಡಿದರೆ ಹನುಮೇಗೌಡರೇ ಸುಮ್ಮನಿರುವುದಿಲ್ಲ. ಆ ರೀತಿ ಮಾಡುವುದಕ್ಕೆ ನಿಮಗೆ ಯಾವ ಕಾನೂನಿದೆ ಎಂದು ಕೇಳುತ್ತಾರೆ.

ಶ್ರೀ ಆರ್. ಗುಂಡೂರಾವ್.—ಆದ್ದರಿಂದ ನಾವು ಯಾವತ್ತೂ ಇದನ್ನು ಒಂದು ಇಷ್ಯೂ ಮಾಡ ಬಾರದು. ಇವತ್ತು ದುರ್ದೈವ, ಏನೇ ಆದರೂ ಅದನ್ನು ಇಷ್ಯೂ ಮಾಡುತ್ತಾರೆ. ಯಾವುದೇ ಘಟನೆ ನಡೆದರೂ ಅವನ್ನು Political issue ಮಾಡುತ್ತಾರೆ. ಸತ್ತುಹೋದವರ ಮಕ್ಕಳಿಗೆ ಏನು ಮಾಡ ಬೇಕು, ಆಸ್ಪತ್ರೆಯಲ್ಲಿ ಏನಾಯಿತು, ಪೋಲೀಸರು ಯಾವ ರೀತಿ ಕಾರ್ಯಾಚರಣೆ ಮಾಡಿದ್ದಾರೆ, ಈ ವಿಷಯಗಳ ಬಗ್ಗೆ ಗಮನ ಕೊಡುವುದಿಲ್ಲ. ಏನಾದರೂ ಆದತಕ್ಷಣವೇ ಮುಖ್ಯಮಂತ್ರಿ ರಾಜೀನಾಮೆ ಕೊಡಲಿ, ಸರ್ಕಾರ ರಾಜೀನಾಮೆ ಕೊಡಲಿ ಎಂದು ಹೇಳುತ್ತಾರೆ. ಯಾವ ಸರ್ಕಾರ ಕುಡಿಯಿರಿ ಎಂದು ಹೇಳುತ್ತದೆ. ಮುಖ್ಯಮಂತ್ರಿ ಹೇಳುತ್ತಾರೆಯೋ ಕಳ್ಳಭಟ್ಟಿ ಸಾರಾಯಿ ಕುಡಿಯಿರಿ ಎಂದು ಯಾವ ಮುಖ್ಯಮಂತ್ರಿ ಹೇಳುತ್ತಾರೆ ? ಇದನ್ನು ತಪ್ಪಿಸುವುದಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳೋಣ. ತಾವೆಲ್ಲಾ ಸಹಕಾರ ಕೊಡಿ. ಒಂದು ಕಮಿಟಿ ಮಾಡೋಣ. ಪಾರ್ಲಿಮೆಂಟಿನಲ್ಲಿ ಏನು ತಿದ್ದುಪಡಿ ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡೋಣ. ಇದು ಎಲ್ಲರ ಗಮನ ಸೆಳೆದಿದೆ. ಆದ್ದರಿಂದ ಎಕ್ಸೈಜ್ ಆಕ್ಟಿನಲ್ಲಿ ಏನು ತಿದ್ದುಪಡಿ ತರಬೇಕು ಎಂಬುದರ ಬಗ್ಗೆ ಯೋಚನೆ ಮಾಡೋಣ. ಅದನ್ನು ಬಿಟ್ಟು ಹಸು ಕರ ಹಾಕಿತು ಎಂದರೂ ರಾಜೀನಾಮೆ ಕೊಡು, ೬ ಜನ ಮಕ್ಕಳಾಯಿತು ಎಂದರೂ ರಾಜೀನಾಮೆ ಕೊಡು, ಅಥವಾ ಯಾವುದೋ ಕಾಲೋನಿಯಲ್ಲಿ ಮಕ್ಕಳಾಗಲಿಲ್ಲ ಎಂದರೆ ಆರೋಗ್ಯ ಮಂತ್ರಿಗಳು ರಾಜೀನಾಮೆ ಕೊಡಲಿ ಎಂದರೆ ಏನರ್ಥ ? Is this the way how democracy can function ? ಮುಖ್ಯಮಂತ್ರಿ ರಾಜೀನಾಮೆ ಕೊಟ್ಟರೆ ಪಾನನಿರೋಧ ಬಂದು ನಾಳೆ ಬೆಳಗ್ಗೆ ಎಲ್ಲಾ ಸರಿಹೋಗುತ್ತದೆಯೋ ? ಜನ ನಗುತ್ತಾರೆ, ಏನು ಬೆಳಗ್ಗೆ ಎದ್ದರೆ ರಾಜೀನಾಮೆ, ರಾಜೀನಾಮೆ ಎಂದು ಹೇಳುತ್ತಾರೆ ಎಂದು. ಜನ ಕೇಳುತ್ತಾರೆ. ರಾಜೀನಾಮೆ ತೆಗೆದುಕೊಳ್ಳಬೇಕೋ ಬೇಡವೋ ಎಂದು ಹೇಳುವ ಪ್ರಭುಗಳು ಬೇರೆ ಇದ್ದಾರೆ. ಯಾರು ರಾಜೀನಾಮೆ ತೆಗೆದುಕೊಳ್ಳಬೇಕು, ಬಿಡಬೇಕು ಎಂಬುದನ್ನು ಆ ಸಮಸ್ಯೆ ಬಂದಾಗ ನೋಡೋಣ. ಈಗ ಸಮಸ್ಯೆ ಇಲ್ಲ. ಬೆಂಗಳೂರು, ಮೈಸೂರಿನಲ್ಲಿ ನಡೆದ ಘಟನೆ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ, ಎಲ್ಲಿ ಲೋಪ ಆಗಿದೆ ಎಂಬುದನ್ನು ನೋಡಿ ಅದನ್ನು ಸರಿಪಡಿಸುವುದಕ್ಕೆ ಹೋಗೋಣ. ಮುಂದೆ ಈ ಘಟನೆಗಳು ಆಗದಂತೆ ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದು ಎಂಬುದನ್ನು ನಮ್ಮ ಲಿಮಿಟ್‌ನಲ್ಲಿ within our limits, within four walls of the Assembly, within the frame of the Constitution ಏನು ಮಾಡಲಿಕ್ಕೆ ಸಾಧ್ಯತೆ ಉಂಟು ಎಂಬುದನ್ನು ನೋಡೋಣ. ನಮ್ಮ ರಾಜ್ಯದ ಕಾನೂನನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವೇ ? ರಾಷ್ಟ್ರ ಮಟ್ಟದಲ್ಲೋ, ಪಾರ್ಲಿಮೆಂಟ್ ಮಟ್ಟದಲ್ಲೋ ಶಾಸನಸಭೆ ಮಟ್ಟದಲ್ಲೋ ಚರ್ಚೆ ಮಾಡಿ ಆದಷ್ಟು ಎಜುಕೇಟ್ ಮಾಡುವುದಕ್ಕೆ ಯಾವ ರೀತಿ ಪ್ರಯತ್ನ ಮಾಡಬೇಕು ಎಂಬುದನ್ನು ನೋಡೋಣ ಕೆಲವು ಕಡೆ ಕೆಲವು ಪ್ರಯತ್ನಗಳು ನಡೆದರೂ ಪ್ರಯೋಜನವಾಗಲಿಲ್ಲ ತಮಿಳುನಾಡಿನಲ್ಲಿ Life imprisonment ಮಾಡುವುದಕ್ಕೆ ಕಾನೂನು ತಂದಿದ್ದರೂ ಅದು ಸಾಧ್ಯವಾಗಲಿಲ್ಲ. ಕೋರ್ಟ್‌ನಲ್ಲಿ ನಿಲ್ಲುವುದಿಲ್ಲ.

ಶ್ರೀ ಕೆ, ಲಕ್ಷ್ಮಣ್.—ಅಲ್ಲಿ ಎಕ್ಸೈಜ್ ಡ್ಯೂಟಿ ತೆಗೆದುಹಾಕಿದ್ದಾರೆ.

ಶ್ರೀ ಆರ್. ಗುಂಡೂರಾವ್.—ಹಾಗೆ ಮಾಡಿದರೆ ಕಡಿಮೆಯಾಗುತ್ತದೆ ಎಂದು ಹೇಳುವುದು ಕೇವಲ ಭ್ರಮೆ. ಕಡಿಮೆಯಾಗುವುದಕ್ಕೆ ಸಾಧ್ಯವೇ ಇಲ್ಲ. ಈ ದುರ್ಘಟನೆ ಬಗ್ಗೆ ನಾನಾ ಕಾರಣಗಳನ್ನು ಕೊಡುತ್ತಾರೆ. ಎಕ್ಸೈಜ್‌ನವರಿಗೆ ಜಾಸ್ತಿ ದುಡ್ಡು ಕೊಟ್ಟಿರುವ ದೆಸೆಯಿಂದ ಎಕ್ಸೈಜ್ ಕಂಟ್ರಾಕ್ಟರುಗಳೆಲ್ಲಾ ಸೇರಿಕೊಂಡು ಈ ಕೆಲಸ ಮಾಡಿಸಿದ್ದಾರೆ ಎಂದು ಹೇಳಿದ್ದಾರೆ. ಇದೇ ರೀತಿ ಬೇರೆಬೇರೆ ರೆಪ್ರಸೆಂಟೇಷನ್‌ಗಳು ನಮಗೆ ಬರುತ್ತಿವೆ. ನಾನು ಅವರು ಹೇಳಿದ್ದು ಸರಿ, ಇವರು ಹೇಳಿದ್ದು ತಪ್ಪು ಎಂದು ವಾದ ಮಾಡುತ್ತಿಲ್ಲ. There are complaints before me. ಎಕ್ಸೈಜ್ ಆಕ್ಷನ್‌ನಲ್ಲಿ ಕಂಟ್ರಾಕ್ಟರುಗಳು ಪೈಪೋಟಿಯಲ್ಲಿ ಜಾಸ್ತಿ ಹಣ ಕೊಟ್ಟು ತೆಗೆದುಕೊಂಡರು. ಇದರಿಂದ ಸರ್ಕಾರಕ್ಕೆ ೬೦ ಕೋಟಿ ರೂಪಾಯಿ ಜಾಸ್ತಿ ಬಂದಿದೆ. ಆದ್ದರಿಂದ ಕಳ್ಳಭಟ್ಟಿ ಕುಡಿಯಲು ಎಲ್ಲಾ ಹೊರಟರೆ ತಮಗೆ ನಷ್ಟವಾಗುತ್ತದೆ ಎಂದು ಕಳ್ಳಭಟ್ಟಿ ಕುಡಿಯುವಂತೆ ಹೆದರಿಕೆ ಹುಟ್ಟಿಸಲು ಕಂಟ್ರಾಕ್ಟರುಗಳು ಮಾಡಿದ್ದಾರೆ ಎಂದು ಅರ್ಜಿ ಬಂದಿದೆ. ಅದು ನಮ್ಮ ಮುಂದಿದೆ. ಅದು ಸರಿಯೋ ತಪ್ಪೋ ನೋಡಬೇಕು. ಸರ್ಕಾರಕ್ಕೆ ೬೦ ಕೋಟಿ ರೂಪಾಯಿ ಕೊಡಬೇಕಲ್ಲ ಎಂದು ಈ ರೀತಿ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಅವರು ೬೦ ಕೋಟಿ ರೂಪಾಯಿಗಳನ್ನು ಟ್ಯಾಕ್ಸ್ ಮೂಲಕ ಕೊಡುತ್ತಿಲ್ಲ. ಆಕ್ಷನ್‌ನಲ್ಲಿ ತೆಗೆದುಕೊಂಡಿದ್ದಾರೆ. ಇದರಲ್ಲಿ ದೊಡ್ಡ ದೊಡ್ಡ ಎಕ್ಸೈಜ್ ಕಂಟ್ರಾಕ್ಟರುಗಳು ಕೈವಾಡ ಇದೆಯೋ ಇಲ್ಲವೋ ಎಂಬುದನ್ನು

ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ. ಅಧಿಕಾರಿಗಳ ಕೈವಾಡ ಇದೆ ಎಂದು ಕೆಲವರು ಹೇಳಿದ್ದಾರೆ. ಇನ್ನು ಕೆಲವರು ರಾಜಕೀಯದವರ ಕೈವಾಡ ಇದೆ ಎಂದು ಹೇಳಿದ್ದಾರೆ. ಇನ್ನು ಕೆಲವರು ಎಕ್ಸೈಜ್ ಕಂಟ್ರಾಕ್ಟರುಗಳಿಗೆ ಯಾವ ಯಾವ ರಾಜಕೀಯದವರ ಬೆಂಬಲ ಇದೆಯೋ political people who have got link with the Excise contractors ಅವರ ಕೈವಾಡ ಇದೆ ಎಂದೂ ಹೇಳಿದ್ದಾರೆ. ಯಾವುದು ಸರಿ, ಯಾವುದು ತಪ್ಪು ಎಂದು ಈಗ ತೀರ್ಮಾನ ಮಾಡುವ ಪರಿಸ್ಥಿತಿಯಲ್ಲಿಲ್ಲ. ಎಕ್ಸೈಜ್ ಕಂಟ್ರಾಕ್ಟರುಗಳು, ರಾಜಕೀಯದವರು ಒಟ್ಟಿಗೆ ಸೇರಿ ಇದನ್ನು ಮಾಡಿಸಿದ್ದಾರೆ ಎಂದೂ ಕೆಲವರು ಹೇಳಿದ್ದಾರೆ. ಇದು ಸತ್ಯವೋ ಇಲ್ಲವೋ ಎಂಬುದು ತಿಳಿಯಬೇಕಾದರೆ ನ್ಯಾಯಾಂಗ ವಿಚಾರಣೆಯಾಗಬೇಕು. ಮಾಹಿತಿಗಳು ಸಿಗಬೇಕು. ಆದ್ದರಿಂದ ಸರ್ಕಾರ ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ, ಚೀಫ್ ಸೆಕ್ರೆಟರಿಯವರಿಂದ ಎನ್‌ಕ್ವೈರಿ, ಡಿಸ್ಟ್ರಿಕ್ಟ್ ಜಡ್ಜ್‌ರವರಿಂದ ಎನ್‌ಕ್ವೈರಿ ಮಾಡಿಸದೇ ನೇರವಾಗಿ ಹೈಕೋರ್ಟ್ ಜಡ್ಜ್‌ರಿಂದಲೇ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕು ಎಂದು ಈಗಾಗಲೇ ತೀರ್ಮಾನ ಮಾಡಿ ಅದನ್ನು ಅನೌನ್ಸ್ ಮಾಡಿದ್ದೇವೆ. ಈ ದುರ್ಘಟನೆಯಲ್ಲಿ ಶಾಮೀಲಾಗಿರುವವರಿಗೆ ರಕ್ಷಣೆ ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಲವಲೇಶವೂ ಇಲ್ಲ. ಅವರೆಷ್ಟೇ ದೊಡ್ಡವರಿರಲಿ ಅಥವಾ ಸಣ್ಣವರಿರಲಿ ಈ ದುರ್ಘಟನೆಗೆ ಕಾರಣರಾರೆಂಬುದು ವಿಚಾರಣೆಯಿಂದ ಹೊರಬರುತ್ತದೆ. ಅವರನ್ನು ಹಿಡಿದು ಕಾನೂನು ಪ್ರಕಾರ ಶಿಕ್ಷೆ ಕೊಡಿಸಲಿಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುವ ಮಾರ್ಗದಲ್ಲಿ ಸರ್ಕಾರವಿದೆ ಈ ದುರ್ಘಟನೆಯ ಪೂರ್ಣ ವಿಚಾರಣೆಯನ್ನು ನ್ಯಾಯಾಧೀಶರು ಮಾಡಬೇಕಾಗಿದೆ. ವಿಚಾರಣೆಯಿಂದ ಕಂಡುಬಂದದ್ದನ್ನು ನ್ಯಾಯಾಧೀಶರು ಹೇಳಿದ ಮೇಲೆ ಸಂಬಂಧಪಟ್ಟವರ ಮೇಲೆ ಸರ್ಕಾರ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಮಧ್ಯೆ ನಮ್ಮ ಅಧಿಕಾರಕ್ಕೊಳಪಟ್ಟು ಏನು ಮಾಡಬೇಕೆನ್ನುವುದರ ಬಗ್ಗೆ ಆಳವಾಗಿ ಯೋಚನೆ ಮಾಡುತ್ತೇವೆ. ಕಾನೂನು ತಜ್ಞರ ಜೊತೆಯಲ್ಲಿ ವಿಚಾರ ಮಾಡುತ್ತಿದ್ದೇವೆ, ಆದುದರಿಂದ, ಇದನ್ನು ಯಾವುದೇ ದೃಷ್ಟಿಯಿಂದ ರಾಜಕೀಯವಾಗಿ ಯಾರೂ ನೋಡಲಿಕ್ಕೆ ಪ್ರಯತ್ನ ಮಾಡಬಾರದು. ನೋಡುವಂಥಾ ವಿಷಯವೂ ಇದಲ್ಲ. ರಾಜಕೀಯವಾಗಿ ನೋಡುವಂಥ ಒಂದೇ ಒಂದು ಅಖಾಡವೆಂದರ ಚುನಾವಣೆ. ಮದುವೆ ಮನೆಯಲ್ಲಿ ಹುಟ್ಟಿದ್ದಕ್ಕೂ, ಆಸ್ಪತ್ರೆಯಲ್ಲಿ ಸತ್ತಿದ್ದಕ್ಕೂ ರಾಜಕೀಯ ಮಾಡುತ್ತಾ ಹೋದರೆ ಇದು ಎಲ್ಲಿಗೆ ಹೋಗುತ್ತದೆ? ಸಾಧ್ಯವಿಲ್ಲ. ಜನ ನಗೆಯಾಡುತ್ತಾರೆ. ಮುನ್ನೂರು ಜನ ಸಾಯುತ್ತಿದ್ದಾರೆ. ಸರ್ಕಾರ ಏನೆಲ್ಲ ಪ್ರಯತ್ನ ಮಾಡುತ್ತಿದೆ. ಮುಖ್ಯ ಮಂತ್ರಿಯಾಗಿ ನಾನು ಎರಡು ಮೂರು ಸಲ ಆಸ್ಪತ್ರೆಗೆ ಭೇಟಿ ನೀಡಿದ್ದೇನೆ, ಅನೇಕ ಸಾರ್ವಜನಿಕ ಮುಖಂಡರು ಹೋಗಿ ನೋಡಿದ್ದಾರೆ. ವೈದ್ಯರು ಮತ್ತು ದಾದಿಗಳು ಊಟ ತಿಂಡಿ ಬಿಟ್ಟು ಹಗಲಿರುಳೆನ್ನದೆ ದುಡಿಯುತ್ತಿದ್ದಾರೆ. ಅಂತೆಯೇ ಪೋಲೀಸ್ ಅಧಿಕಾರಿಗಳೂ ಕೆಲಸ ಮಾಡುತ್ತಿದ್ದಾರೆ. ಇಂಥಾ ಸಮಯದಲ್ಲಿ ನಾವು ನೊಂದವರಿಗೆ ಏನು ಸಹಾಯ ಮಾಡಬೇಕೆಂದು ಯೋಚನೆ ಮಾಡೋಣ. ಬಾಯಲ್ಲಿ ಹೇಳುವುದರ ಜೊತೆಗೆ ಕೈಯಲ್ಲೂ ಸಹ ನೊಂದ ಕುಟುಂಬದವರಿಗೆ ಸಹಾಯ ಮಾಡುವ ಮತ್ತು ಆ ಬಗ್ಗೆ ಚರ್ಚೆ ಮಾಡುವ ಕಾರ್ಯವನ್ನು ಬಿಟ್ಟು ಬೆಳಗಾದರೆ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಹೇಳಿದರೆ–ಇವರಿಗೇನು ಕೆಲಸವಿಲ್ಲವೇ? ಇದೇ ಕೆಲಸವೇ? ಎಂದು ಜನ ನಗೆಯಾಡುತ್ತಾರೆ. ಅವರು ಹೇಳುವುದು ''ಬೆಂಕಿ ಬಿದ್ದ ಮೇಲೆ ಇರ್ಕೊಂಡು ತಿಂದರು'' ಎನ್ನುವಂತಿದೆ. ಯಾವುದಾದರೊಂದು ಮನೆಗೆ ಬೆಂಕಿ ಬಿದ್ದಾಗ, ಆ ಕುರ್ಚಿಯನ್ನು ತೇಗದ ಮರದಲ್ಲಿ ಮಾಡಿದೆ, ಅದನ್ನು ಎತ್ಕೊಂಡು ಹೋಗು, ಆ ಕಬ್ಬಿಣದ ಕಪಾಟಿನಲ್ಲಿ ಒಳ್ಳೊಳ್ಳೆ ಬಟ್ಟೆಗಳನ್ನು ಹಾಕಿದ್ದಾರೆ, ಅವನ್ನೆಲ್ಲ ತೆಗೆದುಕೊಂಡು ಹೋಗು ಎನ್ನುವಂತಾಗಿದೆ, ಕಾರಿನಲ್ಲಿ ಹೋಗುತ್ತಾ ಇರುತ್ತಾರೆ, ಅಪಘಾತವಾಗುತ್ತದೆ. ಬಸ್ಸಿನಲ್ಲಿ ತೀರ್ಥಯಾತ್ರೆಗೆ ಹೋಗುತ್ತಾ ಇರುತ್ತಾರೆ, ಅಪಘಾತವಾಗುತ್ತದೆ. Accident is an accident. ಯಾರಿಗೆ ಜೀವ ಕಳೆದುಕೊಳ್ಳುವುದಕ್ಕೆ ಆಸೆ ಇದೆ, ಯಾರಿಗೂ ಇಲ್ಲ. ಆದುದರಿಂದ, ಈ ಘಟನೆ ಬಗ್ಗೆ ಸರ್ಕಾರ ಎಲ್ಲ ಕ್ರಮಗಳನ್ನೂ ಕೈಗೊಂಡಿದೆ, ಮತ್ತೆ ನಾವು ಯೋಚನೆ ಮಾಡುತ್ತೇವೆ. ಈ ದುರ್ಘಟನೆಯಲ್ಲಿ ಕಣ್ಣನ್ನು ಕಳೆದುಕೊಂಡವರಿಗೆ ಮಾಸಾಶನ ಕೊಡುವುದಕ್ಕೆ ಯೋಚನೆ ಮಾಡೋಣ. I think, we will announce the monthly pension of Rs. 40 or Rs. 50. ಆಸ್ಪತ್ರೆಯ ವೈದ್ಯರುಗಳಿಂದ ವರದಿಯನ್ನು ತರಿಸಿಕೊಂಡು ಯಾರು ಯಾರು ಈ ದುರ್ಘಟನೆಯಿಂದ ಕಣ್ಣು ಕಳೆದುಕೊಂಡಿದ್ದಾರೆ ಅವರಿಗೆ ಮಾಸಾಶನ ಕೊಡೋಣ. ಈಗಾಗಲೇ ಮಾಸಾಶನವನ್ನು ಕಲಾವಿದರಿಗೆ, ಮಾಜಿ ಸೈನಿಕರಿಗೆ, ರಾಜಕೀಯ ಸಂತ್ರಸ್ತರಿಗೆ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸರ್ಕಾರ ಕೊಡುತ್ತಿದೆ. ಅದರಂತೆ ಇವರ

ಜೀವನಕ್ಕೂ ಕೊಡೋಣ. ಸಣ್ಣ ಸಣ್ಣ ಮನೆಗಳನ್ನು ಕಟ್ಟಿಸಿಕೊಡೋಣ. ಈ ದುರ್ಘಟನೆಯಿಂದ ಅನಾಥರಾದ ಮಕ್ಕಳಿಗೆ ಅವರು ದೊಡ್ಡವರಾಗಿ ಬೆಳೆಯುವವರೆಗೂ ನಗರಸಭೆಯ ಅನಾಥ ಶಾಲೆಗಳಲ್ಲಿ ಅಥವಾ ಖಾಸಗಿ ಅನಾಥ ಶಾಲೆಗಳಲ್ಲಿ ಅವಕಾಶ ಕಲ್ಪಿಸಿಕೊಡೋಣ. ಇಂಥಾ ರಚನಾತ್ಮಕ ಸಲಹೆಗಳ ಬಗ್ಗೆ ಯೋಚನೆ ಮಾಡುವುದನ್ನು ಬಿಟ್ಟು ಅದರ ವಿರುದ್ಧವಾಗಿ ಯೋಚನೆ ಮಾಡುವುದು ಮತ್ತು ವಿನಾಶಕಾರಿ ಯೋಚನೆ ಮಾಡುವುದು ಸರಿಯಲ್ಲ ಈ ರಾಜ್ಯದಲ್ಲಿ ಏನೇ ಆಗಲಿ ಅವರದೊಂದೇ ಒಂದು ಕಾರ್ಯಕ್ರಮ. ಅದು ಅವರ ಸ್ವಂತದ್ದು, ಅವರ ಸ್ವಾರ್ಥದ್ದು. ಅದಕ್ಕಾಗಿ ನಾವು ತಲೆಕೆಡಿಸಿಕೊಳ್ಳುವುದು ಬೇಡ. ಅದರ ಬದಲು ಒಂದು ತಿಂಗಳ ಸಂಬಳವನ್ನು ಈ ದುರ್ಘಟನೆಯಲ್ಲಿ ನೊಂದವರಿಗಾಗಿ ಕೊಡಿರೆಂದು ನಮ್ಮ ಪಕ್ಷದ ಸದಸ್ಯರನ್ನು ನಾನು ಕೇಳಿಕೊಳ್ಳುತ್ತೇನೆ. ಇಂಥಾ ದುರ್ಘಟನೆ ನಡೆದಿರುವಾಗಲೂ ವಿರೋಧ ಪಕ್ಷದವರು ವಿಧಾನ ಸಭೆಗೆ ಬರುವುದಕ್ಕೆ ಮನಸ್ಸು ಮಾಡಿಲ್ಲ. ನಾವೇನು ಮಾಡೋಣ? ದೈಹಿಕವಾಗಿ ವಿರೋಧ ಪಕ್ಷದವರು ಇಲ್ಲಿಲ್ಲದಿದ್ದರೂ ಮಾನಸಿಕವಾಗಿ ಇಲ್ಲಿದ್ದಾರೆ. ಆದುದರಿಂದ, ಅವರೂ ಸಹ ಒಂದು ತಿಂಗಳ ಸಂಬಳವನ್ನು ಈ ನಿಧಿಗೆ ಕೊಡಲಿ. ಹಾಗೆಯೇ ಎಲ್ಲ ಮಂತ್ರಿಗಳೂ ಕೊಡುತ್ತಾರೆ. ಬರೀ ಶಾಸಕರೇ ಅಲ್ಲ. ಆದರೆ ವಿರೋಧ ಪಕ್ಷದವರು ಕೊಡುವುದು ಬಿಡುವುದು ಅವರಿಗೆ ಸೇರಿದ್ದು. ಹೇಗಿದ್ದರೂ ಇಲ್ಲಿ ನಮ್ಮ ಸಂಖ್ಯೆ ಜಾಸ್ತಿ. ನಾವೀಗ ೧೮೩ ಜನ ಸದಸ್ಯರಿದ್ದೇವೆ. ಮೇಲ್ಮನೆಯಲ್ಲಿ ೨೫ ಜನರಿದ್ದೇವೆ. ನಾನು ನಮ್ಮ ಪಕ್ಷದ ನಾಯಕನಾಗಿ ಹೇಳುತ್ತಿದ್ದೇನೆ–ನಾವು ೨೨೦ ಜನರು ಒಂದು ತಿಂಗಳ ಸಂಬಳವನ್ನು ನಿರ್ಗತಿಕರ ಕುಟುಂಬದವರಿಗೆ ಕೊಡೋಣ. ಅವರಿಗೆ ನೇರವಾಗಿ ಹಣವನ್ನೇ ಕೊಡುವುದು ಬೇಡ. ಅವರ ಪುನರ್ವಸತಿ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವ ಬಟ್ಟೆ ಹೊಲಿಸಿ ಕೊಡುವ ಮತ್ತು ಕಣ್ಣು ಕಾಣದೆ ಹೋದವರಿಗೆ ಚಿಕಿತ್ಸೆ ಮಾಡಿ ಪುನಃ ದೃಷ್ಟಿ ಬರುವಂತೆ ಮಾಡಲು ನಮ್ಮ ರಾಜ್ಯದಲ್ಲಿ ಅಥವಾ ನಮ್ಮ ರಾಷ್ಟ್ರದಲ್ಲಿ ಆಗದಿದ್ದರೆ ಬೇರೆ ರಾಷ್ಟ್ರಕ್ಕೆ ಕಳುಹಿಸುವುದಾದರೆ ಅದಕ್ಕಾಗುವ ಹಣವನ್ನೂ ಸಹ ಸರ್ಕಾರ ಭರಿಸಲು ನಮ್ಮ ಸರ್ಕಾರ ತಯಾರಿದೆ ಎಂದು ಹೇಳಬಯಸುತ್ತೇನೆ. ಇಪ್ಪತ್ತು ಸಾವಿರ ಅಥವಾ ಮೂವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಕಣ್ಣು ಬರುತ್ತದೆಂದು ಹೇಳಿದರೆ ಅದಕ್ಕೂ ನಾನು ಸಿದ್ಧ. ಈ ರೀತಿ ನಾವು ಕೆಲಸ ಮಾಡೋಣ. ಆಮೇಲೆ ಲೀಗಲ್ ಸೈಡಿನಲ್ಲೇ ನಮ್ಮಲ್ಲೇ ಒಂದು ಸಮಿತಿ ಮಾಡೋಣ. ಅದರಲ್ಲಿ ವಕೀಲರನ್ನೂ ಸೇರಿಸೋಣ. ಅಂತೂ ನಮ್ಮ ಪಕ್ಷದ ಮಟ್ಟದಲ್ಲಿ ಮಾಡೋಣ, ನಾವೆಲ್ಲ ಸೇರಿ ಇದನ್ನು ನಿಲ್ಲಿಸುವುದಕ್ಕೆ ಮತ್ತು ತಪ್ಪು ಮಾಡಿದವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ಶಿಕ್ಷೆಯ ಅವಧಿಯನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ಮಾಡೋಣ. ಆದರೆ, ಶಿಕ್ಷೆ ವಿಧಿಸುವಂಥ ಅಧಿಕಾರ ನ್ಯಾಯಾಧೀಶರಿಗೆ ಬಿಟ್ಟಿದ್ದು. ಎರಡು ವರ್ಷಗಳ ಶಿಕ್ಷೆ ಇರುವುದನ್ನು ಬೇಕಾದರೆ ಹತ್ತು ವರ್ಷವೆಂದು ಮಾಡೋಣ. ಆದರೆ ತೀರ್ಮಾನ ಮಾತ್ರ ನ್ಯಾಯಾಲಯಕ್ಕೆ ಬಿಟ್ಟಿದ್ದು ಅದರ ಬಗ್ಗೆ ಮಾತನಾಡುವ ಹಾಗಿಲ್ಲ, ಹೇಳುವ ಹಾಗಿಲ್ಲ ಮತ್ತು ಚರ್ಚೆ ಮಾಡುವ ಹಾಗಿಲ್ಲ. ಜೊತೆಗೆ ಇಂತಹ ಸಂದರ್ಭಗಳಲ್ಲಿ ಮುದ್ದು ಸಾಕ್ಷ್ಯ ಅಗತ್ಯವೇ ಅಥವಾ ಅಗತ್ಯವಿಲ್ಲವೇ ಎನ್ನುವುದರ ಬಗ್ಗೆಯೂ ಯೋಚನೆ ಮಾಡೋಣ. ಅಬ್ಕಾರಿ ವಿಭಾಗದವರು ಮತ್ತು ಪೋಲಿಸಿನವರು ದಾಳಿ ಮಾಡಿದಾಗ ಅವರು ಯಾವ ರೀತಿ ನಡೆದುಕೊಳ್ಳಬೇಕೆನ್ನುವುದರ ಬಗ್ಗೆಯೂ ಕಾನೂನು ಮಾಡೋಣ. ಇದೆಲ್ಲ ಚರ್ಚೆ ಮಾಡಿ ಮಾಡೋಣ. ಬೇಕಾದರೆ ಅಬ್ಕಾರಿ ಇಲಾಖೆ ಬೇಡಿಕೆ ಮೇಲಿನ ಚರ್ಚೆ ಬಂದಾಗ ಸಲಹೆ ಕೊಡಿ. ಪೋಲಿಸ್ ಇಲಾಖೆ ಬಂದಾಗಲೂ ಸಲಹೆ ಕೊಡಿ. I am prepared to hear. I am prepared to concede wherever possibilities are there. It is such an important issue, such a calamity that has taken place. So many deaths have taken place. ಆದರೆ, ಅವರಿಗೆ ಇದಾವುದೂ ಬೇಡ. ನಾವೇನು ಹೇಳಿದರೂ ಅವರದೊಂದೇ ಒಂದು ಅಂಶದ ಕಾರ್ಯಕ್ರಮ. ಅದಕ್ಕೆ ನಾವೇನು ಮಾಡೋಣ? ಅವರ ಒಂದು ಅಂಶದ ಕಾರ್ಯಕ್ರಮ ಇಟ್ಟುಕೊಂಡು ಮನೆಯಲ್ಲಿ ಬೆಂಕಿ ಕಾಯಿಸುತ್ತಾ ಕುಳಿತುಕೊಂಡಿರಲಿ. ನಾನಿದರ ಬಗ್ಗೆ ಯೋಚನೆ ಮಾಡುವುದಿಲ್ಲ. ಅದರ ಬಗ್ಗೆ ಚಿಂತೆಯೂ ನನಗಿಲ್ಲ. ನಮಗೆ ಸಮಾಜದ ಸಹಕಾರ, ಸಾರ್ವಜನಿಕ ಮುಖಂಡರ ಸಹಕಾರ, ರಾಜಕೀಯ ಮುಖಂಡರ ಸಹಕಾರ, ಪ್ರತಿಯೊಬ್ಬ ವಿದ್ಯಾವಂತರ ಸಹಕಾರ ಮತ್ತು ಎಲ್ಲ ಶಾಸಕರ ಸಹಕಾರ ಮತ್ತು ಸಲಹೆಗಳನ್ನು ನೀಡಲಿ. ಇದನ್ನು ನಿಲ್ಲಿಸಲು ಉಗ್ರ ರೂಪದ ಶಾಸನ ತರೋಣ. ಒಂದು ವೇಳೆ ನಮ್ಮ ಸಾಲಪ್ಪನವರು, ಹನುಮೇಗೌಡರು ಮತ್ತು ಆನಂದರಾಯರು ಹೇಳಿದ ಹಾಗೆ ನಮ್ಮ ರಾಜ್ಯಾಂಗ ಅವಕಾಶ ಕೊಡುವುದಾದರೆ ಯಾರು ಯಾರು ಕಳ್ಳಭಟ್ಟಿ ತಯಾರ

ಮಾಡುತ್ತಾರೆ ಅಂಥವರಿಗೆ ೫೦ ರಿಂದ ೧೦೦ ಛಡಿ ಏಟುಗಳನ್ನು ನೀಡಲು ಕಾನೂನು ಮಾಡುವುದಕ್ಕೂ ತಯಾರಾಗಿದ್ದೇನೆ. ವಿಧಾನಸೌಧದ ಬಳಿ ನಿಲ್ಲಿಸಿ ಛಡಿ ಏಟು ಕೊಡುವುದಕ್ಕೂ ಸಿದ್ಧನಾಗಿದ್ದೇನೆ. ಆದರೆ ಈಗಿನ ಕಾನೂನು ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಕೆಲವು ಸದಸ್ಯರು ಇಂಥವರನ್ನು ಗಡಿಪಾರು ಮಾಡಿ ಎಂದು ಹೇಳಿದರು. ಆದರೆ, ಇಂಥ ಅಪರಾಧಿಗಳಿಗೆ ಗಡಿಪಾರು ಮಾಡಲು ಯಾವ ನ್ಯಾಯಾಲಯವೂ ಒಪ್ಪುವುದಿಲ್ಲ. ಅದು ಬಹಳ ಕಷ್ಟ. ಒಂದೆರಡು ಗಡಿಪಾರು ಪ್ರಕರಣಗಳಲ್ಲಿ ಸರ್ಕಾರ ಪ್ರಯತ್ನ ಮಾಡಿದ್ದರೂ ಅದಿನ್ನೂ ನ್ಯಾಯಾಲಯದಿಂದ ಆಗಿಲ್ಲ. ಆದರೂ, ಇದನ್ನೂ ಯೋಚನೆ ಮಾಡೋಣ. ಇದೇ ರೀತಿ ಮಾಡಬೇಕೆನ್ನುವುದು ಸರ್ಕಾರದ ಪ್ರತಿಷ್ಠೆ ಇಲ್ಲ. ಇದು ಬಡವರ ಅಳಿವು ಮತ್ತು ಉಳಿವಿನ ಪ್ರಶ್ನೆ. ಇದರ ಬಗ್ಗೆ ಎಲ್ಲರೂ ಕುಳಿತು ಚರ್ಚೆ ಮಾಡಿ ಒಳ್ಳೆಯದನ್ನು ಮಾಡುವುದಕ್ಕೆ ತಯಾರಾಗಿದ್ದೇನೆ.

ಮತ್ತೆ ಕೆಲವು ಸದಸ್ಯರು ಮಾತನಾಡುತ್ತಾ, ಆಸ್ಪತ್ರೆಯಲ್ಲಿ ಬೇಕಾದಷ್ಟು ಶವಗಳ ಮರಣೋತ್ತರ ಪರೀಕ್ಷೆಯಾಗಿಲ್ಲವೆಂದು ಶಂಕೆಯನ್ನು ವ್ಯಕ್ತ ಮಾಡಿದರು. ಆಸ್ಪತ್ರೆಗೆ ನಾನು ಮತ್ತೆ ಭೇಟಿ ಕೊಟ್ಟಿದ್ದೆ. ಅಲ್ಲಿ ಒಂದು ಶವವೂ ಬಾಕಿ ಇಲ್ಲ. ಎಲ್ಲ ಶವಗಳ ಸಂಸ್ಕಾರವೂ ಮುಗಿದಿದೆ ನಾನೇ ನೋಡಿಕೊಂಡು ಬಂದಿದ್ದೇನೆ. ಕೆಲವರು ಹಾರಿಕೆ ಸುದ್ದಿ ಹರಡುವವರಿರುತ್ತಾರೆ. ಒಂದು ಸಾವಿರ ಜನ ಸತ್ತುಹೋಗಿದ್ದಾರೆಂದು ವರ್ತಮಾನ ಬಂದಿದೆ. ಬೇರೆ ಬೇರೆ ಕಾರಣದಿಂದ ಸತ್ತಿರಬಹುದು. ಊರಲ್ಲಿ ಸತ್ತಿರುವವರೆಲ್ಲಾ ಈ ಕಾರಣದಿಂದಲೇ ಸತ್ತು ಹೋಗಿದ್ದಾರೆಂದು ಹೇಳುವುದು ಬೇಡ. ಇವತ್ತು ಅವರೆಲ್ಲಾ ಸತ್ತುಹೋಗಿದ್ದಕ್ಕೆ, ನಮಗೆ ಬರತಕ್ಕ ಮತಗಳು ಹೋದವಲ್ಲ ಎನ್ನುವ ಯೋಚನೆ ಇದೆ ; ಕಾರ್ಪೊರೇಷನ್ ಎಲೆಕ್ಷನ್ ಬಂತು, ನಮಗೆ ೩೦೦–೪೦೦ ಓಟುಗಳು ಹೋಯಿತು ಎನ್ನುವ ಯೋಚನೆ ಇದೆ. ರಾಜಕೀಯವಾಗಿಯೂ ಯೋಚನೆ ಇದೆ : ದುರ್ಘಟನೆ ನಡೆದಿದೆ, ಸಹಾಯ ಮಾಡಬೇಕೆನ್ನುವ ಯೋಚನೆ ಇದೆ. ನೊಂದಿರತಕ್ಕವರಿಗೆ ಸಹಾಯ ಮಾಡೋಣ ಗಾಬರಿಯಾಗಬೇಕಾಗಿಲ್ಲ ; ಶಾಸಕರಾದ ತಮಗೆ ಪೂರ್ತಿಯಾದ ಸ್ವಾತಂತ್ರ್ಯ ಇದೆ ; ತಾವು ಆಸ್ಪತ್ರೆಗಳಿಗೆ ಹೋಗಿ ನೋಡಿಕೊಂಡು ಬರಬಹುದು. ಆಸ್ಪತ್ರೆಯಲ್ಲಿರತಕ್ಕ ಹೆಣಗಳ ಬಗ್ಗೆ ವೈದ್ಯರು ಸರಿಯಾದ ಕ್ರಮ ತೆಗೆದುಕೊಳ್ಳದೇ ಇದ್ದರೆ ನನಗೆ ಫೋನ್ ಮಾಡಿ ; ಆರೋಗ್ಯ ಮಂತ್ರಿಗಳಿಗೆ ಫೋನ್ ಮಾಡಿ ; ಇವತ್ತು ಆಸ್ಪತ್ರೆಯಲ್ಲಿ ಪ್ರತಿಯೊಂದು ಹೆಣವನ್ನು ಪೋಸ್ಟ್ ಮಾರ್ಟಮ್ ಏತಕ್ಕೆ ಮಾಡಬೇಕು ? ಇದರ ಉದ್ದೇಶವೇನು ? ಎಲ್ಲವನ್ನೂ ನೋಡಬೇಕಾಗುತ್ತದೆ. We must pay compliments to the Health Department, Police Department and Excise Department, because day and night they have worked. I have seen with my own eyes. Forgetting their family, forgetting their health and forgetting everything right from a common sweeper to nurses, compounders, doctors and surgeons have worked ...... ಮಾನ್ಯ ಅಧ್ಯಕ್ಷರೇ ಎಷ್ಟೋ ಸಾರಿ ಚರ್ಚೆಗಳಾಗಿವೆ, ಖಾಸಗಿ ಆಸ್ಪತ್ರೆಗಳಲ್ಲಿ ಒಳ್ಳೆಯ ಚಿಕಿತ್ಸೆ ಸಿಗುತ್ತದೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುವುದಿಲ್ಲವೆಂದು ಹೇಳುತ್ತಾರೆ. ಖಾಸಗಿ ಆಸ್ಪತ್ರೆಗಳಲ್ಲಿ ಯಾರಿಗೆ ಸಿಗುತ್ತೆ ? ದೊಡ್ಡದೊಡ್ಡವರಿಗೆ ಸಿಗುತ್ತೆ ; ಹಣ ಕೊಡತಕ್ಕವರಿಗೆ ಸಿಗುತ್ತೆ ; ಸರ್ಕಾರೀ ಆಸ್ಪತ್ರೆಗಳಲ್ಲಿ ವೈದ್ಯರುಗಳು ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆಂಬುದನ್ನು ನೋಡಬೇಕಾದರೆ, ಇಂಥ ಘಟನೆಗಳು ಸರ್ಕಸ್ ಘಟನೆಗಳು ನಡೆದಂತ ಸಂದರ್ಭದಲ್ಲಿ ಹೋಗಿ ನೋಡಬೇಕು. ಒಂದೊಂದು ಸಾರಿ ೧೦೦–೧೫೦ ಹೆಣಗಳನ್ನು ಆಪರೇಷನ್ ಮಾಡಬೇಕಾಗುತ್ತೆ ; ಔಷಧಿ ಕೊಡಬೇಕಾಗುತ್ತೆ ; ಎಷ್ಟು ಕಷ್ಟ ಇದೆ ಎನ್ನುವುದು ಗೊತ್ತಾಗುತ್ತದೆ. ಎಷ್ಟೇ ಕಷ್ಟ ಇದ್ದರೂ ಕೂಡ ನಗುಮುಖದಿಂದ, ಸಂತೋಷದಿಂದ, ಆಸ್ಪತ್ರೆಯ ಸಿಬ್ಬಂದಿಯವರು ಕೆಲಸ ಮಾಡುತ್ತಿರುವುದನ್ನು ನೋಡಬಹುದು. ಕೆಲವು ಆಸ್ಪತ್ರೆಗಳಲ್ಲಿ ಔಷಧಿ ಇಲ್ಲದೇ ಇರಬಹುದು. ಇಂಥ ಅಪಘಾತಗಳು ಆದಾಗ, ಸನ್ನಿವೇಶಗಳು ಬಂದಾಗ ಸರ್ಕಾರೀ ಆಸ್ಪತ್ರೆಯ ಸಿಬ್ಬಂದಿಯವರು ಸಾಮೂಹಿಕವಾಗಿ ಕೆಲಸ ಮಾಡುತ್ತಾರೆ. ಮೇಲಿನ ಅಧಿಕಾರಿಗಳಿಂದ ಹಿಡಿದು ಕೆಳಗಿನ ಸಿಬ್ಬಂದಿಯವರೆಗೂ ಸಾಮೂಹಿಕವಾಗಿ ಕೆಲಸ ಮಾಡುತ್ತಾರೆ. Whether it is Police Department, whether it is Excise Department and whether it is Health Department, we and the House must pay compliments to them. We can announce ex-gratia to such people who are getting poor salary. ಒಂದು ತಿಂಗಳ ಸಂಬಳವನ್ನು ಇವರಿಗೆ ಕೊಡಬೇಕಾಗುತ್ತೆ. ಇವತ್ತು ಅವರು

ಅಷ್ಟು ಶ್ರಮದಿಂದ ಕೆಲಸ ಮಾಡಿದ್ದಾರೆ. ಸರ್ಕಾರ ಎಲ್ಲವನ್ನೂ ಗಮನಿಸಿದೆ ; ಮುಂದೆ ಈ ರೀತಿ ಆಗದ ಹಾಗೆ ಸರ್ವ ಪ್ರಯತ್ನವನ್ನೂ ಮಾಡೋಣ. ತಿರುಪತಿಗೆ, ಮಂತ್ರಾಲಯಕ್ಕೆ ಹೋಗುವಾಗ ಬಸ್ಸು ಬಿದ್ದು ಸಾಯುತ್ತಾರೆ ; ವಿಮಾನ ಹೋಗುವಾಗ ಬಿದ್ದು ಹೋಗುತ್ತೆ, ರೈಲು ಹೋಗುವಾಗ ಬಿದ್ದು ಸಾಯುತ್ತಾರೆ. ಇನ್ನು ಮುಂದೆ ಈ ರೀತಿ ಆಗುವುದಿಲ್ಲವೆಂದು ನಾನು ಭರವಸೆ ಕೊಡುವುದಕ್ಕೆ ದೇವರಲ್ಲ ; ವಸಿಷ್ಠ, ವಿಶ್ವಾಮಿತ್ರರಲ್ಲ. ಸಮಾಜದಲ್ಲಿರತಕ್ಕ ಸಮಾಜ ಸುಧಾರಕರು, ಕಾರ್ಯಕರ್ತರು, ಸಿಕ್ಕಿಸಿಕ್ಕಿದ ಕಡೆಯಲ್ಲಿ ಕಂಡಕಂಡಲ್ಲಿ ಕಳ್ಳಭಟ್ಟಿ ಕುಡಿಯಬೇಡಿ ಎಂದು ಬುದ್ಧಿ ಹೇಳಿ ; ಮನುಷ್ಯ ಪ್ರಯತ್ನ ಮೀರಿ ನಡೆದರೆ ನಾವು, ನೀವು ಜವಾಬ್ದಾರರಲ್ಲ. ಸರ್ವ ಪ್ರಯತ್ನವನ್ನೂ ಮಾಡೋಣ Government has taken every care and I am happy to announce, the families of the deceased people are very very happy, the society is happy and we have taken care and Government at best what it can do has been done.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಮದ್ಯಪಾನ ಆಳವಾಗಿ ಬೇರೂರಿದೆ. ಇದು ಮತ್ತೆ ಪುನರಾವರ್ತನೆಯಾಗದಂತೆ ಕಾನೂನು ಬದಲಾವಣೆಯನ್ನಾದರೂ ಮಾಡಿ, ಒಂದು ಸಮಿತಿಯನ್ನಾದರೂ ನೇಮಕ ಮಾಡೋಣವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಸಮಿತಿಯಲ್ಲಿ ಸಮಾಜ ಸುಧಾರಕರೂ, ಕಾನೂನು ತಜ್ಞರೂ, ಇರುವಂತ ಸಮಿತಿಯನ್ನು ರಚನೆ ಮಾಡುತ್ತೀರಾ ?

ಅಧ್ಯಕ್ಷರು.—ಬೇಕಾದರೆ ವಿಚಾರ ಮಾಡೋಣವೆಂದು ಹೇಳಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಸಮಿತಿ ಅಗತ್ಯ ಇದೆ.

ಶ್ರೀ ಆರ್. ಗುಂಡೂರಾವ್.—ನ್ಯಾಯಾಂಗ ತನಿಖೆಗೆ ಏರ್ಪಾಡು ಮಾಡಿದ್ದೇವೆ. ಅವರು ಏನು ಸಲಹೆ ಕೊಡುತ್ತಾರೆಂದು ನೋಡಿಕೊಂಡು ಬೇಕಾದರೆ, ಮಾಡೋಣ

SRI K. BHASKAR NAIDU.—The Hon'ble Chief Minister has explained in detail the tragedy and he has very well said what we should do and how we should come to the help of the poor people. In the process, I think, the officers have been let down very badly. We know, particularly, I do not know his name, the Excise Commissioner, I have heard, is a very good officer. Unfortunately he had a shock in the morning. We must feel sorry for it. Let not the officers feel that most of us have condemned them. We don't have that intention. I would like to say that we have a team of able officers and the Excise Commissioner is a very good officer.

FINANCIAL BUSINESS

Discussion and Voting of Demands for Grants

Demands 6 and 21

† ಶ್ರೀ ಎಂ. ಮಾದಯ್ಯ.—(ಸಂತೇಮಾರನಹಳ್ಳಿ) ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರು ಈ ಸಾಲಿಗೆ ಮಂಡಿಸಿಗತಕ್ಕ ಬೇಡಿಕೆಯನ್ನು ಸ್ವಾಗತಿಸುತ್ತಾ, ಕೆಲವು ವಿಷಯಗಳನ್ನು ತಮ್ಮ ಮೂಲಕ ಸಭೆಯ ಅವಗಾಹನೆಗೆ ತರುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಅರಣ್ಯ ಒಂದು ನಾಡಿನ ಶ್ರೇಯಸ್ಸಿಗೆ ಎಷ್ಟು ಪ್ರಾಮುಖ್ಯ ಎನ್ನುವುದನ್ನು ಎಲ್ಲರೂ ತಿಳಿದುಕೊಂಡಿದ್ದಾರೆ. ತಿಳಿಯದೇ ಇರತಕ್ಕವರು ಬಹಳ ವಿರಳ ಅಂದರೆ ತಪ್ಪಾಗಲಾರದು. ನಾಡಿಗೆ ನಿಸರ್ಗದತ್ತವಾದ ಸಂಪತ್ತು ಅರಣ್ಯ. ಒಂದು ಮನೆಗೆ ಮೇಲ್ಛಾವಣಿ ಎಷ್ಟು ಮುಖ್ಯವೋ, ಒಂದು ನಾಡಿಗೆ ಕಾಡೂ ಕೂಡ ಅಷ್ಟೇ ಮುಖ್ಯ.